ಕನ್ನಡದ ಪ್ರಥಮ ಮಹಿಳಾ ಹಾಸ್ಯ ಸಾಹಿತಿ

ಟಿ. ಸುನಂದಮ್ಮ

ಬದುಕು ಬರಹ ಸಿದ್ಧಿ ಸಾಧನೆ

– ಎಂ. ನರಸಿಂಹಮೂರ್ತಿ



ಕನ್ನಡದ ಪ್ರಥಮ ಮಹಿಳಾ ಹಾಸ್ಯ ಸಾಹಿತಿ

ಟಿ. ಸುನಂದಮ್ಮ

ಬದುಕು ಬರಹ ಸಿದ್ಧಿ ಸಾಧನೆ

– ಎಂ. ನರಸಿಂಹಮೂರ್ತಿ



ಪ್ರಥಮ ಮಹಿಳಾ ಹಾಸ್ಯ ಸಾಹಿತಿ – ಟಿ. ಸುನಂದಮ್ಮ ನವರ ಬದುಕು ಬರಹ ಸಿದ್ಧಿ ಸಾಧನೆ

ಲೇಖಕರು : ಎಂ. ನರಸಿಂಹಮೂರ್ತಿ

ಪ್ರಕಾಶಕರು : ಶ್ರೀ ಗಣೇಶ ಚಾರಿಟಬಲ್ ಟ್ರಸ್ಟ್
11, 1ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ,
ಪೂರ್ಣಪ್ರಜ್ಞ ಲೇಔಟ್, ಬನಶಂಕರಿ 3ನೇ ಹಂತ,
ಬೆಂಗಳೂರು – 560085

ಪ್ರಥಮ ಮುದ್ರಣ : 2023

ಪುಟಗಳು : iv + 60 = 64

ಪ್ರತಿಗಳು : 500

ಆಕಾರ : 1/8 ಡೆಮ್ಮಿ


ಪೇಪರ್ : 70 ಜಿಎಸ್‌ಎಂ ಮ್ಯಾಪ್ಲಿಥೋ

ಬೆಲೆ : ರೂ. 50/–

ಮುಖಪುಟ ವಿನ್ಯಾಸ : ಚಂದ್ರಶೇಖರ ವುಣ್ಣಿಮನಿ

ಮುದ್ರಕರು : ರಚನಾ ಕ್ರಿಯೇಶನ್ಸ್, ಬನಶಂಕರಿ 1ನೇ ಹಂತ, ಬೆಂಗಳೂರು
ಮೊ : 9448461085

ಲೇಖಕರ ನುಡಿ...



ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ 75 ಸಂವತ್ಸರಗಳನ್ನು ಪೂರೈಸಿ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುವ ಸಂದರ್ಭದಲ್ಲಿ ಹಲವಾರು ಉಲುಚುಕಮ್ಮೆ ಸಾಧಕರ ಬಗ್ಗೆ ಪರಿಚಯಾತ್ಮಕ ಪುಸ್ತಕಗಳನ್ನು ಬಿಡುಗಡೆ ಮಾಡುವ ಯೋಜನೆ ಇತ್ತು. ಆ ಸಂದರ್ಭದಲ್ಲಿ ನನಗೆ ಶ್ರೀಮತಿ ಟಿ. ಸುನಂದಮ್ಮನವರ ಬಗ್ಗೆ ಬರೆಯಲು ಅವಕಾಶ ಸಿಕ್ಕಿತ್ತು. ಇದಕ್ಕೆ ಮುಖ್ಯ ಕಾರಣ ಶ್ರೀಮತಿ ಟಿ. ಸುನಂದಮ್ಮ ನನ್ನ ಸಹೋದರಿ ಸಂಬಂಧಿ. ಅಂದರೆ ನನ್ನ ದೊಡ್ಡಮ್ಮನ ಮಗಳು. ಈ ಅವಕಾಶವನ್ನು ನಾನು ಬಹಳ ಸಂತೋಷದಿಂದ ಸ್ವೀಕರಿಸಿದೆ. ಅದರೆ ಆ ಸಂದರ್ಭದಲ್ಲಿ ಪುಸ್ತಕ ಬಿಡುಗಡೆ ಆಗಲಿಲ್ಲ. ಈಗ ಟಿ. ಸುನಂದಮ್ಮ ಸಾಹಿತ್ಯ ಪ್ರತಿಷ್ಠಾನದಿಂದ ಬಿಡುಗಡೆ ಆಗುತ್ತಿರುವ ಟಿ. ಸುನಂದಮ್ಮ ಕಥಾ ಸಂಕಲನದಿಂದ ಆಯ್ದ ಹಾಸ್ಯಕತೆಗಳ ಮೂರನೆ ಸಂಪುಟ ಬಿಡುಗಡೆ ಆಗುತ್ತಿದೆ. ಅದರೊಟ್ಟಿಗೆ ಈ ಪರಿಚಯ ಪುಸ್ತಕ ಕೂಡ ಬಿಡುಗಡೆಯ ಭಾಗ್ಯ ಪಡೆಯುತ್ತಿದೆ.

ಸುನಂದಮ್ಮನವರ ಪರಿಚಯ ಹಿಂದಿನ ತಲೆಮಾರಿನ ಬಹಳಷ್ಟು ಮಂದಿಗೆ ಇದೆ. ಕೊರವಂಜಿ, ಸುಧಾ ಪುಸ್ತಕಗಳಲ್ಲಿ ಹಾಸ್ಯ ಬರಹಗಳ ಮುಖಾಂತರ ಜನರನ್ನು ರಂಜಿಸಿದ್ದಾರೆ. ಸರಸು–ಮೈಲಾರಯ್ಯ ರೇಡಿಯೋ ಕಾರ್ಯಕ್ರಮಗಳಿಂದ ಜನರನ್ನು ಗೆದ್ದಿದ್ದಾರೆ.

ಅವರ ಬಾಲ್ಯ, ಶಿಕ್ಷಣ, ಸಂಸಾರ ಹಾಗೂ ಕೃತಿಗಳ ಬಗ್ಗೆ ಬಹಳಷ್ಟು ಜನ ತಿಳಿದಿದ್ದಾರೆ. ಆದರೆ ಸಮಕಾಲೀನರೊಂದಿಗಿನ ಅವರ ಒಡನಾಟ, ಸ್ವಾರಸ್ಯಕರ ಘಟನೆಗಳು ಎಲ್ಲೂ ದಾಖಲಾಗಿಲ್ಲ, ಮತ್ತು ಅವರ ಒಡನಾಡಿಗಳು ಇಂದು ಯಾರೂ ಇಲ್ಲ. ಹಾಗಾಗಿ ಅವರನ್ನು ಕಂಡಂತಹ, ಹಾಗೂ ಸ್ವಲ್ಪ ಕಾಲ ಅವರೊಂದಿಗೆ ಬೆರೆತಿದ್ದ ಕೆಲವರು ತಮ್ಮ ಅನುಭವಗಳನ್ನು ಹಂಚಿ ಕೊಂಡಿದ್ದಾರೆ. ಅದನ್ನು ಈ ಪುಸ್ತಕದಲ್ಲಿ ಮುದ್ರಿಸಲಾಗಿದೆ. ಮುಖ್ಯವಾಗಿ ಡಾ.ಶಾಂತಾನಾಗರಾಜ್, ಡಾ.ವಸುಂಧರ ಭೂಪತಿ, ಭುವನೇಶ್ವರಿ ಹೆಗಡೆ ಅವರಿಗೆ ನನ್ನ ಅನೇಕ ಧನ್ಯವಾದಗಳು.

ಸುನಂದಮ್ಮನವರಿಗೆ ಸಾಕಷ್ಟು ಪ್ರಶಸ್ತಿ, ಪುರಸ್ಕಾರಗಳು ಸಂದಿವೆ. ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಹೀಗೆ ಸಾಕಷ್ಟು ಪ್ರಶಸ್ತಿಗಳು ಬಂದಿದ್ದರೂ ಕೂಡ ಒಬ್ಬ ಪ್ರಪ್ರಥಮ ಮಹಿಳಾ ಸಾಹಿತಿಗೆ ಸೂಕ್ತ ಗೌರವ ನೀಡಿಲ್ಲವೆಂದು ಭಾಸವಾಗುತ್ತಿದೆ. ಕನಿಷ್ಠ ಪಕ್ಷ ಅವರು ಸ್ವಂತ ಮನೆ ಕಟ್ಟಿಕೊಂಡು ಹಲವಾರು ವರ್ಷ ಬದುಕಿ ಬಾಳಿದ (ಅವರ ಮನೆ ನಂ.74, 2ನೇ ಕ್ರಾಸ್, ಗಾಯತ್ರಿದೇವಿ ಪಾರ್ಕ್ ಎಕ್ಸ್‌ಟೆನ್ಷನ್, ವೈಯ್ಯಾಲಿಕಾವಲ್ ಬೆಂಗಳೂರು– 560003 ವಿಳಾಸದ) ರಸ್ತೆಗೆ ಕನ್ನಡ ಮಹಿಳಾ ಹಾಸ್ಯ ಸಾಹಿತಿ ಟಿ. ಸುನಂದಮ್ಮ ರಸ್ತೆ ಅಂತ ನಾಮಕರಣದ ಮಾಡುವುದು ಅತ್ಯಂತ ಸೂಕ್ತ ಮತ್ತು ಇದು ಮಾಡಲೇ ಬೇಕಾದ ಕೆಲಸ.

ಈ ಕೃತಿಯ ಪ್ರಕಟಣೆಗೆ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟ ಶ್ರೀಮತಿ ಶ್ರೀಲತ ಶ್ರೀನಾಥ್ ಅವರಿಗೆ ಅತ್ಯಂತ ಕೃತಜ್ಞತೆಗಳು. ನನ್ನ ಕೈ ಬರಹವನ್ನು ಪರಿಷ್ಕರಿಸಿ ಮುದ್ರಣಕ್ಕೆ ಅನುವು ಮಾಡಿಕೊಟ್ಟ ಹಾಗೂ ಮುನ್ನುಡಿಯನ್ನು ಬರೆದು ಕೊಟ್ಟ ಖ್ಯಾತ ಲೇಖಕರಾದ ಶ್ರೀ ಎನ್. ಆನಂದರಾಮರಾವ್ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಂದವಾಗಿ ಡಿಟಿಪಿ ಮತ್ತು ಮುಖಪುಟ ವಿನ್ಯಾಸ ಮಾಡಿ ಅಚ್ಚುಕಟ್ಟಾಗಿ ಮುದ್ರಿಸಿದ ರಚನಾ ಕ್ರಿಯೇಶನ್ಸ್‌ನ ಶ್ರೀ ಚಂದ್ರಶೇಖರ್ ವುಣ್ಣಿಮನಿ ಅವರಿಗೆ ನನ್ನ ಕೃತಜ್ಞತೆಗಳು.

ಎಂ. ನರಸಿಂಹಮೂರ್ತಿ

ಮುನ್ನುಡಿ



ಶ್ರೀಮತಿ. ಟಿ. ಸುನಂದಮ್ಮನರು ಕನ್ನಡದ ಮಹಿಳಾ ಸಾಹಿತಿಗಳಲ್ಲಿ ಅಗ್ರ ಗಣ್ಯರು. ಕಥೆ ಕಾದಂಬರಿಗಳಲ್ಲಿ ಆಸಕ್ತರಾಗಿದ್ದ ಕನ್ನಡದ ಓದುಗರಿಗೆ ತಮ್ಮ ತಿಳಿ ಹಾಸ್ಯದ ಲೇಖನಗಳ ಮೂಲಕ ಹಾಸ್ಯ ಸಾಹಿತ್ಯದ ಕಡೆಗೆ ಆಕರ್ಷಿತರಾಗುವಂತೆ ಮಾಡಿದ ಶ್ರೇಯಸ್ಸು ಟಿ. ಸುನಂದಮ್ಮನವರದು. ಮೊದಲಿಗೆ ಅವರು ಬರೆದ "ಹೂವು" ಎಂಬ ಕವನವು ಮಕ್ಕಳ ಪುಸ್ತಕದಲ್ಲಿ ಪ್ರಕಟವಾಗುವುದರೊಂದಿಗೆ ಅವರ ಸಾಹಿತ್ಯ ರಚನೆ ಬಾಲ್ಯದಲ್ಲಿಯೇ ಆರಂಭವಾಯಿತು. ನಂತರ ವಿದ್ಯಾರ್ಥಿದೆಸೆಯಲ್ಲಿಯೇ ಅವರು ಬರೆದ ಕಥೆಗಳು ಅಂದಿನ ಪ್ರಮುಖ ದಿನ ಪತ್ರಿಕೆ ಹಾಗೂ ವಾರ ಪತ್ರಿಕೆಗಳಲ್ಲಿ ಪ್ರಕಟವಾದುವು. ಹಾಸ್ಯಕ್ಕಾಗಿಯೇ ಮೀಸಲಾದ ಕೊರವಂಜಿ ಪತ್ರಿಕೆ ಪ್ರಾರಂಭವಾದಾಗ ಅದರಲ್ಲಿ ಅವರು ಬರೆದ ಹಾಸ್ಯಲೇಖನವೊಂದು ಪ್ರಕಟವಾಗಿ ಓದುಗರ ಮೆಚ್ಚುಗೆ ಗಳಿಸಿ ಅವರ ಹಾಸ್ಯ ಸಾಹಿತ್ಯ ರಚನೆಯನ್ನು ಮುಂದುವರೆಸಲು ನಾಂದಿಯಾಯಿತು. ಅಂದಿನಿಂದ ಅವರು ಹಾಸ್ಯ ಸಾಹಿತ್ಯ ರಚನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು ಹಾಗೂ ಪ್ರಸಿದ್ಧರಾದರು. ಕೇವಲ ಸಾಹಿತ್ಯ ರಚನೆಯಲ್ಲಿಯೇ ಅಲ್ಲದೆ ಸಾರ್ವಜನಿಕ ಜೀವನದಲ್ಲಿಯೂ ಅತೀವ ಆಸಕ್ತಿ ವಹಿಸುತ್ತಿದ್ದ ಅವರು ಕರ್ನಾಟಕ ಲೇಖಕಿಯರ ಸಂಘದ ಸ್ಥಾಪಕ ಆಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಇಂದಿನ ಪೀಳಿಗೆಯ ಸಾಹಿತ್ಯಾಸಕ್ತರಿಗೆ ಸುನಂದಮ್ಮನವರ ಬದುಕು ಬರಹಗಳನ್ನು ಪರಿಚಯಿಸುವ ಸದಾಶಯದಿಂದ ಅವರ ಸೋದರ ಬಂಧು ಶ್ರೀಯುತ ಎಂ. ನರಸಿಂಹಮೂರ್ತಿಯವರು ಈ ಕಿರು ಪುಸ್ತಕವನ್ನು ಪ್ರಕಟಿಸುತ್ತಿದ್ದಾರೆ.

ಪ್ರಸಿದ್ಧ ಕೈಗಾರಿಕೋದ್ಯಮಿಗಳೂ, ಸುಸಂಸ್ಕೃತರೂ ಹಾಗೂ ಸಾಹಿತ್ಯಾಭಿಮಾನಿಯೂ ಆಗಿರುವ ಶ್ರೀ ಎಂ.ನರಸಿಂಹಮೂರ್ತಿಯವರು ಟಿ. ಸುನಂದಮ್ಮ ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪಿಸಿ ತನ್ಮೂಲಕ ಸುನಂದಮ್ಮನವರ ಸಮಗ್ರ ಸಾಹಿತ್ಯವನ್ನು ಇಂದಿನ ಜನಾಂಗಕ್ಕೆ ತಲುಪಿಸಲು ಉದ್ದೇಶಿಸಿದ್ದಾರೆ. ಈ ಯೋಜನೆಯಂತೆ ಈಗಾಗಲೇ ಎರಡು ಸಂಪುಟಗಳು ಪ್ರಕಟವಾಗಿದ್ದು ಈಗ ಮೂರನೆಯ ಸಂಪುಟ ಪ್ರಕಟವಾಗುತ್ತಿದೆ. ಸುನಂದಮ್ಮನವರ ಹೆಸರಿನಲ್ಲಿ ಪ್ರತಿವರ್ಷ ಕನ್ನಡದ ಒಬ್ಬ ಲೇಖಕಿಗೆ ಪ್ರಶಸ್ತಿಯನ್ನು ನೀಡುವ ಯೋಜನೆಯನ್ನೂ ಪ್ರತಿಷ್ಠಾನವು ಹಾಕಿಕೊಂಡಿದೆ. ಅದರಂತೆ 2019ರ ಸಾಲಿನ ಪ್ರಶಸ್ತಿಯನ್ನು ಕನ್ನಡದ ಖ್ಯಾತ ಲೇಖಕಿ ವೈದೇಹಿಯವರಿಗೆ ನೀಡಲಾಗಿದೆ. ಹಾಗೆಯೇ 2022ನೇ ಸಾಲಿನ ಪ್ರಶಸ್ತಿಯನ್ನು ಸುನಂದಮ್ಮನವರ ಹಾಸ್ಯ ಸಾಹಿತ್ಯ ಪರಂಪರೆಯನ್ನು ಮುನ್ನಡೆಸಿಕೊಂಡು ಬರುತ್ತಿರುವ ಹಾಸ್ಯ ಲೇಖಕಿ ಶ್ರೀಮತಿ ಭುವನೇಶ್ವರಿ ಹೆಗಡೆರವರಿಗೆ ನೀಡಲಾಗುತ್ತಿದೆ.

ನರಸಿಂಹ ಮೂರ್ತಿಯವರ ಈ ಸಾಹಿತ್ಯ ಕೈಂಕರ್ಯ ಹೀಗೆಯೇ ಮುಂದುವರೆಯಲಿ ಎಂದು ಹಾರೈಸೋಣ.

ಎನ್. ಆನಂದ ರಾಮ ರಾವ್

ಟಿ. ಸುನಂದಮ್ಮ

ಟಿ. ಸುನಂದಮ್ಮನವರು ಕನ್ನಡದ ಮಹಿಳಾ ಹಾಸ್ಯ ಸಾಹಿತಿಗಳಲ್ಲಿ ಅಗ್ರಗಣ್ಯರು. ಅವರು ಕೇವಲ ಒಂಭತ್ತು ವರ್ಷದವರಾಗಿದ್ದಾಗಲೇ ಪ್ರಥಮ ಕವನ 'ಹೂವು' ಮಕ್ಕಳ ಪುಸ್ತಕದಲ್ಲಿ ಪ್ರಕಟವಾಗಿತ್ತು. ಅಲ್ಲಿಂದ ಮುಂದೆ ಅವರು ಹಲವಾರು ದಿನಪತ್ರಿಕೆ ವಾರಪತ್ರಿಕೆಗಳಿಗೆ ಕಥೆಗಳನ್ನು ಬರೆಯತೊಡಗಿ ತಮ್ಮ ಹಾಸ್ಯ ಬರಹಗಳಲ್ಲಿ ಜನ ಮೆಚ್ಚುಗೆ ಪಡೆದರು.

ಸುನಂದಮ್ಮನವರು ಜನಿಸಿದ್ದು 08–08–1917 ರಂದು. ತಂದೆ ಟಿ. ರಾಮಯ್ಯ, ತಾಯಿ ನಾಗಮ್ಮ. ವಿದ್ಯಾವಂತ, ಸುಸಂಸ್ಕೃತ ಹಾಗೂ ಶ್ರೀಮಂತ ಮನೆತನ. ಇವರಿಗೆ ಇಬ್ಬರು ತಮ್ಮಂದಿರು. ಮತ್ತು ಒಬ್ಬ ತಂಗಿ. ಟಿ. ರಾಮಯ್ಯನವರು ಅಂದಿನ ಕಾಲದ ಬಿ.ಎ. ಆನರ್ಸ್ ಪರೀಕ್ಷೆಯಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆಯಾಗಿ ಬಂಗಾರದ ಪದಕ ಗಳಿಸಿದ್ದರು. ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ರ್‍ಯಾಂಕ್ ಗಳಿಸಿ ಅಸಿಸ್ಟೆಂಟ್ ಕಮಿಷನರ್ ಆಗಿ ತಮ್ಮ ಸೇವೆಯನ್ನು ಪ್ರಾರಂಭಿಸಿದರು. ಕ್ರಮೇಣ ತಮ್ಮ ಸೇವಾವಧಿಯಲ್ಲಿ ಬಡ್ತಿ ಪಡೆದರು. ಅಂದಿನ ಆಳುವ ದೊರೆಗಳ ಮೆಚ್ಚುಗೆಯನ್ನು ಗಳಿಸಿದ್ದರು.

ತಾಯಿ ನಾಗಮ್ಮನವರೂ ಸಹ ಅಂದಿನ ಕಾಲಕ್ಕೆ ತಕ್ಕಂತೆ ಸಾಕಷ್ಟು ವಿದ್ಯಾವಂತ ರಾಗಿದ್ದರಲ್ಲದೇ ವಿವೇಚನಾಪರ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿದ್ದರು.

ತಂದೆ ತಾಯಿಗಳಿಬ್ಬರು ಮಕ್ಕಳಿಗೆ ಸೂಕ್ತ ವಿದ್ಯಾಭ್ಯಾಸ ಕೊಡಿಸಿದ್ದೇ ಅಲ್ಲದೆ ಪಠ್ಯೇತರ ಶಿಕ್ಷಣಕ್ಕೂ ಸಹ ಅವಕಾಶಗಳನ್ನು ಕಲ್ಪಿಸಿದ್ದರು. ವೀಣೆ ನುಡಿಸುವುದು, ಕಸೂತಿ ಕಲೆ ಮುಖ್ಯವಾದುದನ್ನು ಕಲಿಸಲು ಖಾಸಗಿಯಾಗಿ ಶಿಕ್ಷಕರನ್ನು ಗೊತ್ತು ಪಡಿಸಿದ್ದರು. ವಿದ್ಯಾವಂತ ಹಾಗೂ ಶ್ರೀಮಂತ ಮನೆತನದವರಾದರೂ ಸಹ ತಂದೆ ತಾಯಿಗಳು ಸಂಪ್ರದಾಯವನ್ನು ಪಾಲಿಸುತ್ತಿದ್ದರು.

ತಂದೆ ರಾಮಯ್ಯನವರು ಸರ್ಕಾರಿ ಸೇವೆಯಲ್ಲಿದ್ದುದರಿಂದ ಆಗಾಗ್ಗೆ ಒಂದು ಊರಿನಿಂದ ಮತ್ತೊಂದು ಊರಿಗೆ ವರ್ಗಾವಣೆಯಾಗುತ್ತಿದ್ದರು. ವರ್ಗಾವಣೆ ಸರ್ಕಾರಿ ಸೇವೆಯಲ್ಲಿ ಅನಿವಾರ್ಯ. ಹಾಗಾಗಿ ಬಾಲಕಿ ಸುನಂದಮ್ಮನವರ ವಿದ್ಯಾಭ್ಯಾಸ ಬೇರೆ ಬೇರೆ ಸ್ಥಳಗಳಲ್ಲಿ ನಡೆಯಿತು.

ವ್ಯಾಸಂಗದಲ್ಲಿ ಚುರುಕಾಗಿದ್ದ ಅವರು ತರೀಕೆರೆಯಲ್ಲಿ ಶಾಲೆಗೆ ಸೇರಬೇಕಾದಾಗ ಅಲ್ಲಿ ಬಾಲಕಿಯರ ಶಾಲೆಯೇ ಇರಲಿಲ್ಲವಂತೆ. ಹಾಗೂ ವಿಧಿ ಇಲ್ಲದೆ ಅವರು ಬಾಲಕರ ಶಾಲೆಗೆ ಸೇರಬೇಕಾದ ಅನಿವಾರ್ಯತೆ ಉಂಟಾಯಿತು.

ಬಾಲ್ಯದಿಂದಲೂ ತರಗತಿಯಲ್ಲಿ ಮುಂಚೂಣಿಯಲ್ಲಿದ್ದು ಇಂಗ್ಲೀಷ್ ಹಾಗೂ ಲೆಕ್ಕದ ವಿಷಯಗಳಲ್ಲಿ ಅತಿ ಹೆಚ್ಚಾದ ಅಂಕಗಳನ್ನು ಪಡೆಯುತ್ತಿದ್ದರು. ಚುರುಕುಮತಿಯಾಗಿದ್ದು ಲೆಕ್ಕಗಳನ್ನು

ಕಷ್ಟವಿಲ್ಲದೆ ಶೀಘ್ರವಾಗಿ ಸರಿಯಾಗಿ ಮಾಡುತ್ತಿದ್ದರು. ಭಾಷೆಯಲ್ಲಿಯ ವಾಕ್ಯಗಳನ್ನು ಹಾಗೂ ಸ್ಪೆಲ್ಲಿಂಗ್‌ಗಳನ್ನು ತಪ್ಪಿಲ್ಲದೆ ಹೇಳುತ್ತಿದ್ದ ಅವರು ಸಹಜವಾಗಿಯೇ ಉಪಾಧ್ಯಾಯರ ಮೆಚ್ಚುಗೆಗೆ ಪಾತ್ರರಾಗುತ್ತಿದ್ದರು.

ಇವರು ವ್ಯಾಸಂಗ ಮಾಡುತ್ತಿದ್ದಾಗ ಒಮ್ಮೆ ಅವರ ಶಾಲೆಗೆ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರವರು ಬಂದಿದ್ದರು. ಆ ಸಂದರ್ಭದಲ್ಲಿ ಬಾಲಕಿ ಸುನಂದಮ್ಮನ ಪ್ರತಿಭಾ ಪ್ರದರ್ಶನ ದಿವಾನರ ಮುಂದೆ ನಡೆದು ಅವರು ತಮ್ಮ ಮೆಚ್ಚುಗೆ ಸೂಚಿಸಿ ಬಾಲಕಿಯ ಬೆನ್ನು ತಟ್ಟಿದ್ದರು. ಈ ಅವಿಸ್ಮರಣೀಯ ಘಟನೆ ಅವರ ಬಾಳಿನ ಕೊನೆಯ ದಿನಗಳವರೆಗೂ ಹಸಿರಾಗಿ ನೆನಪಿನಲ್ಲಿದ್ದು ತಮ್ಮ ಆಪ್ತರಲ್ಲಿ ಅದನ್ನು ನೆನಪಿಸಿ ಕೊಂಡು ಸಂತೋಷ ಪಡುತ್ತಿದ್ದರು.

ಪ್ರತಿ ಪರೀಕ್ಷೆಯಲ್ಲಿಯೂ ತರಗತಿಯ ಇತರೇ ವಿದ್ಯಾರ್ಥಿಗಳಿಗಿಂತಲೂ ಅವರೇ ಮೊದಲು. ಲೆಕ್ಕದಲ್ಲಂತೂ ನೂರಕ್ಕೆ ನೂರು ಅಂಕಗಳನ್ನು ಪಡೆದ ಮೇಧಾವಿಯಾಗಿದ್ದರು. ಪ್ರಬಂಧಗಳನ್ನು ಬರೆಯುವುದರಲ್ಲೂ ಎತ್ತಿದ ಕೈ. ಅವರ ಈ ಪ್ರತಿಭೆಗೆ ಇವರ ಅಧ್ಯಾಪಕರು ತಮ್ಮ ಮೆಚ್ಚುಗೆ ಸೂಚಿಸುತ್ತಿದ್ದರು.

ಆದರೆ ಇವರ ಜೊತೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಬಾಲಕರು ಹಾಗೂ ಕೆಲವು ಪೋಷಕರ ತೀವ್ರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಅಷ್ಟೇ ಅಲ್ಲ ಬಾಲಕರ ಶಾಲೆಗೆ ಬಾಲಕಿಯನ್ನು ನೇಮಿಸಿಕೊಂಡ ಅಧ್ಯಾಪಕರನ್ನು ಹೆದರಿಸಿ ಈ ಹುಡುಗಿಯನ್ನು ಬಾಲಕರ ಶಾಲೆಗೆ ಹೇಗೆ ಸೇರಿಸಿಕೊಂಡಿರಿ, ಈಗಲೇ ಇವಳನ್ನು ಶಾಲೆಯಿಂದ ಕಳುಹಿಸದಿದ್ದರೆ ನಿಮ್ಮ ಕೆಲಸಕ್ಕೆ ಸಂಚಕಾರ ಎಂದು ಧಮಕಿ ಹಾಕಿದರು. ಪಾಪ ! ಆ ಶಾಲೆಯ ಮುಖ್ಯೋಪಾಧ್ಯಾಯರು ಈ ಘಟನೆಗಳನ್ನು ವಿವರಿಸಿ ಸುನಂದಮ್ಮನವರ ತಂದೆಯ ಗಮನಕ್ಕೆ ತಂದರು.

ಸುನಂದಮ್ಮನವರ ತಂದೆ-ತಾಯಿಯರು ಬೆದರಿಕೆಯಿಂದ ವಿಚಲಿತರಾಗದೆ ಅದೇ ಶಾಲೆಯ ಉಪಾಧ್ಯಾಯರನ್ನು ಮನೆಗೆ ಕರೆಸಿಕೊಂಡು ಮಗಳಿಗೆ ಪಾಠ ಹೇಳಿಸಿ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿಸಿದರು.

ತರೀಕೆರೆಯಲ್ಲಿ ಈ ಪರೀಕ್ಷಾ ಕೇಂದ್ರವಿರಲಿಲ್ಲ. ಹಾಗಾಗಿ ಮಗಳನ್ನು ಕಡೂರಿಗೆ ಕಳಿಸಿ ಪರೀಕ್ಷೆ ಬರೆಯಲು ಕಳಿಸಿಕೊಟ್ಟರು. ಸಂತೋಷದ ಸಂಗತಿಯೆಂದರೆ, ಸುನಂದಮ್ಮ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಪಡೆದು ಯಶಸ್ವಿಯಾಗಿ ತೇರ್ಗಡೆಯಾದರು.

ಇವರಿಗೆ ಹನ್ನೊಂದು ವರ್ಷವಿದ್ದಾಗ ತಂದೆತಾಯಿ ಹಾಗೂ ಹಿರಿಯರ ಇಚ್ಛೆಯಂತೆ ಇವರ ಮದುವೆ ನಿಶ್ಚಯವಾಯಿತು. ವರ ಹದಿನೇಳು ವರ್ಷದ ವೆಂಕಟನಾರಣಪ್ಪ, ಅಜ್ಜಿಯ ತಮ್ಮನ ಮಗ.

ಆ ಕಾಲದಲ್ಲಿ ಇಂಟರ್ ಮೀಡಿಯೇಟ್ ಓದುತ್ತಿದ್ದರು. ಬಾಲ್ಯ ವಿವಾಹಕ್ಕೆ ಇಂದಿನಂತೆ ಯಾವ ಅಡೆತಡೆ, ಅಡ್ಡಿ ಆತಂಕ, ಆಕ್ಷೇಪಣೆ ಇರದಿದ್ದುದರಿಂದ, ನಿರಾಂತಕವಾಗಿ ಮದುವೆ ನಡೆದೇ ಹೋಯಿತು.

ಮದುವೆಯಾದ ನಂತರ ವೆಂಕಟನಾರಾಯಣಪ್ಪ ತನ್ನ ಮುಂದಿನ ವಿದ್ಯಾಭ್ಯಾಸವನ್ನು ಮುಂದುವರೆಸಲು ಮೈಸೂರಿಗೆ ತೆರಳಿದರು. ಈ ವೇಳೆಗೆ ತಂದೆ ರಾಮಯ್ಯನವರು ತರಿಕೇರೆಯಿಂದ ದಾವಣಗೆರೆಗೆ ವರ್ಗವಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಗಿ ನೇಮಕಗೊಂಡರು.

ದಾವಣಗೆರೆಯಲ್ಲಿಯೂ ಸಹ ಬಾಲಕಿಯರಿಗೆಂದೇ ಪ್ರತ್ಯೇಕವಾದ ಪ್ರೌಢಶಾಲೆಯಿರಲಿಲ್ಲ. ಹಾಗಾಗಿ ವಿಧಿಯಿಲ್ಲದೆ ಅವರು ಬಾಲಕರ ಶಾಲೆಗೆ ಸೇರಲೇ ಬೇಕಾಯಿತು. ಅಲ್ಲಿ ವ್ಯಾಸಂಗ ಮಾಡುತ್ತಿದ್ದ ಏಕೈಕ ವಿದ್ಯಾರ್ಥಿನಿಯಾದರು.

ಈ ಸಂದರ್ಭದಲ್ಲಿ ಅವರ ತಾತ ಡಿ. ವೆಂಕಟರಾಮಯ್ಯನವರು ಮೊಮ್ಮಗಳನ್ನು ಬಾಲಕರ ಶಾಲೆಗೆ ಐದನೆಯ ತರಗತಿಗೆ ಸೇರಿಸಲು ನೆರವಾದರು.

ಡಿ. ವೆಂಕಟರಾಮಯ್ಯನವರು ವಿದ್ಯಾ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದು ತಮ್ಮ ಕರ್ತವ್ಯ ನಿಷ್ಠೆಯಿಂದ ಮೈಸೂರು ಮಹಾರಾಜರಿಂದ ರಾಜಸೇವಾಸಕ್ತ ಪ್ರಶಸ್ತಿಗೆ ಭಾಜನರಾಗಿದ್ದರು.

ಸಾರ್ವಜನಿಕ ರಂಗದಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಅವರು ಅನೇಕ ಸಾಮಾಜಿಕ ಕಾರ್ಯಕ್ರಮಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿದ್ದ ಅವರು ಜನಾಂಗದ ವಿದ್ಯಾರ್ಥಿಗಳಿಗೆ ಬೆಂಗಳೂರಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಲು ವಿದ್ಯಾರ್ಥಿ ನಿಲಯದ ಸ್ಥಾಪನೆಗೆ ಕಾರಣರಾಗಿದ್ದರು. ಸಂಸ್ಕೃತ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಅವರು ಸಂಸ್ಕೃತ ಭಾಷೆಯಲ್ಲಿದ್ದ ಕಠೋಪನಿಷತ್ತಿನ ಹಾಗೂ ತೈತಿರೀಯ ಉಪನಿಷತ್ತುಗಳಿಗೆ ಇಂಗ್ಲೀಷಿನಲ್ಲಿ ಭಾಷ್ಯವನ್ನು ಬರೆದಿದ್ದರು.

******

ವಿಶೇಷವೆಂದರೆ ಈ ಶಾಲೆಯಲ್ಲಿ ತರಗತಿಯಲ್ಲಿ ಅವರಿಗಾಗಿಯೇ ಪ್ರತ್ಯೇಕವಾಗಿ ಒಂದು ಮೇಜು ಮತ್ತು ಕುರ್ಚಿಯನ್ನು ಒದಗಿಸಲಾಗಿತ್ತು. ಅಧ್ಯಾಪಕರು ತರಗತಿಗೆ ಬರುವವರೆಗೆ ಇವರಿಗೆ ಮುಖ್ಯೋಪಾಧ್ಯಾಯರ ಕೊಠಡಿಗೆ ಹೊಂದಿಕೊಂಡಂತೆ ಇದ್ದ ಒಂದು ಸ್ಥಳದಲ್ಲಿ ಒಂದು ತೆರೆಯನ್ನು ಹಾಕಿ ಅದರ ಹಿಂದೆ ಕುರ್ಚಿಯನ್ನು ಒದಗಿಸಲಾಗುತ್ತಿತ್ತು. ಅಧ್ಯಾಪಕರು ತರಗತಿಗೆ ಬರುವವರೆಗೂ ಅಲ್ಲಿದ್ದು ಅವರು ಬಂದ ನಂತರ ತರಗತಿಗೆ ತೆರಳಬೇಕಾಗುತ್ತಿತ್ತು. ಅಷ್ಟೇ ಅಲ್ಲ ಶಾಲೆಗೆ ಬಂದು

ಹೋಗುವಾಗ ಪೋಲಿಸ್ ಪೇದೆಯ ಬೆಂಗಾವಲು. ಸುನಂದಮ್ಮನವರೇ ನೆನಪಿಕೊಂಡಂತೆ ಅವರ ತಂದೆಯ ಸಿಬ್ಬಂದಿಯಲ್ಲಿ ಕನಿಷ್ಠ ಎಂಟು ಸೇವಕರು ದಫೇದಾರ ನಾಲ್ಕು ಪೊಲೀಸ್ ಪೇದೆಗಳು ಮತ್ತು ಕುದುರೆ ಸವಾರ ಇರುತ್ತಿದ್ದರಂತೆ.

ದಾವಣಗೆರೆಯ ಶಾಲೆಯಲ್ಲಿ ಓದುತ್ತಿರುವಾಗಲೂ ಅವರು ತಮ್ಮ ಪ್ರಥಮ ಸ್ಥಾನವನ್ನು ಯಾರಿಗೂ ಬಿಟ್ಟು ಕೊಡುತ್ತಿರಲಿಲ್ಲ. ಆದರೆ ವಿದ್ಯಾರ್ಥಿಗಳಿಂದ ತರಿಕೆರೆಯಲ್ಲಿ ಆದಂತೆ ಯಾವುದೇ ತೊಂದರೆಯಾಗಲಿಲ್ಲ. ಎಲ್ಲಾ ವಿದ್ಯಾರ್ಥಿಗಳು ಸಹೃದಯಿಗಳಾಗಿದ್ದರು.

ಅವರು ಹೈಸ್ಕೂಲ್‌ನ ಕೊನೆಯ ವರ್ಷದಲ್ಲಿದ್ದಾಗ ತಂದೆಗೆ ದಾವಣಗೆರೆಯಿಂದ ಬೆಂಗಳೂರಿಗೆ ವರ್ಗವಾಯಿತು. ಬೆಂಗಳೂರಿನಲ್ಲಿ ಅವರ ವಿದ್ಯಾಭ್ಯಾಸ ಅಲ್ಲಿಯ ವಾಣಿ ವಿಲಾಸ ಇನ್ಸ್‌ಸ್ಟಿಟ್ಯೂಟ್‌ನಲ್ಲಿ. ಈ ಶಾಲೆ ಹೆಣ್ಣು ಮಕ್ಕಳಿಗೆ ಮೀಸಲಾಗಿತ್ತು. ಹಾಗಾಗಿ ಅವರಿಗೆ ಇಲ್ಲಿಯ ಅನೇಕ ವಿದ್ಯಾರ್ಥಿನಿಯರ ಸಂಗ ದೊರಕಿತು. ಆದರೆ ಇಲ್ಲಿ ಅದೇ ವಿದ್ಯಾರ್ಥಿನಿಯರಿಂದ ಮತ್ತೊಂದು ವಿಚಿತ್ರ ಸನ್ನಿವೇಶವನ್ನು ಎದುರಿಸಬೇಕಾಯಿತು.

ಈ ಹೆಣ್ಣು ಮಕ್ಕಳ ಶಾಲೆಯಲ್ಲಿ ಇವರೊಬ್ಬರೇ ಮದುವೆಯಾದ ಏಕೈಕ ವಿದ್ಯಾರ್ಥಿನಿ. ಮನೆಯಲ್ಲಿ ತಾಯಿ ಅಜ್ಜಿ, ಬಹಳ ಸಂಪ್ರದಾಯದವರಾಗಿದ್ದ ಕಾರಣ ಮದುವೆಯಾದ ಸುನಂದಮ್ಮನವರು ಹಬ್ಬ ಪೂಜಾದಿಗಳನ್ನು ಕಡ್ಡಾಯವಾಗಿ ನಿಷ್ಠೆಯಿಂದ ಆಚರಿಸಬೇಕಾಗುತ್ತಿತ್ತು. ಪೂಜೆ ಪುನಸ್ಕಾರದ ನಂತರ ಅದೇ ದಿರಿಸಿನಲ್ಲಿ, ಅವರು ಶಾಲೆಗೆ ತೆರಳಬೇಕಾದ ಅನಿವಾರ್ಯತೆ ಉಂಟಾದಾಗ ತಮ್ಮ ಓರಗೆಯ ವಿದ್ಯಾರ್ಥಿನಿಯರಿಂದ ಕೀಟಲೆಗೆ ಈಡಾಗಬೇಕಾಗಿತ್ತು. ಅವರ ಕೂತೂಹಲ ಹಾಗೂ ಕುಹಕ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿತ್ತು.

ಹಿಂದಿನ ಶಾಲೆಗಳಂತೆಯೇ ಇವರು ಪರೀಕ್ಷೆಯಲ್ಲಿ ಬೇರೆ ವಿದ್ಯಾರ್ಥಿನಿಯರಿಗಿಂತ ಹೆಚ್ಚಿನ ಅಂಕ ಗಳಿಸಿದಾಗ ಅವರೆಲ್ಲ ಇವರನ್ನು ನೋಡುವ ದೃಷ್ಟಿಕೋನವೇ ಬೇರೆಯಾಯಿತು. ಅವರ ವರ್ತನೆ ಸಂಪೂರ್ಣ ಬದಲಾವಣೆಗೊಂಡು ಇವರನ್ನು ಸ್ನೇಹವಿಶ್ವಾಸಗಳಿಂದ ಕಾಣಲಾರಂಭಿಸಿದರು.

1932ರಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದುದೇ ಅಲ್ಲದೇ ಆನರ್ಸ್ ಬೋರ್ಡ್‌ನಲ್ಲಿ ನಮೂದಿತವಾದ ನಾಲ್ಕು ಹೆಸರುಗಳಲ್ಲಿ ಇವರದೂ ಒಂದಾಗಿ ಸೇರ್ಪಡೆಗೊಂಡ ಹೆಮ್ಮೆಗೆ ಪಾತ್ರವಾದವರು.

ಮುಂದೆ ಕನ್ನಡದ ಸುಪ್ರಸಿದ್ಧ ಸಾಹಿತಿಯಾಗಿ ತಾವು ಓದಿರುವ ಶಾಲೆಯಲ್ಲಿಯೇ ವಿದ್ಯಾರ್ಥಿನಿಯರ ಸಂಘವನ್ನು ಉದ್ಘಾಟಿಸುವ ಸಂದರ್ಭದಲ್ಲಿ ತಮ್ಮ ವಿದ್ಯಾರ್ಥಿ ಜೀವನದ ಈ ಘಟನೆಯನ್ನು ವಿದ್ಯಾರ್ಥಿಗಳಿಗೆ ವಿವರಿಸಿದಾಗ ಶಾಲೆಯ ಪ್ರಿನ್ಸಿಪಾಲರು ಆ ಬೋರ್ಡ್‌ನ್ನು ಹುಡುಕಿಸಿ ತರಿಸಿ ಎಲ್ಲರಿಗೂ ತೋರಿಸಿದರಂತೆ.

ಎಸ್‌ಎಸ್‌ಎಲ್‌ಸಿ ನಂತರ ವಾಣಿವಿಲಾಸ ಇನ್‌ಸ್ಟಿಟ್ಯೂಟ್‌ನಲ್ಲಿಯೇ ಇದ್ದ ವುಮೆನ್ಸ್ ಇಂಟರ್ ಮೀಡಿಯೇಟ್ ಕಾಲೇಜಿಗೆ ಸುನಂದಮ್ಮನವರು ಸೇರಿಕೊಂಡರು. ಅಲ್ಲಿಯೂ ಸಹ ಎಂದಿನಂತೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಅಲ್ಲಿಗೆ ಅವರು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸದೇ ಅಲ್ಲಿಗೇ ನಿಲ್ಲಿಸಬೇಕಾದ ಅನಿವಾರ್ಯತೆ ಉಂಟಾಯಿತು.

ಕಾಲೇಜು ವಿದ್ಯಾಭ್ಯಾಸ ನಿಂತರೇನು? ಅಂದಿನ ಪ್ರಸಿದ್ಧ ಕನ್ನಡ ಸಾಹಿತಿಗಳ ಕೃತಿಗಳನ್ನು ಓದಿದರು. ಅಷ್ಟೇ ಅಲ್ಲ, ಜೊತೆಜೊತೆಗೆ ಷೇಕ್ಸ್‌ಪಿಯರ್ ಹೆಚ್.ಆರ್. ವೇಲ್ಸ್ ಮುಂತಾದ ಆಂಗ್ಲ ಸಾಹಿತಿಗಳ ಕೃತಿಗಳನ್ನೂ ಓದಿದರು. ತಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಂಡರು.

ಸುನಂದಮ್ಮನವರು ವಿವಾಹಿತರಾಗಿದ್ದರೂ ಅವರು ಮನೆಯಲ್ಲಿಯೇ ಇದ್ದು ಶಿಕ್ಷಣವನ್ನು ಅಭ್ಯಸಿಸುತ್ತಿದ್ದರು. ಆ ಸಮಯದಲ್ಲಿ ಅವರ ಪತಿ ವೆಂಕಟನಾರಣಪ್ಪನವರು ಮೈಸೂರಿನಲ್ಲಿ ಬಿ.ಎ. ಮುಗಿಸಿ, ಮುಂದಿನ ವಿದ್ಯಾಭ್ಯಾಸಕ್ಕಾಗಿ ಪುಣೆಯ ಲಾ ಕಾಲೇಜ್ ಸೇರಿದ್ದರು. ಬಿಡುವಿನ ಅವಧಿಯಲ್ಲಿ ಸುನಂದಮ್ಮನವರು ತಮ್ಮನ್ನು ತಾವೇ ಹಲವಾರು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಅಂದಿನ ಕಾಲದಲ್ಲಿ ಹೆಣ್ಣುಮಕ್ಕಳಿಗೆ ಹಿಂದಿ ಕಲಿಯುವುದು ಒಂದು ಹವ್ಯಾಸವಾಗಿತ್ತು. ಸುನಂದಮ್ಮನವರು ಸಹ ಹಿಂದೀ ಭಾಷೆಯಲ್ಲಿ ಪರೀಕ್ಷೆಗಳನ್ನು ಪಾಸು ಮಾಡಿದರು. ಕ್ರೀಡೆಯಲ್ಲಿಯೂ ಆಸಕ್ತಿ ಹೊಂದಿದ್ದು ಟೆನ್ನಿಸ್‌ನಲ್ಲಿ ಪರಿಣತರಾದರು. ಈ ಆಟದಲ್ಲಿ ಅವರಿಗೆ ಅವರ ತಾಯಿಯೇ ಜೊತೆಗಾರ ರಾಗಿರುತ್ತಿದ್ದರು.

ಸುನಂದಮ್ಮನವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ತಮ್ಮ ಮೇಲೆ ಪ್ರಭಾವ ಬೀರಿದ ಇಬ್ಬರು ಅಧ್ಯಾಪಕರನ್ನು ಸದಾ ನೆನೆಸಿಕೊಳ್ಳುತ್ತಿದ್ದರು. ಒಬ್ಬರು ಎಸ್.ವಿ.ಶ್ರೀನಿವಾಸರಾಯರು. ಅವರು ದಾವಣಗೆರೆಯಲ್ಲಿ ಸುನಂದಮ್ಮನವರು ಓದುತ್ತಿದ್ದಾಗ ಇಂಗ್ಲೀಷ್ ಅಧ್ಯಾಪಕರಾಗಿದ್ದರು. ತರಗತಿಯಲ್ಲಿ ಯಾವಾಗಲೂ ಸುನಂದಮ್ಮನವರು ಮೊದಲಿಗರಾಗಿದ್ದರಲ್ಲವೇ? ಹಾಗಾಗಿ ಅವರು ಬರೆದ ಉತ್ತರಗಳನ್ನು ಪ್ರಬಂಧಗಳನ್ನು ತರಗತಿಯಲ್ಲಿ ಬೇರೆ ಇತರೆ ವಿದ್ಯಾರ್ಥಿಗಳ ಮುಂದೆ ಓದುತ್ತಿದ್ದರು. ಅಷ್ಟೇ ಅಲ್ಲ ಶಾಲೆಯ ಕೊನೆಯ ದಿನ ಅವರನ್ನು ಕರೆದು, ಅವರು ಬರೆಯುವ ಭಾಷೆ, ಶೈಲಿ ಬರಹದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮುಂದೆಯೂ ಬರಹಗಳನ್ನು ಬರೆಯುವಂತೆ ಪ್ರೋತ್ಸಾಹದ ನುಡಿಗಳನ್ನಾಡಿದರು. ಅಲ್ಲದೆ ಅನುವಾದಗಳನ್ನು ಮಾಡುವಂತೆ ಸಲಹೆ ನೀಡಿದರು.

ನಿಟ್ಟೂರು ಶ್ರೀನಿವಾಸರಾಯರು ಮತ್ತು ಅವರ ಮಡದಿ ಒಟ್ಟಾಗಿ ಸೇರಿ ಮಹಾತ್ಮ ಗಾಂಧಿಯವರ ಆತ್ಮಚರಿತ್ರೆಯನ್ನು ಕನ್ನಡಕ್ಕೆ ಅನುವಾದ ಮಾಡಿರುವುದನ್ನು ಉದಹರಿಸಿದರು. 1920 ರಲ್ಲಿ ಮಹಾತ್ಮಗಾಂಧಿಯವರ ಆತ್ಮ ಚರಿತ್ರೆ (My Experiments With Truth) ಪುಸ್ತಕವು

ಭಾರತದ ಪಲವಾರು ಭಾಷೆಗಳಿಗೆ ಅನುವಾದಗೊಂಡಿತ್ತು. ಅಂತಹ ಮೇರು ವ್ಯಕ್ತಿಯ ಜೀವನ ಚರಿತ್ರೆಯನ್ನು ಕನ್ನಡಿಗರು ತಮ್ಮ ಭಾಷೆಯಲ್ಲೇ ಓದಿ ತಿಳಿಯುವುದು ಉತ್ತಮ ಎಂದು ಅಂದು ವಕೀಲರಾಗಿದ್ದ ನಿಟ್ಟೂರು ಶ್ರೀನಿವಾಸರಾಯರು ಮತ್ತು ಅವರ ಪತ್ನಿ ಪದ್ಮಮ್ಮನವರು ಕನ್ನಡಕ್ಕೆ ಅನುವಾದ ಮಾಡಿದ್ದರು. ವಿಚಿತ್ರವೇನೆಂದರೆ, ಅನುವಾದಕರೆಂದು ತಮ್ಮ ಹೆಸರು ಪ್ರಕಟಿಸದೇ ಇಬ್ಬರು ಕನ್ನಡಿಗರು ಎಂದು ಪ್ರಕಟಿಸಿದ್ದರು. ಶ್ರೀನಿವಾಸರಾಯರ ಪ್ರೋತ್ಸಾಹದ ನುಡಿಗಳೇ ಸುನಂದಮ್ಮ ನವರಲ್ಲಿ ಸಾಹಿತ್ಯಾಸಕ್ತಿ ಮೂಡಲು ಹಾಗೂ ಮುಂದುವರೆಯಲು ನೆರವಾಯಿತು ಎಂದು ನೆನಪಿಸಿಕೊಳ್ಳುತ್ತಿದ್ದರು.

ಸುನಂದಮ್ಮನವರು ಕಾಲೇಜಿನಲ್ಲಿ ಓದುತ್ತಿದ್ದ ಸಂದರ್ಭ ಅವರು ಒಮ್ಮೆ ಟೈಫಾಯಿಡ್ ಖಾಯಿಲೆಗೆ ತುತ್ತಾಗಿ, ನಾಲ್ಕು ತಿಂಗಳು ಕಾಲೇಜಿಗೆ ಹೋಗಲಾಗಲಿಲ್ಲ. ನಂತರ ನಿಶ್ಶಕ್ತರಾಗಿದ್ದ ಅವರನ್ನು ಅವರ ತಂದೆಯವರ ಕಾರಿನಲ್ಲಿ ಕಾಲೇಜ್ ತನಕ ಹೋಗಿ, ಅಲ್ಲಿ ತಮ್ಮ ಜವಾನ ಹಾಗೂ ಕಾಲೇಜು ಜವಾನನ ಸಹಾಯದಿಂದ ಮೆಟ್ಟಿಲು ಹತ್ತಿಕೊಂಡು ತರಗತಿಗಳಿಗೆ ಹೋಗುತ್ತಿದ್ದರು. ಅಂತ ಪರಿಸ್ಥಿತಿಯಲ್ಲಿಯೂ ಸುನಂದಮ್ಮನವರು ಅಂತಿಮ ಪರೀಕ್ಷೆಯಲ್ಲಿ ತರಗತಿಗೆ ಮೊದಲ ರ್‍ಯಾಂಕ್ ಪಡೆದರು. ಆಗ ಅಲ್ಲಿ ಪ್ರಿನ್ಸಿಪಾಲರಾಗಿದ್ದ ಮಿಸೆಸ್ ಹಾನ್ಸ್‌ಮನ್‌ರವರು ಪ್ರಾರ್ಥನ ಸಭೆಯಲ್ಲಿ ಸುನಂದಮ್ಮನವರ ಸಾಧನೆಗೆ ಮೆಚ್ಚಿ ಅವರ ಬೆನ್ನು ತಟ್ಟಿ ಪ್ರೋತ್ಸಾಹದ ನುಡಿಗಳನ್ನಾಡಿದರು. ಅಲ್ಲದೆ you are a brave soldier ಎಂದು ಶ್ಲಾಘಿಸಿದರು. ಪ್ರಿನ್ಸಿಪಾಲರ ಉತ್ತೇಜಕ ನುಡಿಗಳು ಸುನಂದಮ್ಮನವರಲ್ಲಿದ್ದ ಆತ್ಮಬಲ ಹೆಚ್ಚಾಗಲು ಕಾರಣವಾಯಿತಲ್ಲದೆ, ಮುಂದಿನ ದಿನಗಳಲ್ಲಿ ಎಂತಹುದೇ ಕಷ್ಟ ಬಂದರೂ ಅದನ್ನು ಎದುರಿಸುವ ಮನೋಬಲವನ್ನೇ ರೂಢಿಸಿಕೊಳ್ಳಲು ಸಹಾಯಕವಾಯಿತು.

ಸುನಂದಮ್ಮ – ವೆಂಕಟನಾರಣಪ್ಪ ದಂಪತಿಗಳಿಗೆ ಇಬ್ಬರು ಮಕ್ಕಳು. ಮಗ ವಿ. ಶ್ರೀನಾಥ್, ಮಗಳು ಪ್ರಫುಲ್ಲ. ತುಂಬಾ ಮೇಧಾವಿಯಾದ ಶ್ರೀನಾಥ್ ಟಾಟಾ ಇನ್ಸ್‌ಸ್ಟಿಟ್ಯೂಟ್‌ನಲ್ಲಿ ಎಂ.ಎಸ್. ಪದವಿ ಪಡೆದು ಕೆನಡಾದ ವಾಟರ್‌ಲೂಯಿಸ್ ವಿಶ್ವವಿದ್ಯಾನಿಲಯದಲ್ಲಿ ಎಂ.ಎಸ್.ಪದವಿ ಗಳಿಸಿದ್ದರು. ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಹಿರಿಯ ಅಧಿಕಾರಿ ಯಾಗಿದ್ದರು. ಅವರ ಮಡದಿ ಶ್ರೀಲತಾರವರೂ ಸಹ ಬಿಎಸ್‌ಸಿ ಆನರ್ಸ್ ಬಿಎಡ್ ಮಾಡಿದವರು.

ದುರಂತವೆಂದರೆ 50ರ ಮಧ್ಯ ವಯಸ್ಸಿನಲ್ಲಿಯೇ ಶ್ರೀನಾಥರವರ ಅಕಾಲಿಕ ಮರಣವಾದದ್ದು ಆ ಕುಟುಂಬಕ್ಕೆ ಆಘಾತವನ್ನುಂಟು ಮಾಡಿತ್ತು. ಸುನಂದಮ್ಮನವರ ಮಗಳು ಪ್ರಫುಲ್ಲ ಬಿ.ಎ. ಪದವೀಧರೆ ಅವರಿಗೂ ಸಹ ಸಾಹಿತ್ಯದಲ್ಲಿ ಆಸಕ್ತಿ "ಫೋಕ್ ಟೇಲ್ಸ್ ಆಫ್ ಕರ್ನಾಟಕ"

ಎಂಬ ಹೆಸರಿನಲ್ಲಿ ಕರ್ನಾಟಕ ಜಾನಪದ ಕತೆಗಳ ಪುಸ್ತಕವೊಂದನ್ನು ಇಂಗ್ಲೀಷಿನಲ್ಲಿ ಬರೆದಿದ್ದಾರೆ. ಇವರ ಪತಿ ಟಿ. ಆರ್. ಸತೀಶಚಂದ್ರನ್‌ರವರು ಐಎಎಸ್ ಅಧಿಕಾರಿಯಾಗಿ, ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿದ್ದವರು. ಇವರು ಸುನಂದಮ್ಮನವರ ತಮ್ಮನೂ ಹೌದು.

ಸುನಂದಮ್ಮನವರ ಸಾಹಿತ್ಯ ರಚನೆ

ವಿದ್ಯಾಭ್ಯಾಸದ ದಿನಗಳಲ್ಲಿ ಪಠ್ಯಪುಸ್ತಕಗಳಿಗಷ್ಟೇ ತಮ್ಮ ಓದನ್ನು ಸೀಮಿತಗೊಳಿಸದೆ, ಇಂಗ್ಲೀಷ್ ಭಾಷೆಯ ಶ್ರೇಷ್ಠ ಸಾಹಿತ್ಯವನ್ನೂ ಜೊತೆ ಜೊತೆಗೆ ಕನ್ನಡ ಸಾಹಿತ್ಯವನ್ನೂ ಓದಿಕೊಂಡಿದ್ದರು. ಅಂದಿನ ಪ್ರಸಿದ್ಧ ಕನ್ನಡ ಲೇಖಕರಾದ ಬಿ. ವೆಂಕಟಾಚಾರ್, ಎಂ.ಎಸ್. ಪುಟ್ಟಣ್ಣ, ಗಳಗನಾಥ ಮೊದಲಾದವರ ಬರಹಗಳನ್ನೂ ಓದಿದ್ದರು. ಅಷ್ಟೇ ಅಲ್ಲ ಸಣ್ಣಪುಟ್ಟ ಬರಹಗಳನ್ನು ಸಹ ಬರೆಯುತ್ತಿದ್ದರು.

ಮೊಟ್ಟ ಮೊದಲಿಗೆ ಅವರು ಬರೆದಿದ್ದು – ಅಂದಿನ ಪ್ರಸಿದ್ಧ ಮಕ್ಕಳ ಪತ್ರಿಕೆ –"ಮಕ್ಕಳ ಪುಸ್ತಕ"ಕ್ಕೆ ಒಂದು ಕವನ. ಕವನದ ಹೆಸರು 'ಹೂವು' ಅದನ್ನು ಬರೆದಾಗ ಅವರ ವಯಸ್ಸು ಒಂಭತ್ತು ವರ್ಷ.

"ಹೂವೇ, ಹೂವೇ, ನೀನೆಲ್ಲಿರುವೆ ನಾರಿಯ ತುರುಬಲ್ಲೂ ಇರುವೆ, ಮಾರ ಪಿತನ ಕೊರಳಲ್ಲೂ ಇರುವೆ, ಯಾರು ನೀನೆಂಬುದನು ನಾನರಿತಿರುವೆ' ಎಂಬ ಪದ್ಯ ಓದುಗರ ಮೆಚ್ಚುಗೆಯನ್ನು ಪಡೆಯಿತು.

ಹೈಸ್ಕೂಲು ವಿದ್ಯಾರ್ಥಿದೆಸೆಯಲ್ಲಿದ್ದಾಗ ಅಂದಿನ ಕಾಲಮಾನದ ಪ್ರಮುಖ ಸಮಸ್ಯೆಗಳಾಗಿದ್ದ ಬಾಲ್ಯವಿವಾಹ, ಮಹಿಳಾ ವಿದ್ಯಾಭ್ಯಾಸ, ವರದಕ್ಷಿಣೆ ಮುಂತಾದ ಗಂಭೀರ ಸಮಸ್ಯೆಗಳನ್ನು ಕಥಾವಸ್ತುವಾಗಿದ್ದು ಕೊಂಡು ಸಣ್ಣ ಕಥೆಗಳನ್ನು ಬರೆದರು.

ಬಾಲವಿಧವೆಯ ಜೀವನದ ಕುರಿತಾದ ಕಥೆ ಹೂ ಬಾಡಿತು ಪ್ರಕಟವಾದಾಗ ಇವರ ಹೆಸರಿನ ಜೊತೆಗೆ ಹನ್ನೆರಡು ವರ್ಷದ ಹುಡುಗಿ ಬರೆದದ್ದು ಎಂದೂ ಪ್ರಕಟವಾಗಿತ್ತಂತೆ.

ಅಂದಿನ ಕಾಲದ ಪ್ರಸಿದ್ಧ ಪತ್ರಿಕೆಗಳಾದ ತಾಯಿನಾಡು, ವಿಶ್ವಕರ್ನಾಟಕ, ನವಜೀವನ ಮುಂತಾದ ಪತ್ರಿಕೆಗಳಲ್ಲಿಯೂ ವಾರದ ಸಂಚಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗುತ್ತಿದ್ದವು. ಕಾಲೇಜು ವಿದ್ಯಾಭ್ಯಾಸದ ದಿನಗಳಲ್ಲಿ ಕೆಲವು ಆಂಗ್ಲ ನಾಟಕಗಳನ್ನೂ ಸಹ ಬರೆದಿದ್ದರು.

ಸಾಂಸಾರಿಕ ತಾಪತ್ರಯಗಳಿಂದ ಇವರ ಬರವಣಿಗೆ ಕೆಲಕಾಲ ಮುಂದುವರೆಯದೆ, ಅವರ ಸಂಸಾರವು ಬೆಂಗಳೂರಿಗೆ ಸ್ಥಳಾಂತರಗೊಂಡ ಮೇಲೆ ಮತ್ತೆ ಆರಂಭವಾಯಿತು. ಕಥೆಗಾರ, ಕಥಾವಳಿ, ಮೊದಲಾದ ಜನಪ್ರಿಯ ಮಾಸಪತ್ರಿಕೆಗಳಲ್ಲಿ ಇವರ ಕಥೆಗಳು ಪ್ರಕಟಗೊಳ್ಳತೊಡಗಿದವು.

1942 ರಲ್ಲಿ ಕನ್ನಡದಲ್ಲಿ ವಿನೋದ ಸಾಹಿತ್ಯಕ್ಕೆ ಪುಷ್ಟಿ ಕೊಡುವ ಒಂದು ಪತ್ರಿಕೆಯ ಪ್ರಕಟಣೆ ಆರಂಭವಾಯಿತು. ಆ ಕಾಲಕ್ಕೆ ಹಾಸ್ಯ ಪ್ರಜ್ಞೆಯುಳ್ಳ ಲೇಖಕರ ಬರವಣಿಗೆಗೆ ಒಂದು ವೇದಿಕೆಯಂತೆ ಈ ಪತ್ರಿಕೆ ರೂಪುಗೊಂಡಿತು. ಆ ಪತ್ರಿಕೆಯೇ ಡಾ. ಶಿವರಾಂರವರು ಆರಂಭಿಸಿದ ಕೊರವಂಜಿ. ಈ ಪತ್ರಿಕೆಯಿಂದ ಕನ್ನಡದಲ್ಲಿ ಹಾಸ್ಯ ಲೇಖಕರ ಒಂದು ದಂಡೇ ನಿರ್ಮಾಣವಾಯಿತೆಂದು ಹೇಳಬಹುದು.

ಈ ಪತ್ರಿಕೆಯಲ್ಲಿ ಪ್ರಕಟವಾದ ಸುನಂದಮ್ಮನವರ ಲೇಖನ 'ನಾನ್ಯಾರಿಟ್ಟಿದ್ದು' ಈ ಲೇಖನಕ್ಕೆ ನಾ. ಕಸ್ತೂರಿ, ಜಿ.ಪಿ. ರಾಜರತ್ನಂ ರಾಶಿ ಮುಂತಾದ ಹಿರಿಯರಿಂದ ದೊರಕಿದ ಮೆಚ್ಚುಗೆ ಪ್ರೋತ್ಸಾಹ ಸುನಂದಮ್ಮನವರನ್ನು ಮತ್ತುಷ್ಟು ಮತ್ತಷ್ಟು ಹಾಸ್ಯ ಲೇಖನಗಳನ್ನು ಬರೆಯಲು ಪ್ರೇರೇಪಿಸಿತು.

ಕೊರವಂಜಿಯ ಪ್ರಕಟಣೆಯ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಬಹುಶಃ ಎಲ್ಲಾ ಸಂಚಿಕೆಗಳಲ್ಲೂ ಇವರ ಲೇಖನ ಇದ್ದೇ ಇರುತ್ತಿತ್ತು. ಅವರ ಕಾಲ್ಪನಿಕ ದಂಪತಿಗಳಾದ ಮೈಲಾರಯ್ಯ- ಸರಸು ಕನ್ನಡದ ಎಲ್ಲಾ ಹಾಸ್ಯ ಪ್ರಿಯ ಓದುಗರನ್ನು ತಲುಪಿತು. ತಮ್ಮ ಲೇಖನಗಳ ಮೂಲಕ ಓದುಗರನ್ನು ನಗಿಸಿದರು. ಚುಚ್ಚಿದರು, ತಿದ್ದಿದರು, ತಾವು ರಚಿಸಿದ ಪಾತ್ರಗಳಿಂದಾಗಿ ಸುನಂದಮ್ಮನವರಿಗೆ ಅಪಾರ ಜನಪ್ರಿಯತೆ ಉಂಟಾಯಿತು. ಆಯಾಕಾಲದ ಪ್ರಚಲಿತ ಘಟನೆಗಳು, ಸಂಗತಿಗಳು, ಅವರ ಬರಹದ ವಸ್ತುಗಳಾಗಿದ್ದವು.

1967ರಲ್ಲಿ ಕೊರವಂಜಿಯ ಪ್ರಕಟಣೆ ಸ್ಥಗಿತಗೊಂಡಾಗ ಅಂದು ಪ್ರಕಟವಾಗುತ್ತಿದ್ದ ಇತರೆ ಪತ್ರಿಕೆಗಳಿಗೆ - ಮಲ್ಲಿಗೆ, ಸುಧಾ, ಪ್ರಜಾಮತ ಮುಂತಾದವುಗಳಿಗೆ ಲೇಖನಗಳನ್ನು ಬರೆಯ ತೊಡಗಿದರು. ಅಂದಿನ ದಿನಗಳಲ್ಲಿ ಸುನಂದಮ್ಮನವರ ಹಾಸ್ಯ ಲೇಖನವಿಲ್ಲದಿದ್ದ ವಿಶೇಷಾಂಕವೇ ಇರುತ್ತಿರಲಿಲ್ಲವೆಂದರೆ ಅತಿಶಯೋಕ್ತಿ ಆಗಲಾರದು.

ಆಕಾಶವಾಣಿಗೂ ಸುನಂದಮ್ಮನವರಿಗೂ ಗಾಢವಾದ ನಂಟಿತ್ತು ಎಂದು ಹೇಳಬಹುದು. ಮೈಸೂರು, ಬೆಂಗಳೂರು, ಆಕಾಶವಾಣಿಗಳು ಅವರಿಂದ ಅನೇಕ ನಾಟಕ, ಭಾಷಣ, ಪ್ರಹಸನ, ಮಹಿಳಾ ಕಾರ್ಯಕ್ರಮಗಳನ್ನು ಬರೆಸಿ, ಪ್ರಸಾರ ಮಾಡಿವೆ. ನೃತ್ಯ ರೂಪಕಗಳು, ಮಾಸ್ತಿಯವರ ಕತೆಗಳ ರೇಡಿಯೋ ರೂಪಾಂತರ ಮುಂತಾದವನ್ನು ಆಕಾಶವಾಣಿಗೆ ಬರೆದಿದ್ದಾರೆ.

ಸುನಂದಮ್ಮನವರ ಲೇಖನಗಳ ವಿಶೇಷತೆ ಎಂದರೆ ಅಂದಂದಿನ ವರ್ತಮಾನಗಳ ಆಗುಹೋಗುಗಳ ಕುರಿತು ಅದಕ್ಕೆ ತಮ್ಮ ನಗೆ ಲೇಪನವನ್ನು ಹಚ್ಚಿ ಲೇಖನಗಳನ್ನು ಓದುಗರಿಗೆ ರಂಜನೀಯವಾಗಿ ನೀಡುವುದಾಗಿತ್ತು. ಸಮಕಾಲೀನ ಗಂಭೀರ ವಿಷಯಗಳನ್ನು ತಿಳಿ ಹಾಸ್ಯದಿಂದ ಬರೆಯುತ್ತಿದ್ದ ಅವರ ಬರಹಗಳು ಓದುಗರಿಗೆ ಅಪ್ಯಾಯಮಾನವಾಗಿರುತ್ತಿತ್ತು.

ಕಳೆದ ಶತಮಾನದಲ್ಲಿ ನಡೆದ ಹಲವಾರು ಘಟನೆಗಳಿಂದ ಅವರು ಪ್ರಭಾವಿತರಾಗಿದ್ದರು. ಕೆಲವೊಂದು ವಿಶೇಷ ಘಟನೆಗಳನ್ನು ಹೆಸರಿಸಬಹುದಾದರೆ ಮಹಿಳೆಯರಿಗಾಗಿಯೇ ರೂಪುಗೊಂಡ ಉಳಿತಾಯ ಯೋಜನೆಗಳು, ಬಂಗಾರ ನಿಯಂತ್ರಣ ಕಾಯ್ದೆ, ಮಿತ ಸಂತಾನ ಚಳವಳಿ, ಆರ್ಥಿಕ ಯುಗದಲ್ಲಿ ಉಂಟಾದ ಹರ್ಷದ್ ಮೆಹ್ತಾ ಸ್ಕ್ಯಾಂ ಇತ್ಯಾದಿಗಳಲ್ಲದೇ, ಹೊಸ ಹೊಸ ಆವಿಷ್ಕಾರಗಳಾದ ಮಿಕ್ಸಿ, ವಾಷಿಂಗ್ ಮೆಷಿನ್, ಪೇಜರ್ ಮೊಬೈಲ್‌ಗಳು ಜನ ಸಾಮಾನ್ಯರೂ ಉಪಯೋಗಿಸುವಷ್ಟು ಕ್ರಾಂತಿಕಾರಕ ಬದಲಾವಣೆಗಳು ಬಳಕೆಗೆ ಬಂದಾಗ ಅವುಗಳಿಂದ ಆಗಬಹುದಾದ ಉಪಯೋಗಗಳನ್ನು ಕುರಿತು ಬರೆದರು. ಅಷ್ಟೇ ಅಲ್ಲದೆ ಅವುಗಳಿಂದ ಆಗಬಹುದಾದ ಅನಾಹುತಗಳು ಮತ್ತು ಆಕಸ್ಮಿಕಗಳನ್ನು ಸಹ ತಮ್ಮ ಲೇಖನಿಯಿಂದ, ವಿನೋದದ ರೂಪುಗೊಟ್ಟು ಬರೆದರು.

ಮಧ್ಯಮವರ್ಗದ ಎಲ್ಲಾ ವಯೋಮಾನದ ಮಹಿಳೆಯರು ಸುನಂದಮ್ಮನವರ ಅಭಿಮಾನಿ ಓದುಗ ಬಳಗದಲ್ಲಿದ್ದರು.

ಹಾಸ್ಯಸಾಹಿತ್ಯ ಲೇಖಕಿ, ಎಂದೇ ಪ್ರಸಿದ್ಧವಾಗಿದ್ದರೂ ಅವರು ಕೆಲವು ಗಂಭೀರ ಐತಿಹಾಸಿಕ ಸಾಹಿತ್ಯವನ್ನೂ ಸಹ ರಚಿಸಿದ್ದಾರೆ. ಪೌರಾಣಿಕ ರೂಪಕಗಳನ್ನು ಆಕಾಶವಾಣಿಯ ಪ್ರಸಾರ ಕಾರ್ಯಕ್ರಮಗಳಿಗಾಗಿ ಬರೆದಿದ್ದಾರೆ.

ರಾಷ್ಟ್ರೋತ್ಥಾನ ಸಾಹಿತ್ಯದವರು ಪ್ರಕಟಿಸಿದ ಪುಸ್ತಕ ಸಂಪದ ಮಾಲೆಯಲ್ಲಿ ಇವರು ಬರೆದ ತೆನಾಲಿ ರಾಮಕೃಷ್ಣ ಪ್ರಕಟವಾಗಿದೆ. ಕನ್ನಡ, ಸಾಹಿತ್ಯ ಪರಿಷತ್ತಿಗಾಗಿ ಇವರು ರಚಿಸಿಕೊಟ್ಟ ಪುಸ್ತಕ, 'ಆಧುನಿಕ ನಗೆ ಸಾಹಿತ್ಯ' ಈ ಪುಸ್ತಕದಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ಕಾದಂಬರಿ ಕಾವ್ಯ ಪ್ರಬಂಧ, ನಾಟಕ, ಚತುರೋಕ್ತಿ ಚುಟುಕ, ನಗೆಹನಿ ಮುಂತಾದವುಗಳಲ್ಲಿ ಹಾಸ್ಯದ ಹೊನಲು ಹರಿದಿರುವುದನ್ನು ಗುರುತಿಸಿದ್ದಾರೆ. ಹಿಂದಿನ ಹಾಸ್ಯಗಾರರ ನೆನಪಿನೊಂದಿಗೆ ಇಂದಿನ ಹಾಸ್ಯ ಸಾಹಿತಿಗಳ ಬಗ್ಗೆಯೂ ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ.

'ನಗೆ, ನೈಸರ್ಗಿಕ ಸಂಪತ್ತು, ನಗಿಸುವುದು ಮಾನವೀಯ ಕುರುಹು ಮಾನಸಿಕ, ದೈಹಿಕ ಬೆಳವಣಿಗೆಗೆ, ಸೃಷ್ಟಿಕರ್ತ ಪುಕ್ಕಟೆಯಾಗಿ ಕೊಟ್ಟ ದಿವ್ಯೌಷಧ' ಎಂದು ನಿರೂಪಿಸಿದ್ದಾರೆ. ಬಾಲ್ಯದಿಂದ ವೃದ್ಧಾಪ್ಯದವರೆಗೂ ನಗು ತಾಳುವ ವಿವಿಧ ರೂಪಗಳನ್ನು ಬಣ್ಣಿಸಿದ್ದಾರೆ. ಮಗು ಬೆಳೆದಂತೆಲ್ಲ ನಗುವಿನ ರೀತಿ ಹೇಗೆ ಬದಲಾಗುತ್ತಾ ಹೋಗುತ್ತದೆ ಎಂಬುದನ್ನು ವಿವರಿಸಿದ್ದಾರೆ. ಬಾಲ್ಯದ ಮುಗ್ಧ ನಗೆ, ಯೌವ್ವನದ ತುಂಟು ನಗೆ, ನಡು ಹರೆಯದ ಆಳ ನಗೆ, ವೃದ್ಧಾಪ್ಯದ ವಿಷಾದ ನಗೆ. ಅಂತೂ ಮನುಷ್ಯ ನಗುತ್ತಲೇ ಇರುವ ಸತತ ಪ್ರಯತ್ನ ಮಾಡುತ್ತಿರುತ್ತಾನೆ ಎಂದಿದ್ದಾರೆ ಸುನಂದಮ್ಮ.

ನಗೆ ಸಾಹಿತ್ಯದ ಬಗ್ಗೆ ಹಲವಾರು ಅಂಶಗಳನ್ನು ಈ ಪುಸ್ತಕ ದಾಖಲಿಸುತ್ತದೆ. ಇವರು ಬರೆದಿರುವ ಮತ್ತೊಂದು ವಿಶೇಷ ಪುಸ್ತಕವೆಂದರೆ ಕನ್ನಡ ಹಾಸ್ಯ ಸಾಹಿತ್ಯ ಬ್ರಹ್ಮರೆಂದೇ ಖ್ಯಾತರಾಗಿದ್ದ ಡಾ|| ಎಂ. ಶಿವರಾಂ (ರಾಶಿ) ರವರ ಜೀವನ ಚರಿತ್ರೆ, ಚಿಕ್ಕದಾದರೂ ಚೊಕ್ಕವಾಗಿ ಬರೆದಿದ್ದಾರೆ.

ಕೇವಲ ಸಾಹಿತ್ಯ ರಚನೆಗೇ ಸುನಂದಮ್ಮನವರು ತಮ್ಮನ್ನು ಸೀಮಿತಗೊಳಿಸಿಕೊಳ್ಳದೇ ಸಾಮಾಜಿಕ ಹಾಗೂ ಜನಪರ ಚಟುವಟಿಕೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಕರ್ನಾಟಕ ಲೇಖಕಿಯರ ಸಂಘ ಸ್ಥಾಪನೆಯಾದಾಗ ಅದರ ಪ್ರಪ್ರಥಮ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ ಗೌರವ ಇವರ ಪಾಲಿಗೆ ಬಂದಿತು.

ಸುನಂದಮ್ಮನವರ ಸಾಹಿತ್ಯಸಿರಿಗೆ ಸಹೃದಯಿ ಕನ್ನಡ ಓದುಗರಿಂದ ಅತೀವ ಮೆಚ್ಚುಗೆ ಗೌರವಾದರಗಳು ದೊರೆತಿವೆ.

1999ರಲ್ಲಿ ಅಭಿಮಾನಿಗಳು ಅವರಿಗೆ 'ಸುನಂದಾಭಿನಂದನ' ಗ್ರಂಥಾರ್ಪಣೆ ಮಾಡಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ದಾನ ಚಿಂತಾಮಣಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಮೃತ ಮಹೋತ್ಸವ ಸನ್ಮಾನ, ಕರ್ನಾಟಕ ಲೇಖಕಿಯರ ಸಂಘದ ಅನುಪಮಾ ಪ್ರಶಸ್ತಿ, ಮುಂತಾದುವು ಹೆಸರಿಸಬಹುದಾದ ಕೆಲವು ಪ್ರಶಸ್ತಿಗಳು.

ಕನ್ನಡ ಸಾಹಿತ್ಯ ಪ್ರಿಯರನ್ನು ತಮ್ಮ ಹಾಸ್ಯದಿಂದ ರಂಜಿಸಿದ ಸುನಂದಮ್ಮನವರು ತಮ್ಮ ಜೀವನದ ಅಂಚಿನಲ್ಲಿ ನಡು ವಯಸ್ಸಿನ ಐವತ್ತು ವರ್ಷದ ಮಗನನ್ನು, ತಮ್ಮ ಬಾಳ ಸಂಗಾತಿ ವೆಂಕಟ ನಾರಣಪ್ಪನವರನ್ನು ಕಳೆದುಕೊಂಡರು. ಅಲ್ಲದೆ ಅವರ ತಂಗಿ ಮತ್ತು ತಮ್ಮ ಕೃಷ್ಣಸ್ವಾಮಿ ಸಹ ಇವರನ್ನು ಅಗಲಿದರು.

ಈ ಎಲ್ಲಾ ಆತ್ಮೀಯರ ವಿಯೋಗದ ದುಃಖವನ್ನು ಭರಿಸಿಕೊಂಡೇ ಅವರು ತಮ್ಮ ಲೇಖನಿಯನ್ನು ಮುಂದುವರೆಸಿ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಸಂಕಟಮಯ ಪರಿಸ್ಥಿತಿಯಲ್ಲಿ ತಮ್ಮನ್ನು ಮತ್ತು ಲೇಖನಗಳನ್ನು ಬರೆಯಲು ಪ್ರೇರೇಪಿಸಿ ಪ್ರೋತ್ಸಾಹಿಸಿದ ಪತ್ರಿಕಾ ಸಂಪಾದಕರು, ಆಕಾಶವಾಣಿಯವರು ಹಾಗೂ ತಮ್ಮ ಪ್ರೀತಿಯ ಓದುಗ ಬಳಗದ ಒತ್ತಾಯವೇ ತಮ್ಮ ಜೀವನ ಪ್ರೀತಿಗೆ ಕಾರಣವಾಯಿತೆಂದು ಕೃತಜ್ಞತೆಯಿಂದ ನೆನೆಯುತ್ತಿದ್ದರು.

ತಮ್ಮ ವೃದ್ಧಾಪ್ಯದಲ್ಲಿ ವಯೋಸಹಜವಾದ ಮೊಣಕಾಲಿನ ನೋವೊಂದನ್ನು ಬಿಟ್ಟರೆ ಮತ್ಯಾವ ರೋಗವೂ ಅವರನ್ನು ಅಂಟಿರಲಿಲ್ಲ.

27–01–2006 ರಂದು ಸಂಜೆ ಆರರ ಸಮಯ ದೂರದರ್ಶನದಲ್ಲಿ ಕಾರ್ಯಕ್ರಮವೊಂದನ್ನು ನೋಡುತ್ತಿದ್ದ ಸುನಂದಮ್ಮನವರು ಹಾಗೆಯೇ ತಾವು ಕುಳಿತಿದ್ದ ಸೋಫಾದಲ್ಲಿ ಕಣ್ಮುಚ್ಚಿದರು.

ತಮ್ಮ ವಿಪುಲ ಸಾಹಿತ್ಯದಿಂದ ಕನ್ನಡ ಓದುಗರನ್ನು ನಕ್ಕು ನಲಿಸಿದ್ದ ಅವರು ನರಳದೆ, ಪರಾವಲಂಬಿಯಾಗದೆ ಯಾರಿಗೂ ಹೊರೆಯಾಗದೆ ಈ ಲೋಕವನ್ನು ಬಿಟ್ಟು ಅಗಲಿದರು.

* * *



ಪತಿ ವೆಂಕಟರಮಣಪ್ಪನವರೊಂದಿಗೆ ಟಿ. ಸುನಂದಮ್ಮ

ಟಿ. ಸುನಂದಮ್ಮ ಸ್ಮಾರಕ ಪ್ರತಿಷ್ಠಾನ

ಕನ್ನಡದಲ್ಲಿ ಹಾಸ್ಯ ಸಾಹಿತ್ಯ ಎಂದ ಕೂಡಲೇ ನೆನಪಾಗುವುದು ಶ್ರೀಮತಿ. ಟಿ. ಸುನಂದಮ್ಮ ಪೂರ್ಣಪ್ರಮಾಣದ ಹಾಸ್ಯ ಸಾಹಿತ್ಯ ಬರೆಯತೊಡಗಿದ ಮಹಿಳೆಯರಲ್ಲಿ ಇವರೇ ಮೊದಲಿಗರೆನ್ನ ಬಹುದು.

ತಮ್ಮ ತಿಳಿಹಾಸ್ಯದ ಮೂಲಕ ಓದುಗರನ್ನು ನಕ್ಕು ನಗಿಸಿ ಹಲವಾರು ದಶಕಗಳ ಕಾಲ ಹಾಸ್ಯ ಬರಹವನ್ನು ನೀಡಿದವರು ಇವರು.

ಇವರ ನೆನಪಿಲ್ಲಿ ಅವರ ಬಂಧು ಶ್ರೀ ಎಂ. ನರಸಿಂಹಮೂರ್ತಿಯವರು 'ಟಿ. ಸುನಂದಮ್ಮ ಸ್ಮಾರಕ ಪ್ರತಿಷ್ಠಾನ'ವನ್ನು ಸ್ಥಾಪಿಸಿ ಅದರ ಮುಖಾಂತರ ಅವರ ಎಲ್ಲಾ ಲೇಖನಗಳನ್ನು ಈಗಿನ ಸಾಹಿತ್ಯ ಪ್ರಿಯರಿಗೆ ನೀಡಲು ಉದ್ದೇಶಿಸಿದ್ದಾರೆ. 2019ರಲ್ಲಿ ಸ್ಥಾಪಿತವಾದ ಈ ಪ್ರತಿಷ್ಠಾನದ ಮತ್ತೊಂದು ಆಶಯವೆಂದರೆ ಸುನಂದಮ್ಮನವರ ಹೆಸರಿನಲ್ಲಿ ಪ್ರತೀವರ್ಷ ಕನ್ನಡದ ಒಬ್ಬ ಲೇಖಕಿಗೆ ಪ್ರಶಸ್ತಿಯನ್ನು ನೀಡುವುದು. ಅದರಂತೆ 2019ರಲ್ಲಿ ಪ್ರತಿಷ್ಠಾನದಿಂದ 2019ರ ಸಾಲಿನ ಪ್ರಶಸ್ತಿಯನ್ನು ಕನ್ನಡದ ಶ್ರೇಷ್ಠ ಲೇಖಕಿಗೆ ವೈದೇಹಿಯವರಿಗೆ ನೀಡಲಾಯಿತು.

ಅಲ್ಲದೆ ಟಿ. ಸುನಂದಮ್ಮ ಸಾಹಿತ್ಯ ಸಂಪುಟ–1 ಹಾಗೂ ಸಂಪುಟ–2 ಈಗಾಗಲೇ ಪ್ರಕಟಿಸಲಾಗಿದೆ. ಪ್ರತಿಷ್ಠಾನದಿಂದ ಉದಯೋನ್ಮುಖ ಮಹಿಳಾ ಲೇಖಕಿಯರನ್ನು ಬೆಳಕಿಗೆ ತರುವ ಪ್ರಯತ್ನ ನಡೆಯುತ್ತಿದೆ.

ಟಿ. ಸುನಂದಮ್ಮ ಸ್ಮಾರಕ ಪ್ರತಿಷ್ಠಾನ

ಶ್ರೀ ಎಂ. ನರಸಿಂಹಮೂರ್ತಿ	ಅಧ್ಯಕ್ಷರು
ಡಾ. ವಸುಂಧರ ಭೂಪತಿ	ಉಪಾಧ್ಯಕ್ಷರು
ಡಾ. ಆರ್.ಪೂರ್ಣಿಮಾ	ಕಾರ್ಯದರ್ಶಿ
ಶ್ರೀಮತಿ ಶಶಿಕಲ ನರಸಿಂಹಮೂರ್ತಿ	ಖಜಾಂಚಿ
ಶ್ರೀ ದೀಪಕ್ ಶ್ರೀನಾಥ್	ಸದಸ್ಯರು
ಶ್ರೀಮತಿ ನೇಮಿಚಂದ್ರ	ಸದಸ್ಯರು
ಶ್ರೀ ಎನ್.ಆನಂದರಾಮರಾವ್	ಸದಸ್ಯರು

ಟಿ. ಸುನಂದಮ್ಮ ಅವರಿಗೆ ಸಂದ ಸನ್ಮಾನ ಪ್ರಶಸ್ತಿಗಳು

* 1980 ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
* 1990 ಕನ್ನಡ ರಾಜ್ಯೋತ್ಸವ ಪ್ರಶಸ್ತಿ
* 1990 ಕನ್ನಡ ಸಾಹಿತ್ಯ ಪರಿಷತ್ ಅಮೃತಮಹೋತ್ಸವ ಸನ್ಮಾನ
* 1991 ಮುಂಬೈ ಕರ್ನಾಟಕ ಸಂಘದ ಹಾಗೂ ಚೆನ್ನೈ ಕರ್ನಾಟಕ ಸಂಘಗಳ ಸನ್ಮಾನ
* 1991 ದಾವಣಗೆರೆಯಲ್ಲಿ ನಡೆದ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿ ಅಧ್ಯಕ್ಷತೆ
* 1993 ಕರ್ನಾಟಕ ಲೇಖಿಕಿಯರ ಸಂಘದಿಂದ 'ಟಿ. ಸುನಂದಮ್ಮನವರ ಸಮಗ್ರ ಹಾಸ್ಯ ಸಾಹಿತ್ಯ' ಬಿಡುಗಡೆ, ಮತ್ತು ಸನ್ಮಾನ.
* 1994 ಕನ್ನಡ ಸಾಹಿತ್ಯ ಪರಿಷತ್ತು ಲಕ್ಕುಂಡಿಯಲ್ಲಿ ಆಯೋಜಿಸಿದ್ದ 'ಅತ್ತಿಮಬ್ಬೆ' ಸಹಸ್ರ ಮಾನೋತ್ಸವದ ಸರ್ವಾಧ್ಯಕ್ಷತೆ
* 1996 ಕರ್ನಾಟಕ ಸರ್ಕಾರ ಸ್ಥಾಪಿಸಿದ 'ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ' ಯನ್ನು ಪಡೆದುಕೊಂಡ ಮೊದಲಿಗರು, ಟಿ. ಸುನಂದಮ್ಮ.
* ಚಂದ್ರಕಲಾ ಲಿಪಿಪ್ರಾಜ್ಞೆಪ್ರಶಸ್ತಿ
* ಚಿತ್ರದುರ್ಗದ ಬೃಹನ್ಮಠದ ಶ್ರೀ ಮುರುಘರಾಜೇಂದ್ರ ಸ್ವಾಮಿಯವರ ಸನ್ಮಾನ, 'ಸಾಹಿತ್ಯ ರತ್ನ' ಗೌರವ ಫಲಕ
* ಕನಕಪುರದಲ್ಲಿ ನಡೆದ 61ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿತೆ.
* 2000 ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆ 'ಸಾಲು ದೀಪಗಳು' ಪರಿಷ್ಕೃತ ಕೃತಿಯಲ್ಲಿ ಸೇರ್ಪಡೆ.
* 2001 ಟಿ. ಸುನಂದಮ್ಮನವರ ಬದುಕು ಬರಹವನ್ನು ಉಪನ್ಯಾಸಕಿಯೊಬ್ಬರು ಡಾಕ್ಟರೇಟ್ ಪ್ರಬಂಧಕ್ಕೆ ವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ.
* 2003 ವಿಶ್ವೇಶ್ವರಯ್ಯ ನವರತ್ನ ಪ್ರಶಸ್ತಿ
* 2004 ಅನುಪಮಾ ಪ್ರಶಸ್ತಿ
* 2004 ಹಾಸ್ಯೋತ್ಸವ ದಶಮಾನೋತ್ಸವ ಸನ್ಮಾನ.

ಸುನಂದಮ್ಮನವರ ಸಾಹಿತ್ಯ ಕೃತಿಗಳು

ಸಂಕಲನಗಳು

ಜಂಭದ ಚೀಲ

ಪೆಪ್ಪರಮೆಂಟು

ಬಣ್ಣದ ಚಿಟ್ಟೆ

ಮುತ್ತಿನ ಚೆಂಡು

ರೂಢಿಗಾಡಿ

ವೃಕ್ಷವಾಹನ

ನನ್ನ ಅತ್ತೆಗಿರಿ

ನಗೆನಾಟಕಗಳು

ಆದರ್ಶದ ಆಡಂಬರ

ಕೂಸು ಹುಟ್ಟುವುದಕ್ಕೆ ಮುಂಚೆ

ಗೃಹಲಕ್ಷ್ಮಿ

ಬಾದರಾಯಣ

ಚಿಕ್ಕಪ್ಪನ ಉಯಿಲು

ಚೈತ್ರ ಚುಕ್ಕಿ

ಸದಾಶಿವನ ಸ್ವಯಂ ವಧು

ಶಿಶು ಸಾಹಿತ್ಯ

ತೆನಾಲಿ ರಾಮಕೃಷ್ಣ (ಭಾರತ ಭಾರತಿ ಪುಸ್ತಕ ಮಾಲೆಗೆ ಬರೆದ ಲೇಖನ)

ಅವರ ಸಮಗ್ರ ಸಾಹಿತ್ಯ 1993ರಲ್ಲಿ ಪ್ರಕಟಗೊಂಡಿದೆ.

"ಕನ್ನಡ ಸಾಹಿತ್ಯದಲ್ಲಿ ಸುನಂದಮ್ಮನವರ ಬರವಣಿಗೆ ಒಂದು ವಿಶೇಷ ರೀತಿಯದು" ಕಥೆ ಕಾದಂಬರಿಗಳು ಹೇರಳವಾಗಿ ಪ್ರಕಟವಾಗುತ್ತಿವೆ. ಅದಕ್ಕೆ ಬರಿಯ ಹಾಸ್ಯ ವಿಡಂಬನೆಗಳಿಗೆ ಮಾತ್ರ ಮೀಸಲಾದ ಸಾಹಿತ್ಯ ಅಪರೂಪ ವಿಧದ ಸಾಹಿತ್ಯದಲ್ಲಿ ಸುನಂದಮ್ಮನವರು ಪಳಗಿದ ಕೈ. ಅವರ ಬರಹದಲ್ಲಿ ಒಬ್ಬರನ್ನೂ ನೋಯಿಸದ, ನವಿರಾದ ಹಾಸ್ಯವಿದೆ. ಜೀವನದ ಕಹಿ ಪ್ರಸಂಗಗಳಲ್ಲೂ ಮರೆಯಾಗಿರುವ ಹಾಸ್ಯ ರೇಖೆಯನ್ನು ಗುರುತಿಸುವ ಚಾತುರ್ಯ ಅಡಗಿದೆ. ಆ ನಗೆಯ ಹಿಂದೆ ಗಾಢವಾದ ಲೋಕಾನುಭವ, ಜೀವನದ ಅನಂತ ಮುಖಗಳಲ್ಲಿ ಅಡಗಿರುವ ಪಕ್ವವಾದ ಸತ್ಯ ಜಿಜ್ಞಾಸೆಯಿದೆ.

ಹೆಚ್.ವಿ. ಸಾವಿತ್ರಮ್ಮ, ಹಿರಿಯ ಲೇಖಕಿ

* * *

ಸುನಂದಮ್ಮನವರು ಹಾಸ್ಯದ ಶಕ್ತಿ ಗಾಜನ್ನು ಅಂಟಿಸಿಕೊಂಡು ಮಹಿಳೆಯರಿಗೆಂದು ಉದ್ದಗಲಕ್ಕೂ ಸಂಚರಿಸಿ ಹೆಣ್ಣಿನ ವರ್ತನೆಯ ವಿವಿಧ ಮುಖಗಳನ್ನು ಚಿತ್ರಿಸಿದ್ದಾರೆ. ಅಲ್ಲದೆ ಅವರ ಹರಟೆಗಳಲ್ಲಿ ನಗೆ, ಕಥೆಗಳಲ್ಲಿ ಕನ್ನಡದ ಮಧ್ಯಮ ವರ್ಗದ ಮಹಿಳೆ ಕಾಲಾವಧಿಯಲ್ಲಿ ವಿವಿಧ ಮಜಲುಗಳಲ್ಲಿ ಬೆಳೆದು ಬಂದ ಕಥನವಿದೆ.

ಅ.ರಾ.ಮಿತ್ರ. ಹಿರಿಯ ಲೇಖಕ.

* * *



ಲಲಿತಸಾಹಿತ್ಯ ಪೀಳಿಗೆಯ ಅಕ್ಕ ಟಿ. ಸುನಂದಮ್ಮ

ಡಾ. ಶಾಂತಾ ನಾಗರಾಜ್

ಅರವತ್ತರ ದಶಕದಲ್ಲಿ ಬರವಣಿಗೆಗೆ ತೊಡಗಿಕೊಳ್ಳಲು ಹಾತೊರೆಯುತ್ತಿದ್ದ ನಮ್ಮಂಥಾ ಯುವ ಪೀಳಿಗೆಗೆ ನಮ್ಮ ಮುಂದೆ ಎರಡು ಸುಂದರ ಮಾದರಿಗಳಿದ್ದವು. ಮೊದಲನೆಯದು ತಮ್ಮ ನವಿರಾದ ಭಾಷೆಯಿಂದಲೇ ಪ್ರೀತಿ ಪ್ರೇಮಗಳ ಲೋಕದಲ್ಲಿ ಓದುಗರನ್ನು ವಿಹರಿಸುವಂತೆ ಮಾಡುತ್ತಿದ್ದ ತ್ರಿವೇಣಿಯವರ ಮಾದರಿ. ಎರಡನೆಯದೇ ಆಡುಮಾತುಗಳನ್ನೇ ಮಾರ್ಮಿಕವಾಗಿ ಬಳಸುತ್ತಾ ನಗೆಯುಕ್ಕಿ ಬರುವಂತೆ ಬರೆಯುತ್ತಿದ್ದ ಟಿ. ಸುನಂದಮ್ಮನವರದು ಮತ್ತೊಂದು ಮಾದರಿ. ಚಂದಮಾಮಗಳ ಓದಿನಿಂದ ಹೊರಬಂದು ಮತ್ತೊಂದು ಓದಿಗೆ ನಮ್ಮಂಥವರನ್ನು ಜಿಗಿಯುವಂತೆ ಮಾಡಿದ್ದೇ ಕೊರವಂಜಿ ಪತ್ರಿಕೆ. ಅದರಲ್ಲಿ ಹಲವು ದಶಕಗಳ ಕಾಲ ಹಾಸ್ಯ ಸಾಹಿತ್ಯವನ್ನು ಬರೆದ ಏಕೈಕ ಮಹಿಳೆ ಟಿ. ಸುನಂದಮ್ಮನವರು. ಹೀಗಾಗಿ ಹೈಸ್ಕೂಲಿನಲ್ಲಿ ಓದುತ್ತಿದ್ದ ನನಗೆ ಮೊದಲ ಮಾದರಿಯೇ ಸುನಂದಮ್ಮನವರು. ಶಾಲೆಯ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆಯುತ್ತಿದ್ದ ನಾನು ಮೊದಲು ಬರೆದದ್ದು, ನಗೆ ಲೇಖನವನ್ನು. ಮುಂದೊಂದು ದಿನ ಸುನಂದಮ್ಮನವರು ಪರಿಚಿತರಾದ ಮೇಲೆ ಹೇಳಿದರು. "ನಿಮ್ಮ ನಗೆ ಲೇಖನಗಳನ್ನು ನಾನು ಸುಧಾ ವಾರಪತ್ರಿಕೆಯಲ್ಲಿ ಗಮನಿಸುತ್ತಿದ್ದೆ. ನನಗೆ ಖುಷಿಯಾಗಿತ್ತು. ನನ್ನ ಮುಂದಿನ ಪೀಳಿಗೆ ನನ್ನ ದಾರಿಯನ್ನು ಹಿಡಿಯುತ್ತಿದೆ ಎಂದು. ಆದರೆ ನೀವು ಗಂಭೀರ ಸಾಹಿತ್ಯಕ್ಕೆ ಹೊರಳಿಕೊಂಡು ಬಿಟ್ಟಿರಿ" ಅವರ ಮಾತಿನಲ್ಲಿ ಅರ್ಧ ಮೆಚ್ಚುಗೆ ಅರ್ಧ ನಿರಾಸೆಯೂ ಇತ್ತು.

ಸುನಂದಮ್ಮನವರು ನನಗೆ ಪರಿಚಿತರಾದದ್ದು ಒಂದು ವಿಚಿತ್ರ ಸನ್ನಿವೇಶದಲ್ಲಿ. ಅದು 1975ನೇ ಇಸವಿ. ಆಗ ತಾನೇ ನಾನು ಶ್ರೀ ಬಾಬುಕೃಷ್ಣಮೂರ್ತಿರವರ 'ಅಜೇಯ' ಎನ್ನುವ ಏಳುನೂರು ಪುಟಗಳ ಬೃಹತ್ ಗ್ರಂಥವನ್ನು ಇಪ್ಪತ್ಮೂರು ಪುಟಕ್ಕೆ ಕಂಡೆನ್ಸ್ ಮಾಡಿದ್ದು. 'ಕಸ್ತೂರಿ' ಪತ್ರಿಕೆಯ ಪುಸ್ತಕ ವಿಭಾಗದಲ್ಲಿ ಪ್ರಕಟವಾಗಿತ್ತು. ನಾಲ್ಕು ಗೋಡೆಗಳ ನಡುವೆಯೇ ಒಂದು ಕೋಶ ಕಟ್ಟಿಕೊಂಡು ಕಥೆ, ಕವನ ಮತ್ತು ಲಲಿತ ಪ್ರಬಂಧಗಳನ್ನು ಬರೆಯುತ್ತಾ, ಪತ್ರಿಕೆಗಳಿಗೆ ಕಳಿಸುತ್ತಾ, ಪ್ರಕಟವಾದಾಗ ಉಬ್ಬುತ್ತಾ, ತಿರಸ್ಕೃತವಾದಾಗ ಕುಗ್ಗುತ್ತಾ, ಓದು ಮತ್ತು ಬರವಣಿಗೆಯಲ್ಲೇ ಮುಳುಗಿದ್ದ ನನಗೆ ಅಜೇಯ ಪುಸ್ತಕವನ್ನು ಪರಿಚಯಿಸುವ ಸಲುವಾಗಿ ಬಾಬುರವರ ಪರಿಚಯ ಅಗತ್ಯವಾಯಿತು. ಅವರ ಪರಿಚಯವೇ ಮೊಟ್ಟ ಮೊದಲ ಲೇಖಕರ ಪರಿಚಯ. ಅವರಿಂದ ನನಗೊಂದು ಪತ್ರ ಬಂತು (ಟೆಲಿಫೋನ್ ಮನೆಯಲ್ಲಿ ಇಲ್ಲದ ಕಾಲವದು).

ನಿರುಪಮಾ ಎನ್ನುವ ಲೇಖಕಿಯೊಬ್ಬರ ಮನೆಯಲ್ಲಿ ಇಂಥಾ ದಿನ ಇಷ್ಟು ಗಂಟೆಗೆ ಒಂದು ಮೀಟಿಂಗ್ ಇದೆ ಬನ್ನಿ ಎನ್ನುವ ಸಂದೇಶದೊಡನೆ ಕೆಳಗಡೆ ನಿರುಪಮಾರವರ ವಿಳಾಸ. ಯಾವ

ಕಾರಣಕ್ಕಾಗಿ ಮೀಟಿಂಗ್, ಯಾರೆಲ್ಲಾ ಇರುತ್ತಾರೆ? ಏನೊಂದೂ ಗೊತ್ತಿಲ್ಲದೇ ಅರ್ಧ ಭಯ ಅರ್ಧ ಕುತೂಹಲದಿಂದ ಅವರು ಬರೆದ ವಿಳಾಸ ಹುಡುಕಿ ಹೋದೆ. ಬಾಗಿಲಲ್ಲೇ ಬಾಬುರವರು ಸ್ವಾಗತಿಸಿ ಒಳಗೆ ಕರೆದೊಯ್ದು ದೊಡ್ಡ ಹಾಲಿನಲ್ಲಿ ಕುಳಿತಿದ್ದವರಿಗೆ "ಇವರೊಬ್ಬ ಹೊಸ ಲೇಖಕಿ" ಎಂದು ಪರಿಚಯಿಸಿ, ಅಲ್ಲಿದ್ದ ಒಬ್ಬೊಬ್ಬರದೇ ಹೆಸರು ಹೇಳುತ್ತಾ ಹೋದರು. ಮೊದಲ ಹೆಸರೇ ಟಿ. ಸುನಂದಮ್ಮ! ಹೆಚ್.ಎಸ್. ಪಾರ್ವತಿ, ನೀಳಾದೇವಿ, ಎ. ಪಂಕಜಾ, ಎನ್. ಪಂಕಜಾ, ಕುಲಶೇಖರಿ, ಸರೋಜಾ ನಾರಾಯಣರಾವ್, ಸುನೀತಿಕೃಷ್ಣಸ್ವಾಮಿ !!! ಅಂದಿನ ಮುಖ್ಯವಾಹಿನಿಯಲ್ಲಿದ್ದ ಲೇಖಕಿಯರೆಲ್ಲಾ ಅಲ್ಲಿದ್ದರು. ನನಗಂತೂ ನಾನು ಯಾವ ಪ್ರಪಂಚಕ್ಕೆ ಬಂದೆ ಎನ್ನುವಷ್ಟು ಬೆರಗಾಗಿತ್ತು!

ಹೀಗೆ ಸುನಂದಮ್ಮನವರ ಪರಿಚಯವಾದದ್ದು ಮುಂದೆ ಗಾಢವಾಗುತ್ತಾ ಹೋಯಿತು. ಆ ಕಾಲಘಟ್ಟದಲ್ಲಿ ಬೆಂಗಳೂರಿನ ಮುಂಚೂಣಿಯಲ್ಲಿದ್ದ ಲೇಖಕಿಯರು 'ಸಾಹಿತ್ಯ ಕೂಟ' ಎನ್ನುವ ಒಂದು ಸಣ್ಣ ಸಂಘಟನೆಯನ್ನು ಮಾಡಿಕೊಂಡಿದ್ದರು. ಅದೇನೂ ನೋಂದಾವಣಿ ಮಾಡಿಕೊಂಡು ಸಾರ್ವಜನಿಕರನ್ನೆಲ್ಲಾ ಸೇರಿಸಿಕೊಳ್ಳುವಂಥಾ ಸಂಘವಲ್ಲ, ಒಂದು ಸ್ನೇಹಕೂಟವಷ್ಟೇ. ಇದರ ಉದ್ದೇಶ ಬಹಳ ಸರಳ. ಲೇಖಕಿಯರು ತಮ್ಮ ಸ್ನೇಹ ಮತ್ತು ಜ್ಞಾನದ ಅಭಿವೃದ್ಧಿಗಾಗಿ ಮಾಡಿಕೊಂಡ ವ್ಯವಸ್ಥೆ. ತಿಂಗಳಿಗೊಮ್ಮೆ ಯಾರದಾದರೂ ಮನೆಯಲ್ಲಿ ಸೇರುತ್ತಿದ್ದರು. ಯಾವ ಇಸಂಗೂ ಒಳಗಾಗದೇ ಹೊಸ ಪುಸ್ತಕಗಳನ್ನು ವಿಮರ್ಶೆ ಮಾಡುವುದು ಮತ್ತು ಕೂಟದ ಗೆಳತಿಯವರು ತಾವು ಬರೆದ ಕಥೆ, ಕವನ, ಲೇಖನ ಮುಂತಾದುವನ್ನು ಮೊದಲ ಬಾರಿ ಇಲ್ಲಿ ಓದಿ, ಹಿರಿಯರು ಏನಾದರೂ ಸಲಹೆ ಸೂಚನೆ ಕೊಟ್ಟರೆ ಸರಿಪಡಿಸಿ ನಂತರ ಪತ್ರಿಕೆಗೆ ಕಳಿಸುವುದೋ ಅಥವಾ ಮುದ್ರಿಸುವುದೋ ಮಾಡುತ್ತಿದ್ದರು. ಮುಂದೆ 'ಕರ್ನಾಟಕ ಲೇಖಕಿಯರ ಸಂಘ' ಎನ್ನುವ ಬೃಹತ್ ಸಂಸ್ಥೆಯ ಹುಟ್ಟಿಗೆ ಈ ಪುಟ್ಟ ಸ್ನೇಹಕೂಟ ಪ್ರಚೋದನೆಯನ್ನು ನೀಡಿದ್ದು ಸುಳ್ಳಲ್ಲ. ಈ ಕೂಟದಲ್ಲಿ ನನ್ನನ್ನೂ ಉದಾರ ಮನಸ್ಸಿನಿಂದ ಪಾರ್ವತಿ ಮತ್ತು ಸುನಂದಮ್ಮನವರು ಸೇರ್ಪಡೆ ಮಾಡಿದರು. ನಾನು ಅವರ ಮುಂದೆ ಸಾಹಿತ್ಯವಲಯದಲ್ಲಿ ಅಂಬೆಗಾಲಿಡುವ ಕೂಸಾಗಿದ್ದೆ. ಆದರೆ ಅವರು ಸಮಾನ ಮನ್ನಣೆಯನ್ನು ನೀಡಿದರು. ನನ್ನ ಬರಹಗಳನ್ನು ಮೆಚ್ಚಿದರು. ತಿದ್ದಿತೀಡಿ ನನ್ನ ಭಾಷೆ ಹದಗೊಳ್ಳುವಂತೆ ಮಾಡಿದ್ದೇ ಈ ಸ್ನೇಹಕೂಟದ ಸ್ನೇಹಿತೆಯರು ಎನ್ನುವುದು ನನ್ನ ಪಾಲಿನ ಪುಣ್ಯ!

ಸುನಂದಮ್ಮನವರ ಸ್ನೇಹ ಮತ್ತೂ ಗಾಢವಾದದ್ದು 1989-90ರಲ್ಲಿ. ಅಷ್ಟು ಹೊತ್ತಿಗಾಗಲೇ ಲೇಖಕಿಯರ ದಂಡು ದಂಡೇ ಸೃಷ್ಟಿಯಾಗಿತ್ತು. ದುರಂತವೆಂದರೆ ಈಗಿನಂತೆ ಪುಸ್ತಕ ಪ್ರಕಾಶನ ಒಂದು ಉದ್ಯಮವಾಗಿ ಬೆಳೆದಿರಲಿಲ್ಲ. ಕೆಲವು ಲೇಖಕಿಯರಂತೂ ತಾವೇ ಹಣವ್ಯಯಿಸಿ ಪ್ರಕಟಿಸಿ, ಅದನ್ನು ಮಾರಾಟ ಮಾಡುವ ಪರಿ ತಿಳಿಯದೇ ಮನೆತುಂಬಾ ಪುಸ್ತಕ ಹರಡಿಕೊಂಡು ತೊಳಲಾಡುತ್ತಿದ್ದರು. ಮೊದಲ ಪ್ರಕಟಣೆಯೇ ಈ ಚೆಂದವಾದರೆ ಮರು ಮುದ್ರಣದ ಪಾಡಂತೂ ಹೇಳುವುದಕ್ಕೇ ಸಾಧ್ಯವಿಲ್ಲದಂಥಾ ಸ್ಥಿತಿ. ಈ ಬಿಕ್ಕಟ್ಟು ಸುನಂದಮ್ಮನವರನ್ನೂ ಕಾಡುತ್ತಿತ್ತು. ಒಮ್ಮೆ

ಅವರ ಮನೆಗೆ ಹೋದಾಗ ಈ ಸಂಕಟವನ್ನು ತೋಡಿಕೊಂಡರು. ಅವರ ಎಷ್ಟೋ ನಾಟಕಗಳು ಆಕಾಶವಾಣಿಯಲ್ಲಿ ಮತ್ತು ಶಾಲಾಕಾಲೇಜುಗಳ ವೇದಿಕೆಯಲ್ಲಿ ಪ್ರಯೋಗಕ್ಕೆ ಒಳಪಟ್ಟಿದ್ದರೂ ಅವು ಇನ್ನೂ ಮುದ್ರಣದ ಭಾಗ್ಯ ಕಂಡಿರಲಿಲ್ಲ. ಸಾಕಷ್ಟು ಜನಪ್ರಿಯವಾದ ಅವರ ಅನೇಕ ಮುದ್ರಿತ ಕೃತಿಗಳ ಪ್ರತಿಗಳು ಮುಗಿದು ಜನರ ಬೇಡಿಕೆಯಿದ್ದರೂ ಮರು ಮುದ್ರಣವಾಗಿರಲಿಲ್ಲ. ಅವರ ನಂತರ ಬೆಳಕಿಗೆ ಬಂದ ಅನೇಕ ಲೇಖಕರ ಕೃತಿಗಳು ಸಮಗ್ರ ಸಾಹಿತ್ಯವಾಗಿ ಬೆಳಕು ಕಂಡಿದ್ದರೂ ಇವರ ಬರವಣಿಗೆಗೆ ಆ ಭಾಗ್ಯ ದಕ್ಕಿರಲಿಲ್ಲ. ಇದನ್ನೆಲ್ಲಾ ಅವರು ಹೇಳಿದಾಗ ಇದು ಅವರದಷ್ಟೇ ಕೊರಗಲ್ಲ. ಕನ್ನಡದ ವ್ಯವಸ್ಥೆಯ ಕೊರತೆ ಎನಿಸಿತು. ಆ ಹೊತ್ತಿಗೆ ನಾನು ಲೇಖಕಿಯರ ಸಂಘದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಾ ದಶಕವೇ ಕಳೆದಿತ್ತು. ಕಾರ್ಯಕ್ರಮ ಗಳಿಗಾಗಿ ಇಡೀ ಕರ್ನಾಟಕವನ್ನೆಲ್ಲಾ ಸುತ್ತುತ್ತಿದ್ದ ನನಗೆ ಅನೇಕ ಲೇಖಕಿಯರ ಮತ್ತು ಪ್ರಕಾಶಕರ ಪರಿಚಯವಾಗಿತ್ತು. ಅವರಲ್ಲಿ ಹರಿಹರದ ಲೇಖಕಿ ಶ್ರೀಮತಿ ಲಲಿತಮ್ಮ ಡಾ. ಚಂದ್ರಶೇಖರ್ ಅವರೂ ಒಬ್ಬರು. ಇಲ್ಲಿ ಒಂದೆರಡು ಸಂಗತಿಗಳನ್ನು ಶ್ರೀಮತಿ ಲಲಿತಮ್ಮನವರ ಬಗ್ಗೆ ಹೇಳಲೇಬೇಕು. ಇದು ಸುನಂದಮ್ಮನವರ ಸಮಗ್ರಸಾಹಿತ್ಯದ ಕೃತಿ ಹೊರಬರುವುದಕ್ಕೆ ಕಾರಣವಾದ ಸಂಗತಿಗಳು. ಕನ್ನಡ ಮಹಿಳಾ ಸಾಹಿತಿಯ ವಲಯದಲ್ಲಿ ಸ್ನೇಹಸೌರಭವನ್ನು ಸೂಸುವ, ಫಲಾಪೇಕ್ಷೆಯಿಲ್ಲದೇ ಲೇಖಕಿಯರನ್ನು ಆದರಿಸುವ, ತನ್ನದೇ ಖರ್ಚಿನಲ್ಲಿ ಲೇಖಕಿಯವರ ಕಾರ್ಯಕ್ರಮಕ್ಕೆ ಹರಿಹರದಿಂದ ಬೆಂಗಳೂರಿಗೆ ಬರುವ ಮತ್ತು ಎಲ್ಲರಿಗೂ ವಸ್ತ್ರದಾನ ಮಾಡುತ್ತಾ ತನ್ನ ಮನೆಗೆ ಹೋದವರಿಗೆ ತೌರಿನ ತಂಪನ್ನು ನೀಡುವ ಏಕೈಕ ಮಹಿಳೆ ಯೆಂದರೆ ಶ್ರೀಮತಿ ಲಲಿತಮ್ಮನವರು. ಅವರ ಸ್ನೇಹದ ಸವಿಯನ್ನು ನಾನು ಲೇಖಕಿಯರ ಸಂಘದ ಕಾರ್ಯದರ್ಶಿಯಾದಾಗಿನಿಂದ ಅನುಭವಿಸುತ್ತಿದ್ದೆ. ಈ ನಡುವೆ ನನ್ನ ಮಗಳನ್ನು ದಾವಣಗೆರೆ ಯಲ್ಲಿರುವ ವರನಿಗೆ ಕೊಟ್ಟು ಮದುವೆ ಮಾಡಿದ್ದರಿಂದ ನಾನು ಆಗಾಗ್ಗೆ ಮಗಳ ಮನೆಗೆ ಹೋಗುತ್ತಿದ್ದೆ. ಹಾಗೆ ಹೋದಾಗಲೆಲ್ಲಾ ಹರಿಹರದ ಲಲಿತಮ್ಮನವರ ಮನೆಗೂ ಒಮ್ಮೆ ಭೇಟಿ ಕೊಡುವುದು ರೂಢಿಯೇ ಆಗಿ ಹೋಗಿತ್ತು. ಕಾರ್ಯಕಾರಣ ಸಂಬಂಧವೆಂದರೆ ಇದೇ ಇರಬೇಕು. ಸುನಂದಮ್ಮನವರು ತಮ್ಮ ಸಾಹಿತ್ಯದ ಮರು ಮುದ್ರಣದ ಬಗ್ಗೆ ಮಾತಾಡಿದ ಕೆಲವೇ ದಿನಗಳಲ್ಲಿ ಮಗಳ ಮನೆಗೆ ಹೋದವಳು ಹರಿಹರಕ್ಕೂ ಹೋದೆ. ನಾನು ಲಲಿತಮ್ಮನವರ ಮನೆಗೂ ಒಮ್ಮೆ ಬೇಟಿಕೊಡುವುದು ರೂಢಿಯೇ ಆಗಿಹೋಗಿತ್ತು. ಕಾರ್ಯಕಾರಣ ಸಂಬಂಧವೆಂದರೆ ಇದೇ ಇರಬೇಕು. ಸುನಂದಮ್ಮನವರು ತಮ್ಮ ಸಾಹಿತ್ಯದ ಮರು ಮುದ್ರಣದ ಬಗ್ಗೆ ಮಾತಾಡಿದ ಕೆಲವೇ ದಿನಗಳಲ್ಲಿ ಮಗಳ ಮನೆಗೆ ಹೋದವಳು ಹರಿಹರಕ್ಕೂ ಹೋದೆ. ನಾನು ಲಲಿತಮ್ಮನವರ ಮನೆಗೆ ಹೋದಾಗ ಅದಾಗಲೇ ಅವರ ಮನೆಗೆ ಬಂದಿದ್ದ ಮಹನೀಯರೊಬ್ಬರನ್ನು ಪರಿಚಯ ಮಾಡಿಸುತ್ತಾ "ಇವರು ಪ್ರಕಾಶರಾವ್ ಅಂತ. ಆಶಾ ಪ್ರಕಾಶನ ಸಂಸ್ಥೆಯ ಮಾಲೀಕರು" ಎಂದರು. ಹುಡುಕುತ್ತಿದ್ದ ಬಳ್ಳಿ ಕಾಲಿಗೇ ತೊಡರಿದಂಥಾ ಭಾವ ನನಗೆ. ತಕ್ಷಣ ಲಲಿತಮ್ಮನವರನ್ನೂ ಕೂಡಿಸಿಕೊಂಡು ಸುನಂದಮ್ಮನವರ ಸಾಹಿತ್ಯಕ್ಕೆ ಆಗಿರುವ ಅನ್ಯಾಯವನ್ನು ವಿವರಿಸಿದೆ. ಒಂದು ಕ್ಷಣವನ್ನೂ

ವ್ಯಯಿಸದೇ ಅಲ್ಲೇ ಪ್ರಕಾಶ್‌ರಾವ್ ತಾವು ಸುನಂದಮ್ಮನವರ ಸಮಗ್ರ ಸಾಹಿತ್ಯ ಪ್ರಕಟಿಸುವುದಾಗಿ ಭರವಸೆ ನೀಡಿದರು.

'ಹೂವಿನಸರ ಎತ್ತಿದಂತೆ ಕೆಲಸವಾಯಿತು' ಎನ್ನುವ ಮಾತಿದೆಯಲ್ಲ. ಅದಕ್ಕೊಂದು ಉತ್ತಮ ಉದಾಹರಣೆ ಇದು!

ಬೆಂಗಳೂರಿಗೆ ಬಂದವಳೇ ಮೊದಲು ಓಡಿದ್ದು ಸುನಂದಮ್ಮನವರ ಮನೆಗೆ. ವಿಷಯ ಕೇಳಿದ ತಕ್ಷಣ ಅವರ ಮುಖದಲ್ಲಿ ಸಂತೋಷ ಮತ್ತು ಸಡಗರಗಳು ಹೇಗೆ ನಲಿದಾಡಿದವು ಎನ್ನುವುದನ್ನು ನಾನು ಮಾತಿನಲ್ಲಿ ವರ್ಣಿಸಲಾರೆ. ಆದರೆ ಆ ಮುಖ ಇನ್ನೂ ನನ್ನ ಕಣ್ಣ ಮುಂದಿದೆ. ಈ ಕಾರ್ಯ ನನ್ನನ್ನೂ ಲಲಿತಮ್ಮನವರನ್ನೂ ಮತ್ತು ಸುನಂದಮ್ಮನವರನ್ನೂ ಒಂದು ಒಲೆಯ ಮೂರು ಗುಪ್ಪೆಗಳಂತೆ ಒಂದೇ ನೆಲೆಯಲ್ಲಿ ಬಂಧಿಸಿಟ್ಟುಬಿಟ್ಟವು. ಪುಸ್ತಕದ ಕಾರ್ಯ ಮುಗಿಯುವವರೆಗೂ ನಾನು ಸುನಂದಮ್ಮನವರ ಮನೆಗೆ ಮತ್ತು ಹರಿಹರಕ್ಕೆ ಅದೆಷ್ಟು ಬಾರಿ ಎಡತಾಕಿದೆನೋ ಲೆಕ್ಕವಿಟ್ಟವರ್ಯಾರು? ಸಾವಿರಕ್ಕೂ ಹೆಚ್ಚು ಪುಟಗಳುಳ್ಳ ಕೃತಿಯನ್ನು ಹೊರತರುವುದು ಸುಲಭದ ಮಾತಾಗಿರಲಿಲ್ಲ. ಈ ಕೈಂಕರ್ಯದಲ್ಲಿ ಸಮಸಮನಾಗಿ ಲಲಿತಮ್ಮನವರೂ ಕೈಜೋಡಿಸಿದ್ದರಿಂದಲೇ ಈ ಮಹಾಕಾರ್ಯ ಸುಗಮವಾಗಿ ನಡೆಯಿತು. ಹೇಮಲತಾ ಮಹಿಷಿಯವರು ಆಗ ಲೇಖಕಿಯರ ಸಂಘದ ಅಧ್ಯಕ್ಷರಾಗಿದ್ದರು. ಅವರು ಈ ಪುಸ್ತಕದ ಬಿಡುಗಡೆಯ ಸಮಾರಂಭವನ್ನು ಸಂಘದ ಕರ್ತವ್ಯವೆಂದೇ ಭಾವಿಸಿ ಅದ್ದೂರಿಯಾಗಿ ನೆರವೇರಿಸಿದರು. ನನ್ನ ಸಾಹಿತ್ಯದ ಪರಿಚಾರಿಕೆಯಲ್ಲಿ ಸುನಂದಮ್ಮನವರಿಗೆ ವೃದ್ಧಾಪ್ಯದಲ್ಲಿ ಒಂದು ಸಣ್ಣ ಖುಷಿ ಸಿಕ್ಕಿದ್ದು ನನಗೆ ತೃಪ್ತಿ ಸಿಕ್ಕಿದೆ.

ಆ ನಂತರ ನನ್ನ ವಾಸ ಮಲ್ಲೇಶ್ವರದಲ್ಲೇ ಆಗಿ ಆಗಾಗ್ಗೆ ಸುನಂದಮ್ಮನವರನ್ನು ಭೇಟಿಯಾಗುತ್ತಿದ್ದೆ. ಪ್ರತಿಬಾರಿಯೂ 'ನಿಮ್ಮಿಂದ ನನ್ನ ಸಮಗ್ರ ಸಾಹಿತ್ಯ ಬಂತು' ಎನ್ನುವುದನ್ನು ತಪ್ಪದೇ ಹೇಳುತ್ತಿದ್ದರು.


2005ರಲ್ಲಿ ಅಮೆರಿಕೆಯಲ್ಲಿದ್ದ ಶ್ರೀಮತಿ ಸರೋಜಾ ನಾರಾಯಣರಾವ್ ಅವರು ಹಿಂದಿನ ಸಾಹಿತ್ಯ ಕೂಟದ ಗೆಳತಿಯರಿಗೆಲ್ಲಾ ಒಂದು ಪತ್ರ ಬರೆದು 'ನಾವೆಲ್ಲರೂ ಒಂದೊಂದು ಲೇಖನವನ್ನು ಬರೆಯಬೇಕೆಂದೂ, ಸಾಹಿತ್ಯಕೂಟದ ನೆನಪಿನಲ್ಲಿ ತಾವೊಂದು ಸಂಕಲನವನ್ನು ಪ್ರಕಟಿಸುವುದಾಗಿಯೂ ತಿಳಿಸಿದರು. ನಮ್ಮೆಲ್ಲರ ಹಿರಿಯಕ್ಕ ಸುನಂದಮ್ಮನವರೂ ಸೇರಿದಂತೆ ನಾವೆಲ್ಲರೂ ಖುಷಿಯಿಂದ ಲೇಖನ ಕವನ ಇತ್ಯಾದಿಗಳನ್ನು ಬರೆದುಕೊಟ್ಟೆವು. ಅದಕ್ಕೆ ಚಂದದ ಮುನ್ನುಡಿಯನ್ನು ಸುನಂದಮ್ಮನವರು ಬರೆದುಕೊಟ್ಟರು. ಅದರಲ್ಲಿ ಅವರು ಬರೆದ ಕೊನೆಯ ಪ್ಯಾರಾವನ್ನು ಇಲ್ಲಿ ನಾನು ಪ್ರೀತಿಯಿಂದ ನೆನೆಯುತ್ತೇನೆ.

"ನಮ್ಮ ಕೂಟ, ಸಾಹಿತ್ಯ ಪರಿಚಯವನ್ನಷ್ಟೇ ಮಾಡಲಿಲ್ಲ. ಲೇಖಕಿಯರಲ್ಲಿ ವಿಶಾಲ ಮನೋಭಾವ, ಗೆಳೆತನ, ಮುಖ್ಯವಾಗಿ ಆತ್ಮವಿಶ್ವಾಸವನ್ನು ಬೆಳೆಸಿತು. ಲೇಖನ ಓದಲು ಹೆದರುತ್ತಿದ್ದ ಸೋದರಿಯರು, ವೇದಿಕೆ ಏರಿ ಭಾಷಣ ಮಾಡುವಷ್ಟು ಶಕ್ತರಾದರು. ಸಾಹಿತ್ಯ ಪ್ರಪಂಚದಲ್ಲಿ ತಮ್ಮದೇ

ಆದ ವರ್ಚಸ್ಸು, ಪಡೆಯುವ ಆಶಾದೀಪಗಳಾದರು" 'ಸ್ನೇಹ ಸೌಹಾರ್ದ' ಪುಸ್ತಕ 2006 ಫೆಬ್ರವರಿಯಲ್ಲಿ ಪ್ರಕಟವಾಯಿತು. ದುರಂತವೆಂದರೆ ಟಿ. ಸುನಂದಮ್ಮನವರು 21-11-1993 (ಒಂದು ತಿಂಗಳ ಮೊದಲು) ನಮ್ಮನ್ನು ಅಗಲಿದರು. ಪುಸ್ತಕದ ಬಿಡುಗಡೆ ಸಮಾರಂಭ ಮಿಥಿಕ್ ಸೊಸೈಟಿಯ ಸಭಾಂಗಣದಲ್ಲಿ ನಡೆಯಿತು. ಅಲ್ಲಿದ್ದ ಎಲ್ಲರಲ್ಲೂ ಸುನಂದಮ್ಮನವರ ಅಗಲಿಕೆ ಕಾಡುತ್ತಿತ್ತು.

ನಮ್ಮ ಪ್ರೀತಿಯ ಸುನಂದಮ್ಮ ಕನ್ನಡ ಸಾಹಿತ್ಯ ವಲಯದಲ್ಲಿ ನಗೆಬೀಜಗಳನ್ನು ಬಿತ್ತಿ ಹೋದರು. ಇಂದಿಗೂ ಅನೇಕ ಲೇಖಕಿಯರ ರೂಪದಲ್ಲಿ ಆ ಬೀಜಗಳು ಮೊಳೆತು ಚಿಗುರಿ ಮರವಾಗಿ ಬೆಳೆದು ಮತ್ತಷ್ಟು ಬೀಜಗಳನ್ನು ಕನ್ನಡ ನೆಲಕ್ಕೆ ಕರುಣಿಸುತ್ತಾ ಹೊಸ ಚಿಗುರುಗಳಿಗಾಗಿ ಕಾಯುತ್ತಿವೆ. ಸುನಂದಮ್ಮನವರ ಸಂತತಿ ಸಾವಿರ ಸಾವಿರವಾಗಲಿ.

* * *



ನಗೆಸಾಹಿತ್ಯದ ಸಾಮ್ರಾಜ್ಞಿ

– ಡಾ. ವಸುಂಧರ ಭೂಪತಿ

ಟಿ. ಸುನಂದಮ್ಮ ಈ ಹೆಸರು ಯಾರಿಗೆ ತಾನೇ ಗೊತ್ತಿಲ್ಲ? ಕನ್ನಡ 'ನಗೆ ಪ್ರಪಂಚ'ದ ಏಕೈಕ ಸಾಮ್ರಾಜ್ಞೆ ಅವರು.

ಚಿಕ್ಕವಯಸ್ಸಿನಲ್ಲಿಯೇ ಅಂದರೆ ಒಂಭತ್ತರ ಎಳೆಯ ವಯಸ್ಸಿನಲ್ಲಿ ಬರೆಯಲು ಪೆನ್ನು ಕೈಗೆತ್ತಿಕೊಂಡರು.

ಹೂವೇ ಹೂವೇ ನೀನೆಲ್ಲಿರುವೆ?
ನಾರಿಯ ತುರುಬೊಳು ಇರುವೆ
ಮಾರಪಿತನ ಕೊರಳೊಳು ಇರುವೆ
ಯಾರು ನೀನೆಂಬುದನು ನಾನರಿತಿರುವೆ.

ಎಂಬ ಪದ್ಯ ಬರೆದಿದ್ದರು. ಈ ಪದ್ಯದ ಸಾಲುಗಳು ಅಶ್ವತ್ಥನಾರಾಯಣರಾಯರ 'ಮಕ್ಕಳ ಪುಸ್ತಕ'ದಲ್ಲಿ ಅಚ್ಚಾಗಿದ್ದವು. ಕವನದಿಂದ ಅವರ ಲೇಖನಿ ಕಥೆಗೆ ತಿರುಗಿತು. ಮದುವೆ ಮಂಟಪದಲ್ಲಿ ಎಳೆಯ ಹುಡುಗಿಯೊಬ್ಬಳು ಹಣೆಗೆ ಕುಂಕುಮವಿಲ್ಲದೆ ಸಪ್ಪಗೆ ಕುಳಿತಿದ್ದನ್ನು ಕಂಡು, ಅವಳ ಬಗ್ಗೆ ತಲೆಕೆಡಿಸಿಕೊಂಡು, ಅಮ್ಮನಿಂದ ಉಗಿಸಿಕೊಂಡು, ಅಂತೂ ಈ ಬಾಲವಿಧವೆಯ ಬಗ್ಗೆ ತಿಳಿದುಕೊಂಡು 'ಹೂ ಬಾಡಿತು' ಎಂಬ ಕತೆ ಹೆಣೆದರು. ಇದು ಅವರು 12ನೇ ವಯಸ್ಸಿನಲ್ಲಿ ಬರೆದ ಕತೆ. ಅದು ಪತ್ರಿಕೆಯಲ್ಲಿ ಪ್ರಕಟವಾದಾಗ ಅವರ ಹೆಸರಿನ ಮುಂದೆ 12 ವರ್ಷ ಎಂದೇ ಬರೆದು ಅವರನ್ನು ಹುರಿದುಂಬಿಸಿದ್ದವು.

ಇದು ಅವರ ಸಾಹಿತ್ಯ ಚಟುವಟಿಕೆಯ ಮಾತಾಯಿತು. ಅವರ ವೈಯಕ್ತಿಕ ಬದುಕಿನ ಬಗ್ಗೆ ಹೇಳಬೇಕೆಂದರೆ ಹಿರಿಯ ಸರ್ಕಾರಿ ಅಧಿಕಾರಿಯ ಪುತ್ರಿಯಾಗಿದ್ದ ಅವರು ಅಪ್ಪನ ವರ್ಗಾವಣೆಯೊಂದಿಗೆ ಅವರ ವಿದ್ಯಾಭ್ಯಾಸವೂ ಊರೂರು ಅಲೆಯುತ್ತಾ ಇದ್ದಾಗ್ಯೂ ಅವರ ಓದಿಗೆ ಭಂಗ ಬರಲಿಲ್ಲ. ಆಗಿನ ಸಂಪ್ರದಾಯದ ಪ್ರಕಾರ ಏಳನೇ ವರ್ಷದ ಪರೀಕ್ಷೆಗೆ ಇನ್ನೂ ಎರಡು ತಿಂಗಳಿರುವಾಗಲೇ ಹಸೆಮಣೆ ಏರಬೇಕಾಗಿ ಬಂತು. ಅವರು ಕಾಲಿಟ್ಟದ್ದು ಅತ್ಯಂತ ಸಂಪ್ರದಾಯಸ್ಥರ ಮನೆ. ಗಂಡ ಆಗಿನ್ನೂ ಇಂಟರ್ ಮೀಡಿಯೇಟ್ ವಿದ್ಯಾರ್ಥಿ. ಈ ಇಬ್ಬರೂ 'ವಿದ್ಯಾರ್ಥಿ ದಂಪತಿಗಳು' ತಮ್ಮ ವಿದ್ಯಾಭ್ಯಾಸ ಮುಂದುವರೆಸಿ, ಏಳು ವರ್ಷಗಳ ಬಳಿಕ ಸಂಸಾರ ಚಕ್ರದಲ್ಲಿ ಪ್ರವೇಶಿಸಿದರು.

ಆ ಬಳಿಕ ಸುನಂದಮ್ಮ ಗಂಡನೊಡನೆ ಪುಣೆಯಲ್ಲಿದ್ದಾಗ ಟೆನಿಸ್ ಬ್ಯಾಟ್ ಹಿಡಿದರು. ಕುದುರೆ ಸವಾರಿಯನ್ನೂ ಕಲಿತರು. ಇಂಗ್ಲಿಷ್ ಪ್ರಹಸನಗಳನ್ನು ಬರೆದರು. ವಕೀಲರಾಗಿದ್ದ ಅವರ ಪತಿ ಅನಂತರ ಬೆಂಗಳೂರಿನ ಸೆಕ್ರೇಟೆರಿಯೆಟ್‌ನಲ್ಲಿ ಸೇವೆ ಸಲ್ಲಿಸಿದರು.

"ನನ್ನ ಪತಿಗೆ ಸಾಹಿತ್ಯದಲ್ಲಿ ಅಭಿರುಚಿ ಇರಲಿಲ್ಲ. ಹಾಸ್ಯ ಲೇಖನಗಳು ಅಪ್ಪಿಗೆ ಅರ್ಥವೇ ಆಗುತ್ತಿರಲಿಲ್ಲ. ಏನೋ ಬರೀತಿದ್ದಾಳೆ ಅಂದ್ಕೊಂಡಿದ್ರು" ಎನ್ನುವ ಸುನಂದಮ್ಮ ಕುಟುಂಬದವರ ಪ್ರೋತ್ಸಾಹ ಇರದೇ ಇರುವ ಸಂದಿಗ್ಧ ಪರಿಸ್ಥಿತಿಯಲ್ಲೂ ಶಿವರಾಮರ ನಗೆಕೂಸು 'ಕೊರವಂಜಿ'ಯ ಆರಂಭದಿಂದ ಹಿಡಿದು ಅದು ಕಾಡಿಗೆ ಹೋಗುವವರೆಗೂ ನಿರಂತರವಾಗಿ ಬರೆದು ಮನೆ ಮಾತಾದರು. ಆಕಾಶವಾಣಿಯಲ್ಲೂ ಹತ್ತು ಹಲವು ಕಾರ್ಯಕ್ರಮ ಸಿದ್ಧಪಡಿಸಿ ಪ್ರಸ್ತುತಪಡಿಸಿದ ಚಟುವಟಿಕೆಯ ವ್ಯಕ್ತಿ ಅವರು.

ಇಂತಹ ವಿಶಿಷ್ಟ ಹಿನ್ನೆಲೆಯುಳ್ಳ 86ರ ನಗೆಬುಗ್ಗೆ ಉಕ್ಕಿಸುವ ಟಿ. ಸುನಂದಮ್ಮನವರ ಸಾಹಿತ್ಯ ಸೇವೆಯಲ್ಲಿ ಆರೋಗ್ಯದ ಪಾತ್ರ ಕುರಿತಂತೆ ಮಾತನಾಡಲು ನಾವು ವೈಯಾಲಿಕಾವಲ್ ಗಾಯತ್ರಿ ಪಾರ್ಕ್‌ನಲ್ಲಿರುವ ಅವರ ಮನೆಗೆ ಹೋಗಿದ್ದೆವು.

"ನಾನು ಹುಟ್ಟಿರುವ ಕುಟುಂಬ ತಲೆ ತಲಾಂತರದಿಂದ ಸುಸಂಸ್ಕೃತ– ಶ್ರೀಮಂತ ಮನೆತನ. ಎಲ್ಲವೂ ನಿಯಮ ಬದ್ಧವಾಗಿ, ಕ್ರಮಬದ್ಧವಾಗಿ ನಡೀತಿತ್ತು. ಇದೇ ನನ್ನ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರಿರಬಹುದು. ಇದರರ್ಥ ನಾನು ಪರಿಪೂರ್ಣ ಆರೋಗ್ಯವಾಗೀದಿನಿ ಎಂತಲ್ಲ. ಮಧ್ಯೆ ಮಧ್ಯೆ ಖಾಯಿಲೆಗಳು ಬಂದಿವೆ. ಒಟ್ಟಿನಲ್ಲಿ ಅವನ್ನೆಲ್ಲಾ ಈಜಿಕೊಂಡು ಬಂದಿದೀನಿ."

ನೀತಿ ಸೂತ್ರ : ಸಮಯ ಪ್ರಜ್ಞೆ, ಕಾಲನಿಯಮ, ಮಿತಿಮೀರಿ ಆಹಾರ ಸೇವನೆ ಮಾಡದೆ ಇರುವುದು ಇವು ನನ್ನ ಆರೋಗ್ಯ ಸೂತ್ರಗಳು.

ಪ್ರಭಾವ : ನನ್ನ ತಾತ (ತಾಯಿಯ ತಂದೆ) ಡಿ. ವೆಂಕಟರಾಮಯ್ಯ ಶಿಕ್ಷಣಾಧಿಕಾರಿಯಾಗಿದ್ದರು. 42ನೇ ವಯಸ್ಸಿನಲ್ಲಿ ಪತ್ನಿ ವಿಯೋಗವಾಗಿದ್ದ ಅವರಿಗೆ 6 ಜನ ಮಕ್ಕಳು. ಸನ್ಯಾಸಿಯಂತೆ ಸಂಸಾರ ಜೀವನ ನಡೆಸುತ್ತಿದ್ದ ಅವರು ಸಂಸ್ಕೃತ ಹಾಗೂ ಇಂಗ್ಲೀಷಿನಲ್ಲಿ ವಿದ್ವಾಂಸರು, ನಾನು ಅಲ್ಲಿಯೇ ಆಡಿ ಬೆಳೆದದ್ದು. ತಾತನವರ ಬಳಿ ಎಸ್.ಎಸ್.ಎಲ್.ಸಿ.ಯವರೆಗೆ ಇಂಗ್ಲಿಷ್ ಪಾಠ ಹೇಳಿಸಿಕೊಳ್ತಿದ್ದೆ. ಅವರು ಪರೀಕ್ಷಾ ಸಮಿತಿ ಸದಸ್ಯರಾದಾಗ ಅವರು "ಇನ್ನು ನನ್ನ ಮನೆಗೆ ಬರಬೇಡ, ನೀನು ನನ್ನ ಕಡೆ ಪಾಠ ಹೇಳಿಸಿಕೊಳ್ಳಲು ಬರ್ತಿದ್ದರೆ ನಾನು ನಿನಗೆ ಪ್ರಶ್ನೆಗಳನ್ನು ತಿಳಿಸಿಕೊಟ್ಟೆ ಎಂದು ಆಪಾದನೆ ಬರುತ್ತದೆ" ಎಂದಿದ್ದರು. ಅವರ ಪ್ರಾಮಾಣಿಕತೆ, ನಿಷ್ಠೆಯ ಜೀವನವೇ ನನಗೆ ಆದರ್ಶ.

ಸಸ್ಯಾಹಾರ : ನಾನು ಮೂಲತಃ ಸಸ್ಯಾಹಾರಿ. ಅದು ನಮ್ಮ ಮನೆಗಳಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬಂದ ಪದ್ಧತಿ. ಹೀಗಾಗಿ ಸಸ್ಯಾಹಾರವೇ ನನಗೆ ಪ್ರಿಯ. ಆದರೆ ಮಾಂಸಾಹಾರ ಕೆಟ್ಟದ್ದೆಂದೂ ನಾನೇನೂ ಹೇಳಲಾರೆ. ಏಕೆಂದರೆ ಅದರ ಬಗ್ಗೆ ನನಗೆ ಏನೂ ಗೊತ್ತೇ ಇಲ್ಲ. ಈಚೆಗೆ ಸಸ್ಯಾಹಾರ ಒಂದು ತತ್ವವೆನ್ನುವಷ್ಟರ ಮಟ್ಟಿಗೆ ಜನಪ್ರಿಯವಾಗಿದೆ. ಪ್ರಾಣಿಹಿಂಸೆ ಮಾಡಬಾರದು ಎಂಬ ತತ್ವ ಹಾಗೂ ಸಸ್ಯಾಹಾರ ವೈವಿಧ್ಯಮಯವಾಗಿರುವುದು ಅದಕ್ಕೆ ಕಾರಣವಾಗಿರಬಹುದು.


ಆಹಾರ ವಿಹಾರ : ನಾನು ಮೊದಲು ವಾಕಿಂಗ್ ಅಂದರೆ ತರಕಾರಿ, ಮನೆ ಸಾಮಗ್ರಿ ತರಲು ಹೊರಗಡೆ ಹೋಗ್ತಿದ್ದೆ. ಆದರೆ ಒಂದು ಸಲ ಬಿದ್ದು ಶಸ್ತ್ರಚಿಕಿತ್ಸೆಗೊಳಪಟ್ಟೆ. ಹೀಗಾಗಿ ಈಗ ಹೆಚ್ಚಾಗಿ ನಡೆದಾಡಲು ಸಾಧ್ಯವಾಗುವುದಿಲ್ಲ. ಇದರ ಹೊರತಾಗಿ ಮೂಲವ್ಯಾಧಿ ಜೊತೆಗೆ ಕಣ್ಣಿನ ಶಸ್ತ್ರಚಿಕಿತ್ಸೆ, ಹಲ್ಲುಗಳ ಸಮಸ್ಯೆಯಿಂದಾಗಿ ಹಲ್ಲುಗಳನ್ನೆಲ್ಲ ತೆಗೆದುಹಾಕಿಸಿ ಕೃತಕ ಹಲ್ಲುಗಳನ್ನು ಅಳವಡಿಸಿಕೊಳ್ಳಬೇಕಾಯಿತು.

ವೈಯಕ್ತಿಕ ಜೀವನದಲ್ಲಿ ಹಾಸ್ಯ : ನಮ್ಮ ಹುಟ್ಟಿದ ಮನೆಯಲ್ಲಾಗಲಿ, ಗಂಡನ ಮನೆಯಲ್ಲಾಗಲಿ ಹಾಸ್ಯ ಮನೋಭಾವ ಇತ್ತು ಎಂದು ಹೇಳಲಾರೆ. ತಾತನ ಬಳಿ ಸಹ ಧೈರ್ಯವಾಗಿ ಹೋಗಿ ಕುಳಿತುಕೊಳ್ಳುವಂತಿರದ ವಾತಾವರಣ ಆಗಿನದು. 1950ರ ವರೆಗೆ ನಾನು ಬೆಳೆದದ್ದು ಗಂಭೀರ ವಾತಾವರಣದಲ್ಲೇ ಎನ್ನಬಹುದು. 'ಕೊರವಂಜಿ'ಯಲ್ಲಿ ನಾನು ಬರೆಯುತ್ತಿದ್ದುದೇನೋ ಹಾಸ್ಯ. ಆದರೆ ನನ್ನ ಸಹೋದರ ಕೃಷ್ಣಸ್ವಾಮಿಯೊಬ್ಬರನ್ನು ಬಿಟ್ಟರೆ ಮನೆಯಲ್ಲಿ ಯಾರೊಬ್ಬರೂ ಹಾಸ್ಯ ಪ್ರವೃತ್ತಿಯವರಿರಲಿಲ್ಲ. ನನಗೆ ಸಾಮಾನ್ಯವಾಗಿ ಮಾತು–ಮಾತಿನಲ್ಲಿ ಹಾಸ್ಯ ಮಾಡಲು ಬರುವುದಿಲ್ಲ. ಬರೆಯೋಕೆ ಕುಳಿತರೆ ಮಾತ್ರ ಹಾಸ್ಯ ಬಂದು ಬಿಡುತ್ತೆ.

ದುಃಖದ ನಡುವೆಯೂ ಹಾಸ್ಯಸೃಷ್ಟಿ : ಮಗನ ಅಕಾಲಿಕ ಸಾವು ನನ್ನನ್ನು ಧೃತಿಗೆಡಿಸಿತಾದರೂ, ಬರವಣಿಗೆಯ ಮೇಲೆ ಅದು ಪರಿಣಾಮ ಬೀರದಂತೆ ನೋಡಿಕೊಂಡೆ. ದುಃಖ ನುಂಗಿಕೊಂಡೇ ಪ್ರಚಲಿತ ವಿದ್ಯಮಾನಗಳ ಕುರಿತಂತೆ ಹಾಸ್ಯಸೃಷ್ಟಿ ಮಾಡಿದೆ.

ನನ್ನ ಟಾನಿಕ್ : ನಾನು ಯಾವಾಗಲೂ ಖುಷಿಯಲ್ಲಿರಲು ಮುಖ್ಯ ಕಾರಣ ಸಾಹಿತಿಗಳ ಒಡನಾಟ. ನಾನು ವಿವಿಧ ಸಭೆ ಸಮಾರಂಭಗಳಿಗೆ ಹೋದಾಗ ಭೆಟ್ಟಿಯಾಗುವ ಸಾಹಿತಿ–ಮಿತ್ರರ ಜೊತೆಗಿನ ಮಾತುಕತೆ ನನಗೆ ಹೊಸ ಹುರುಪನ್ನು ತಂದುಕೊಡುತ್ತದೆ. ಒಂದು ಸಭೆ–ಸಮಾರಂಭಕ್ಕೆ ಹೋದರೆ ಒಂದು ವಾರ ನಾನು ಅದರ ಪ್ರಭಾವ ವಲಯದಲ್ಲಿರುತ್ತೇನೆ. ಇದುವೇ ನನ್ನ ಆರೋಗ್ಯದ "ಟಾನಿಕ್" ಎನ್ನಬಹುದು.

* * *



ಜೀವನೋತ್ಸಾಹದ ಟಿ. ಸುನಂದಮ್ಮ

– ಭುವನೇಶ್ವರಿ ಹೆಗಡೆ

ಕನ್ನಡ ಹಾಸ್ಯಸಾಹಿತ್ಯದ ಸುವರ್ಣ ಅಕ್ಷರಗಳಲ್ಲಿ ಬರೆದು ಇಡಬಹುದಾದ ಹೆಸರುಗಳಲ್ಲಿ ಒಬ್ಬರದು ಟಿ. ಸುನಂದಮ್ಮ ಅವರದು. ನಾನು ಓರ್ವ ಹಾಸ್ಯ ಲೇಖಕಿಯಾಗಿ ಟಿ. ಸುನಂದಮ್ಮನವರನ್ನು ಮೊದಲ ಬಾರಿ ಭೆಟ್ಟಿಯಾಗಿದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಅಂಗಳದಲ್ಲಿ, ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ. ಅಧ್ಯಕ್ಷತೆ ಡಾ. ಅನುಪಮಾ ನಿರಂಜನ ಅವರದೆಂದು ನೆನಪು. ಅನುಪಮಾ ನಿರಂಜನ, ಟಿ. ಸುನಂದಮ್ಮ ಹಾಗೂ ರಾ.ಶಿ. ಅವರ ಮಗಳು ಕಮಲಾ ರಾಮಸ್ವಾಮಿ ಮೂವರೂ ಊಟದ ಬಳಿಕ ಹೊರಗೆ ಬೆಂಚೊಂದರ ಮೇಲೆ ಕುಳಿತಿದ್ದರು. ಉತ್ತರ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿ ಭಾಷಣ ಮಾಡಿದ್ದನ್ನು ಕೇಳಿಸಿಕೊಂಡಿದ್ದರು. ನಾನು ಹೋಗಿ ಪರಿಚಯಿಸಿಕೊಂಡೆ ಅಷ್ಟೇ. "ಗೊತ್ತಮ್ಮ ನಿನ್ನ ಹಾಸ್ಯ ಲೇಖನಗಳು ನನ್ನ ಗಮನಕ್ಕೆ ಬಂದಿವೆ ಚೆನ್ನಾಗಿ ಬರೆಯುತ್ತೀಯೆ" ಎಂದವರು ಟಿ. ಸುನಂದಮ್ಮ. ಅಷ್ಟರಲ್ಲಾಗಲೇ ನಾನು ತುಷಾರ ತರಂಗ ಸುಧಾ ಪತ್ರಿಕೆಗಳಲ್ಲಿ ಹಾಸ್ಯ ಲೇಖನಗಳನ್ನು ಬರೆಯುತ್ತಿದ್ದೆ. ಇದು ಕರ್ನಾಟಕದ ಖ್ಯಾತ ಹಾಸ್ಯ ಲೇಖಕಿ ಟಿ. ಸುನಂದಮ್ಮನವರ ಗಮನಕ್ಕೆ ಬಂದಿದೆ ಮತ್ತು ಅವರದನ್ನು ಮೆಚ್ಚಿಕೊಂಡಿದ್ದಾರೆ ಎಂಬುದನ್ನು ಕೇಳಿ ನನಗೆ ಎರಡು ಕೋಡು ಮೂಡಿ ಬಿಟ್ಟ ಅನುಭವ ಇಲ್ಲದೆ ಅನುಪಮಾ ನಿರಂಜನ ಅವರು "ನೋಡು ಭುವನಾ, ಯುವತಿಯರಲ್ಲಿ ಹೆಚ್ಚಾಗಿ ಕವನ ಕಥೆಗಳತ್ತ ಹೊರಳಿ ಕೊಳ್ಳುವವರೇ ಹೆಚ್ಚು. ಹಾಸ್ಯ ಪ್ರಕಾರದಲ್ಲಿ ಬದ್ಧತೆಯಿಂದ ಬರೆಯುವ ಹೊಸ ಹಾಸ್ಯ ಲೇಖಕಿಯರ ಹುಡುಕಾಟದಲ್ಲಿದ್ದೆವು. ನಿನ್ನ ಹೆಸರು ನಮಗೆ ಸಮಾಧಾನ ತಂದಿದೆ. ನಿನ್ನ ಹಾಸ್ಯ ಬರಹಗಳಲ್ಲಿ ಪ್ರಾದೇಶಿಕತೆ ಮತ್ತು ಶುದ್ಧ ಹಾಸ್ಯ ನಾನು ಮೆಚ್ಚಿಕೊಂಡ ಅಂಶಗಳು (ಇದೇ ಮಾತುಗಳನ್ನು ನನ್ನ ಎರಡನೆಯ ಹಾಸ್ಯ ಬರಹಗಳ ಸಂಕಲನ "ನಕ್ಕು ಹಗುರಾಗಿ" ಕೃತಿಗೆ ಮುನ್ನುಡಿ ಬರೆದ ಅನುಪಮಾ ನಿರಂಜನ ಅವರು ಬರೆದೂ ಇದ್ದಾರೆ) ಎಂದರು. ಸುನಂದಮ್ಮ ಅವರು ತಮ್ಮ ಕನ್ನಡಕದ ಹಿಂದಿನ ಕಣ್ಣುಗಳಲ್ಲಿ ಆತ್ಮೀಯತೆಯನ್ನು ಸೂಸುತ್ತಾ 'ಒಂದು ಮಾತು ಹೇಳಲೇಬೇಕು. ಬೇರೆ ಬೇರೆ ಪ್ರಕಾರಗಳಲ್ಲಿ ಬರೆಯಬೇಡ' ಎನ್ನಲಾರೆವು ಅದು ನಿನ್ನ ಸ್ವಾತಂತ್ರ್ಯ, ಆದರೆ ಹಾಸ್ಯ ಬರಹ ನಿನಗೆ ಸಿದ್ಧಿಸಿದ ಪ್ರಕಾರ. ಇದರಲ್ಲಿಯೇ ಪರಿಶ್ರಮ ಪಟ್ಟು ಇದೇ ದಾರಿಯಲ್ಲಿ ನೀನು ಮುಂದುವರಿಯಬೇಕೆಂಬುದು ನಮ್ಮ ಅಪೇಕ್ಷೆ' ಎಂದರು. ಕಮಲಾ ರಾಮಸ್ವಾಮಿಯವರು ನಮ್ಮ ಅಪರಂಜಿಗೆ ಇವಳು ಈಗಾಗಲೇ ಬರೆಯುತ್ತಿದ್ದಾಳೆ ಎಂದು ಶಿಫಾರಸ್ಸು ಮಾಡಿದರು ಹೀಗೆ ಮೂರು ಹಿರಿಯ ಲೇಖಕಿಯರಿಂದ ನಿರ್ದೇಶಿತಳಾದ ನಾನು ಅಂದಿನಿಂದ ಇಂದಿನವರೆಗೂ ಹಾಸ್ಯ ಸಾಹಿತ್ಯ ಪ್ರಕಾರದಲ್ಲಿಯೇ ಬರೆಯುತ್ತಿದ್ದೇನೆ.

ಅಂದಿನ ಹಿರಿಯ ಲೇಖಕಿಯರ ಪ್ರೋತ್ಸಾಹ ನೀಡುವ ಗುಣ ಕಿರಿಯ ಲೇಖಕಿಯರಲ್ಲಿ ತೋರುವ ಆತ್ಮೀಯತೆ ಇವುಗಳು ಸುನಂದಮ್ಮನವರು ಮೈಗೂಡಿಸಿಕೊಂಡ ವಿಶೇಷ ಗುಣಗಳಾಗಿವೆ. ಆ ಬಳಿಕ ಅನೇಕ ಬಾರಿ ನಾನು ಸುನಂದಮ್ಮನವರನ್ನು ಬೇರೆ ಬೇರೆ ವೇದಿಕೆಗಳಲ್ಲಿ ಭೇಟಿಯಾಗಿದ್ದೇನೆ. ನನಗೆ 1986ರಲ್ಲಿ 'ಪಡುಕೋಣೆ ರಮಾನಂದ ಪ್ರಶಸ್ತಿ' ಬಂದಾಗ ಬೆಂಗಳೂರಿನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಟಿ. ಸುನಂದಮ್ಮ ಅವರೇ ಅಧ್ಯಕ್ಷತೆ ವಹಿಸಿದ್ದರು. ವೈ ಎನ್ಕೆ ಅವರ ಕೈಯಲ್ಲಿ ಪ್ರಶಸ್ತಿ ಸ್ವೀಕರಿಸಿದ ಆ ಸಮಾರಂಭ ನನ್ನ ಸ್ಮೃತಿಕೋಶದಲ್ಲಿ ಭದ್ರವಾಗಿದೆ.

ಕರ್ನಾಟಕ ಲೇಖಕಿಯರ ಸಂಘವು ಮಂಗಳೂರಿನ ಕಡಲ ತೀರದಲ್ಲಿ ನಡೆಸಿದ ಲೇಖಕಿಯರ ಶಿಬಿರವೊಂದರಲ್ಲಿ ಆರೋಗ್ಯದ ಸಮಸ್ಯೆ ಕಾಲು ನೋವುಗಳನ್ನು ಇಟ್ಟುಕೊಂಡೂ ಯುವತಿಯರನ್ನು ನಾಚಿಸುವಷ್ಟು ಉತ್ಸಾಹದಿಂದ ಸಮುದ್ರ ತೀರದಲ್ಲಿ ಓಡಾಡಿದ ಎಲ್ಲಿಯೂ ಸೊರಗದ ಉತ್ಸಾಹ ಇವು ಸುನಂದಮ್ಮನವರ ವ್ಯಕ್ತಿತ್ವಕ್ಕೆ ಘನತೆಯನ್ನು ತಂದುಕೊಟ್ಟ ಸಂಗತಿಗಳು. ಅವರ ಬರಹಗಳಲ್ಲಿ ಚಿಮ್ಮುವ ಜೀವನೋತ್ಸಾಹ ಅದೆಷ್ಟೋ ಸಂಸಾರಗಳಲ್ಲಿ ದಂಪತಿಗಳ ನಡುವೆ ಹಾಸ್ಯ ಸಂಭಾಷಣೆಗಳನ್ನು ನಡೆಸುವಷ್ಟರ ಮಟ್ಟಿಗೆ ಪ್ರೇರಣೆ ನೀಡಿತ್ತು. ಸುನಂದಮ್ಮನವರು ತೀರಿಕೊಂಡ ಸುದ್ದಿ ಕೇಳಿದಾಗ ನಾನು ದಿಗ್ಮೂಢಳಾಗಿದ್ದೆ. ತರಂಗ ಪತ್ರಿಕೆಯು ಅವರ ಕುರಿತಾಗಿ ಸಂಸ್ಮರಣ ಲೇಖನವನ್ನು ಬರೆದುಕೊಡುವಂತೆ ಕೇಳಿತ್ತು. ಆಗ ಸುನಂದಮ್ಮನವರಿಗೆ ನಾನೊಂದು ಕಲ್ಪನಾ ವಿದಾಯ ಎಂಬ ಲೇಖನವನ್ನು ಬರೆದಿದ್ದೆ.

ಅದರಲ್ಲಿ ಕೈಲಾಸದಲ್ಲಿ ಕುಳಿತ ಹಾಸ್ಯ ಲೇಖಕರ ದಂಡು ಅದರಲ್ಲಿಯೂ ಸುನಂದಮ್ಮನವರ ಮೆಂಟರ್ ರಾಶಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಇಂದು ಸುನಂದಮ್ಮ ಇಲ್ಲಿಗೆ ಬರುತ್ತಿದ್ದಾರಂತೆ ಎಂಬ ಸುದ್ದಿಯನ್ನು ಅವರು ಚರ್ಚಿಸುತ್ತಿದ್ದುದು. ಸುನಂದಮ್ಮ ಠೀವಿಯಿಂದ ಆ ಸಭೆಯನ್ನು ಪ್ರವೇಶಿಸುವುದು ಎಲ್ಲರೂ ಸುನಂದಮ್ಮನವರಲ್ಲಿ ಬೆಂಗಳೂರಿನ ಕನ್ನಡಿಗರ ಕುರಿತು ಕೇಳುವುದು ಅದಕ್ಕೆ ಸುನಂದಮ್ಮನವರು ಬೆಂಗಳೂರಿನ ಕನ್ನಡಿಗರ ವಿಪರೀತ ಹಿಂದಿ ಇಂಗ್ಲಿಷ್ ಅಭಿಮಾನಗಳ ಕುರಿತು ಬೇಸರದಿಂದ ಹೇಳುವುದು ಹೀಗೆ ಕಲ್ಪನಾ ಲಹರಿಯನ್ನೇ ಹರಿಯಬಿಟ್ಟಿದ್ದೆ. ಸುನಂದಮ್ಮನವರು ಅದನ್ನು ಓದಿದ್ದರೆ ಏನೆಂದು ಪ್ರತಿಕ್ರಿಯಿಸುತ್ತಿದ್ದರು ಎಂದೂ ಅನ್ನಿಸುವುದಿಲ್ಲ. ಆ ತಲೆಮಾರಿನ ಬದ್ಧತೆ ಔದಾರ್ಯತೆ ಹಾಗೂ ಹಾಸ್ಯ ಪ್ರಿಯತೆಗಳನ್ನು ಕನ್ನಡಿಗರಿಗೆ ಆಸ್ತಿಯಂತೆ ಬಿಟ್ಟುಹೋದ ಸುನಂದಮ್ಮನವರನ್ನು ನೆನೆಸಿಕೊಳ್ಳುವುದೇ ಒಂದು ಕೃತಾರ್ಥತೆಯ ಭಾವವನ್ನು ಮೂಡಿಸುತ್ತದೆ. ಕನ್ನಡ ಪುಸ್ತಕ ಪ್ರಾಧಿಕಾರಕ್ಕಾಗಿ ಈಗೆರಡು ವರ್ಷಗಳ ಹಿಂದೆ ಸುನಂದಮ್ಮನವರ ಸಮಗ್ರ ಸಂಪುಟದ ಸಂಪಾದಕಿಯಾಗಿ ಕೆಲಸ ಮಾಡುವಾಗ ಮತ್ತೊಮ್ಮೆ ಸುನಂದಮ್ಮನವರ ಎಲ್ಲಾ ಲೇಖನಗಳನ್ನು ಕೃತಿಗಳನ್ನು ಓದುವ ಅವಕಾಶ ಪ್ರಾಪ್ತವಾಯಿತು. ಅವರ ಒಂದೆರಡು ನಗೆ ಕವನಗಳನ್ನು ನನ್ನ ಭಾಷಣಗಳಲ್ಲಿ ಆಗೀಗ ಪ್ರಸ್ತಾಪಿಸಿದ್ದೇನೆ.

ನೀಡಿದರು, ಮಧ್ಯಸ್ಥಿಕೆ ಮಾಡಿದ ಮಹನೀಯರು. ಕಾಫಿತೋಟದ ಒಳ್ಳೆಯ ಹುಡುಗಿಯೇ! 'ಅತ್ತೆ, ಅತ್ತೆ!' ಎನ್ನುತ್ತ ಚೆನ್ನ ಹಿಂದೆ ತಿರುಗಾಡಿದಳು. ಮನೆಯವರೊಂದಿಗೆ ಬೆರೆತು ನಗುತ್ತ ಮಾತನಾಡಿದಳು. ಒಂದೆರಡು ವಾರಗಳೊಳಗೆ – ಮಾವನವರಿಗೆ ಮಜ್ಜಿಗೆ ಪಳಿದ್ಯ ಇಷ್ಟ, ಮೈದಾನ ಮೈದಾಹಲ್ವ ಪ್ರಿಯ, ಅತ್ತೆಗೆ ಅಡೆದೋಸೆ ಚಪಲ – ಎಂತೆಲ್ಲ ನಮ್ಮ ನಾಲಗೆಯ ಗುಟ್ಟನ್ನು ಅರಿತುಕೊಂಡಳು. ಕೆಲಸದವಳ ಕಷ್ಟ ಸುಖ ವಿಚಾರಿಸಿದಳು, ಹಾಲಿನವನ ಗೃಹಕೃತ್ಯದ ಪರಿಚಯ ಮಾಡಿಕೊಂಡಳು.

ತರಕಾರಿ ಹೆಚ್ಚಲು ಕೂತಾಗ ಹಿತವಾಗಿ ಹೇಳಿದಳು 'ಏಳಿ ಅತ್ತೆ, ಪಾಪ ಕೆಳಗೆ ಕೂತ್ಕೊಂಡು ಕಾಲ್ಯಾಕೆ ನೋಯಿಸ್ಕೊಳೀರಿ...' ಅಂದಿನಿಂದ ಆ ಕೆಲಸ ಸೊಸೆಯದಾಯಿತು.

ಮತ್ತೆರಡು ದಿನದ ನಂತರ ಅಂದಳು, 'ಇವತ್ತು ನಾನೇ ಅಡಿಗೆ ಮಾಡ್ತೀನಿ, ನೀವು ಸುಧಾರಿಸ್ಕೊಳ್ಳಿ'.

ನನ್ನ ಪಾಕಶಾಸ್ತ್ರದ ಪ್ರಾವೀಣ್ಯತೆಯ ಬಗ್ಗೆ ನನಗೆಂದೂ ಹೆಮ್ಮೆ; ಯಜಮಾನರು ಮಕ್ಕಳು ನನ್ನ ನಳಪಾಕಕ್ಕೆ ಆಶಿಸುವರೇನೋ ಎಂದು ಕಾದೆ. ನಮ್ಮವರೆಂದರು. 'ಹುಳಿ ಬಲು ಸೊಗಸಾಗಿ ಮಾಡಿದೀಯ ಕಣಮ್ಮ..!" ಮಗನೆಂದ, 'ಅತ್ತಿಗೆ ನೀವು ಮಾಡಿರೋ ರಾಯತಾನ ನಾನೊಬ್ಬನೇ ತಿಂದು ಮುಗಿಸಿಬಿಡೋ ಹಾಗಿದೆ.' ಅವತ್ತು ಅವಳು ತೆಗೆದುಕೊಂಡ ಅಡಿಗೆ ಛಾರ್ಜು, ಹಿಂದಕ್ಕೆ ಬರಲೇ ಇಲ್ಲ. ನನ್ನ ಕೈನ ನುಚ್ಚಿನುಂಡೆ – ಗೊಜ್ಜವಲಕ್ಕಿ – ಒತ್ತುಶಾವಿಗೆ ಹಾಲುಬಾಯಿ ಅಂದರೆ ನಾಲ್ಕು ಬಾಯಿ ಮಾಡಿ ತನ್ನ Cookery-Bakery-Canning ಸರ್ಟಿಫಿಕೇಟುಗಳನ್ನು ತೋರಿಸಿದಾಗ, ಹೊಸನೀರು ಬಂದು ಹಳೆಯ ನೀರನ್ನು ಕೊಚ್ಚಿಕೊಂಡು ಹೋಯ್ತು; ಅವಳು, ನನಗೆ ಹೆಸರು ಹೇಳಲೂ ಬಾರದ ಚಿತ್ರ ವಿಚಿತ್ರ ವೈವಿಧ್ಯ ತಿನಿಸಿನ ಸ್ಯಾಂಪಲ್ ತೋರಿಸಿದಾಗಲಂತೂ, ಸೋತರು – ಪೂರ್ಣ ಸೋತರು!

ಕಾಫೀ ತೋಟದ ಕುವರಿ – ಅವಳು ಕಾಫಿ ತಯಾರಿಸುವುದೇ ಒಂದು ವಿಶೇಷ ರೀತಿಯಂತೆ! ಕಾಫಿ ಫಿಲ್ಟರೂ ನನ್ನ ಕೈ ತಪ್ಪಿತು. ಅಂತೂ ಇಂತೂ ಆರು ತಿಂಗಳ ಅವಧಿಯಲ್ಲಿ ನನ್ನ ಪರಿಸ್ಥಿತಿ, ಒಂಟೆಗೆ ಡೇರೆಯೊಳಗೆ ಸ್ಥಳ ಕೊಟ್ಟ ಪ್ರಯಾಣಿಕನಂತಾಯ್ತು!

ಸಂಕ್ರಾಂತಿ ಬಂತು; ಹಳೇ ಪದ್ಧತಿಯಂತೆ ರಂಗೋಲೆ ತೋರಣ – ಎಳ್ಳು ಬೆರಕೆಯ ಪ್ರಯತ್ನದಲ್ಲಿದ್ದೆ. ಸೊಸೆ ಅಂದಳು. 'ಸುಮ್ನಿರಿ ಅತ್ತೆ, ಕಷ್ಟಪಡಬೇಡಿ' – ಬಿಳೀ ಪೇಯಿಂಟ್ನಲ್ಲಿ ಪರ್ಮನೆಂಟ್ ಹಸೆ ಬರೆದು, ಹಸಿರು ಪ್ಲಾಸ್ಟಿಕ್ ತೋರಣ ಕಟ್ಟಿ, ಪ್ಯಾಕೆಟ್ ಎಳ್ಳು ಕೊಂಡು ತಂದು ಬಗೆಹರಿಸಿದಳು. ನಾನು ನೆಲದ ಮೇಲೆ ಚಾಪೆ ಹಾಸಿ ಎಲೆ ಹಾಕಿದಾಗ, 'ಬಡಿಸುವ ಶ್ರಮ ಏಕೆ?' ಎನ್ನುತ್ತ, ಮೇಜಿನ ಮೇಲೆ ತಟ್ಟೆ ಇಟ್ಟು ಊಟ ಬಡಿಸಿದಳು...! ಆಗ ಅನ್ನಿಸಿತು; 'ಅತ್ತೆಗೊಂದು ಕಾಲ

ಸೊಸೆಗೊಂದು ಕಾಲವಲ್ಲ. 'ಸೊಸೆಗೆ ಕಾಲ', ಅತ್ತೆ, ಮಾಜೀ ರಾಜರಂತೆ: 'ಹಿಸ್ ಹೈನೆಸ್'ಗಳು ಸಾದಾ 'ಮಿಸ್ಟರ್' ಆಗಿರುವಂತೆ ಇವರೂ ಅಧಿಕಾರರಹಿತ, ಪದಪೀ ಮೈನಸ್' ಎಂದು.

ಅದೊಂದು ದಿನ ಸೊಸೆ ಇದ್ದಕ್ಕಿದ್ದಂತೆ ನನ್ನನ್ನೇ ನಾಲ್ಕು ನಿಮಿಷ ನಿಟ್ಟಿಸಿದಳು: 'ತ್ಸುತ್ಸುತ್ಸುತ್ಸು' ಎಂದು ಲೊಚಗುಟ್ಟಿದಳು. "ಅತ್ತೆ, ನೀವು ಡಯಟ್ ಮಾಡ್ಬೇಕು. ಇಲ್ಲದಿದ್ರೆ ನಿಮ್ಮ ವಯಸ್ಸಿನಲ್ಲಿ Blood pressure ಏರೋದು ಸಹಜ ಅದರಿಂದ Heart trouble ಆರಂಭ ಆದರೂ ಆದೀತೇ! ಈಗಲೇ ಮುನ್ನೆಚ್ಚರಿಕೆ ತೆಗೆದುಕೊಳ್ಳದಿದ್ದರೆ...' ಮತ್ತೆ ಲೊಚಗುಟ್ಟಿದಳು...! ನಾನು ದಿನದಿನಕ್ಕೆ ಕುರ್ಚಿ ತುಂಬುತ್ತಿದ್ದುದೇನೋ ನಿಜ; ಹಿತ್ತಾಯದ ವಿಶ್ರಾಂತಿಯಿಂದ ಮತ್ತಿನ್ನೇನಾದೀತು? ಆದರೂ, ನನ್ನ ಭಾರವನ್ನು ನಾನು ಹೊರುವಾಗ ಇವಳೇಕೆ ನನ್ನ ಇಳಿವಯಸ್ಸಿನ ನೆನಪು ಮಾಡಿಕೊಡಬೇಕು?

'Eat to live or live to eat' (ಬದುಕುವುದಕ್ಕೆ ತಿನ್ನು, ಅಥವಾ ತಿನ್ನುವುದಕ್ಕೆ ಬದುಕು) ಎನ್ನುವುದೊಂದು ಹೇಳಿಕೆ. ನಾನು ಎರಡನೆಯ ಗುಂಪಿಗೆ ಸೇರಿದವಳು. ರುಚಿಕಟ್ಟಾದ ಅಡಿಗೆಯನ್ನು ವರಸೆ ವರಸೆಯಾಗಿ ಕಲಿಸುವ ಸುಖಜೀವಿ! ಅಂಥವಳನ್ನು ಸೊಸೆ ಮಹಾತಾಯಿ, ತಿಳಿಸಾರನ್ನ – ಸೊಪ್ಪಿನ ಪಲ್ಯ – ಒಣಪಲ್ಯದ ಪಥ್ಯವಿರಿಸಿಬಿಡುವುದೇ? ಅಷ್ಟೇ ಸಾಲದೆ, ನನ್ನನ್ನು ಅದಾವುದೋ ಯೋಗಶಾಲೆಗೆ ಬೇರೆ ಸೇರಿಸಿಬಿಟ್ಟಳು. ಅರೆಹೊಟ್ಟೆ ಉಂಡು ವಿಚಿತ್ರ ಉಡುಗೆ ತೊಟ್ಟು ಮೈ ಬಗ್ಗಿಸಿ ಕಾಲುತುದಿ ಮುಟ್ಟುವ ವೇಳೆ ಮೂರ್ಛೆ ಬರುವ 'ನಾಲ್ಕು ದಿನ ಆದರೆ ಅದೇ ಸರಿಹೋಗುತ್ತೆ' ಎಂದುಬಿಟ್ಟಳು... ದೇವರ ದಯ ಹದಿನೈದು ದಿನ ಕಳೆದಾಗ, ಮಗನಿಗೆ, ದಿಲ್ಲಿಗೆ ವರ್ಗವಾಯ್ತು ಗಂಡ ಹೆಂಡತಿ ಹಾರಿಹೋದರು. ಯೋಗಿಯಾಗಿದ್ದ ನಾನು, ಮತ್ತೆ ಭೋಗಿಯಾದೆ.

* * *

ನಂತರದ್ದು ಎರಡನೆಯವನ ಲಗ್ನ 'ಎರಡು ಡಿಗ್ರಿ ಮೂರು ಡಿಪ್ಲೋಮಾಧಾರಿ ಅಡಿಗೆ ಕೆಲಸದ ಗಂಧವೇ ಇಲ್ಲ' ಅಂದಾಗ, ಈ ಸೊಸೆಯನ್ನು ಸಂತೋಷದಿಂದ ಸ್ವಾಗತಿಸಿದೆ. ತನ್ನ ಪಾಡಾಯ್ತು ತಾನಾಯ್ತು ಹಾಕಿದ್ದು ತಿಂದುಕೊಂಡು ಗಂಡನೊಂದಿಗೆ ಪಾರ್ಕು – ಪಾರ್ಟಿ ಪಿಕ್ಚರು ಎಂದು ತಿರುಗಾಡಿಕೊಂಡಿದ್ದಳು; ಮನೆಯಲ್ಲಿದ್ದಾಗ ಪುಸ್ತಕ – ಪೇಪರು – ಮ್ಯಾಗಜೀನು – ರೇಡಿಯೋ!

ಲಗ್ನವಾದ ವರ್ಷಕ್ಕೆ ಮೊಮ್ಮಗಳ ಆಗಮನವೂ ಆಯ್ತು; ಎರಡು ತಿಂಗಳ ಕೂಸನ್ನೆತ್ತಿಕೊಂಡು ನಮ್ಮ ಮನೆಗೆ ಅವಳು ತೌರಿನಿಂದ ಬಂದ ಮಾರನೆಯ ದಿನ ಮಗನೆಂದ, 'ಅಮ್ಮ ನಿನ್ನ ಸೊಸೆ ಮೊದಲನೇ ತಾರೀಖಿನಿಂದ ಕೆಲಸಕ್ಕೆ ಹೋಗ್ತಾಳೆ.' 'ಕೆ...ಕೆಲ್ಸಕ್ಕೆ? ಎಳೆ ಕಂದಮ್ಮನ್ನ ಬಿಟ್ಟು...?' 'ಹೌದು ಅತ್ತೆ! ಇಷ್ಟೊಂದು ಓದಿ ಮನೇಲಿ ಕೂತಿರಲೇ? ನನಗೋಸ್ಕರ ಈ ಕೆಲ್ಸಾನ ಆರು ತಿಂಗಳಿಂದ ರಿಸರ್ವ್ ಮಾಡಿಟ್ಟಿದ್ದಾರೆ; ಇದೊಂದು ಅಧ್ಯಾಯ ಮುಗೀಲಿ ಅಂತ ಕಾದಿದ್ದೆ...' ಸೊಸೆ ದನಿಗೂಡಿಸಿದಳು.

'Babysitter' ಉದ್ಯೋಗ ನನ್ನದಾಯ್ತು; ಅಭ್ಯಾಸವಿಲ್ಲದ ಬ್ರಾಹ್ಮಣ ಅಗ್ನಿಹೋತ್ರ ಮಾಡಿ-ಕೈಬಾಯಿ ಸುಟ್ಟುಕೊಂಡ ಹಾಗೆ; ಎಂದೋ ಮರೆತುಹೋಗಿದ್ದ ಶೀಶೆ-ರಬ್ಬರು-ಹಾಲಿನ ಪುಡಿ - ಹಣ್ಣಿನ ರಸಗಳ ಪ್ರಪಂಚಕ್ಕಿಳಿದು, ಶೀಶೆಗೆ ರಬ್ಬರ್ ಹಾಕಲು ಬಾರದೆ ಎಳೆದಾಡಿ ಎರಡು ರಬ್ಬರ್ ಹರಿದು ಮೂರು ಶೀಶೆ ಒಡೆದು ಕಡೆಗೆ ಕಲಿತದ್ದಾಯ್ತು. ಟೋಪಿ-ನ್ಯಾಪಿ-ಬಿಬ್ಬು-ಟಬ್ಬು-ರಾಂಪರ್ಸ್ಸು-ಜಂಪರುಗಳ ಪರಿಚಯವಾಗಿ ಪಳಗಿದ್ದೂ ಆಯ್ತು!

* * *

ಮದರಾಸಿನಲ್ಲಿರುವ ಮಗಳ ಮನೆಗೆ ನಾನು ಅಪರೂಪಕ್ಕೆ ಹೋದಾಗ ಆದರದ ಸ್ವಾಗತ ಸಿಕ್ಕಿತು. ಸ್ಟೇಷನ್ನಿಗೆ ಅಳಿಯಂದಿರೇ ಕಾರು ತಂದು ಕರೆದುಕೊಂಡು ಹೋದರು. ತಾವೇ ನನ್ನ ಪೆಟ್ಟಿಗೆ ಹೊತ್ತು ತಂದರು, ಬುಟ್ಟಿ ಎತ್ತಿರಿಸಿದರು. ತಿಂಡಿ ತಿಂದು ಹೊಗಳಿದರು...! ಅಚ್ಚುಕಟ್ಟಾದ ಪುಟ್ಟ ಬಂಗಲೆ, ಅಡಿಗೆಯವ, ಸುಖಜೀವನ.

ಒಂದೆರಡು ದಿನ ಕಳೆದಾಗ ಅಕಸ್ಮಾತ್ ಅಡಿಗೆ ಮನೆಗೆ ಹೋದೆ, ಅಡಿಗೆಯಾತ ಒಂದು ಚೀಟಿ ಹಿಡಿದುಕೊಂಡು ಓದಿಕೊಳ್ಳುತ್ತಿದ್ದ, ನನ್ನನ್ನು ಕಂಡು, 'ಹೆಹೆಹೆಹೆ....' ಎಂದ. 'ಏನದು ನಾಗಪ್ಪ?' ಕೇಳಿದೆ. ಅತ್ತ ಇತ್ತ ನೋಡಿ ಮೆಲ್ಲನೆ ಹೇಳಿದ, 'ಸಾಹೇಬ್ರು ಅಮ್ಮಾವರನ್ನ, ನಿಮಗೆ ಯಾವ್ಯಾವ ಅಡಿಗೆ, ತಿಂಡಿ, ಇಷ್ಟ ಅನ್ನೋದನ್ನ ಕೇಳ್ಕೊಂಡು ಪಟ್ಟಿ ಬರಕೊಟ್ಟಿದ್ದಾರೆ. ಆನಂದವಾಯ್ತು ಎಷ್ಟು ಆಸಕ್ತಿ? ಎಂಥಾ ಒಳ್ಳೇ ಅಳಿಯ? "ಹೌದೇ?" ಹಿಗ್ಗಿದೆ. "ಹೌದು, ನೀವಿರೋವರೆಗೆ ಈ ಪಟ್ಟೀಲಿರೋ ಯಾವುದಾದರೂ 'ಐಟಂ' ಮಾಡಿದರೆ ನಿನ್ನ ಕೆಲ್ಸ ಕಳಕೊಳ್ತಿಯಾ ಅಂತ ಹೇಳಿದಾರೆ!" ಪಿಸುಗುಟ್ಟಿದ ಬುಸುನಾಗಪ್ಪ.

'ಭಾನುವಾರ ನಗರಪ್ರದಕ್ಷಿಣೆ ಮಾಡಿಸ್ತೇವೆ' ಎಂದಿದ್ದಳು ಮಗಳು. ಆ ದಿನ ಸಿದ್ಧಳಾಗಿ ಹೊರಗೆ ಬರುವ ವೇಳೆಗೆ ಅಳಿಯಂದಿರ ಕೊಠಡಿಯಿಂದ ಧ್ವನಿ ಕೇಳಿಸಿತು, 'ಮೊದಲೇ ಕಾರಿನ ಹಿಂದಿನ ಟೈರು ವೀಕು, ಬಸ್ನಲ್ಲೇ ಹೋಗೋಣವೇನೇ?'

'ಅಮ್ಮ ! ಇವರು ನಿನ್ನ ಫೋಟೋ ತೆಗೀತಾರಂತೆ...' ಮಗಳೆಂದಾಗ ನಾಚಿದೆ; ಮನಸ್ಸಿನಲ್ಲಿ ಹೊರೆ ಆಸೆ ಇದ್ದರೂ, 'ನನಗ್ಯಾಕಮ್ಮ ಫೋಟೋ?" ಎಂದು ಬಿಂಕಮಾಡಿದೆ. ಒತ್ತಾಯಮಾಡಿ ಒಪ್ಪಿಸಿ ಎರಡು ಮೂರು ರೀತಿ ಕೂರಿಸಿ ನಿಲ್ಲಿಸಿ 'ಕ್ಲಿಕ್ಕಿ'ಸಿಯೇ ಬಿಟ್ಟರು...! ಮಾರನೇ ಬೆಳಿಗ್ಗೆ ಬಾಯಿಬಿಟ್ಟಿತು. ಅರಗಿಣಿ – 'ಇವ್ರು ಫೋಟೋಗ್ರಫಿ ಸ್ಪರ್ಧೆಗೆ ಸೇರಿದ್ದಾರಮ್ಮ; ವಿಷಯ – 'ಪುರಾತನ ಮಾದರಿಗಳು'...!!

ಇದ್ದಕ್ಕಿದ್ದಂತೇ ಅಳಿಯಂದಿರು ಮಗಳೊಟ್ಟಿಗೆ 'ಟೂರ್' ಹೋಗಬೇಕಾಗಿ ಬಂದದ್ದರಿಂದ, ತಿಂಗಳ ವಾಸ್ತವ್ಯಕ್ಕೆ ಮದರಾಸಿಗೆ ಹೋಗಿದ್ದವಳು. ಹದಿನೈದು ದಿನಕ್ಕೆ ಹಿಂದಿರುಗಬೇಕಾಯಿತು. ನಾನು ಕೂತಿದ್ದ ಕಂಪಾರ್ಟ್ಮೆಂಟ್ನಲ್ಲೇ ಪ್ರಯಾಣ ಮಾಡಿದ ಅವರ ಸಹೋದ್ಯೋಗಿ ಮಾತ್ರ, ಅವರ ಕೆಲಸದಲ್ಲಿ ಟೂರೇ ಇಲ್ವಲ್ಲ?' ಎಂದು ಕಿಸಿಕಿಸಿ ನಕ್ಕ.

* * *

ದೂರದ ಕಲಕತ್ತೆಯಿಂದ ಇನ್ನೊಬ್ಬ ಮಗಳ ಕರೆ ಬಂದಾಗ ಹೋಗಬಾರದೆಂದೇ ಇದ್ದೆ; ಮೊದಲ ಮಗು ಹುಟ್ಟಿದಾಗಲೇ ತೌರಿಗೆ ಬಾರದೇ ಉಳಿದವಳಿಗೆ ಎರಡನೆಯ ಬಾರಿಗೆ ನನ್ನ ಸಹಾಯಬೇಕೆ...? ಆದರೆ, ತಾಯಿ ಕರುಳು ಕೇಳಬೇಕಲ್ಲ? ಮತ್ತೊಂದು ಬೇಡಿಕೆ ಬಂದಾಗ ಹೌರಾ ಎಕ್ಸ್‌ಪ್ರೆಸ್ ಹತ್ತಲೇಬೇಕಾಯ್ತು.

ಮಗುವಿಗೆ ಮೂರು ತಿಂಗಳು ತುಂಬಿದ ಮೇಲೆ ನನ್ನ ಮರುಪ್ರಯಾಣ: ವಾರದ ಮುಂಚೆ ಅಳಿಯಂದಿರು ಅದೇನೇನೋ ಫಾರಮ್‌ಗಳಿಗೆ ನನ್ನ ರುಜು ಹಾಕಿಸಿಕೊಂಡರು. ಅವರೆದುರು ಕೇಳಲು ಸಂಕೋಚಪಟ್ಟು, ನಂತರ 'ಏನೇ ಅವು? ರೈಲ್ವೆ ಟಿಕೆಟ್ಟಾ?'

'ಟಿಕೆಟ್‌ಗಲ್ಲಮ್ಮ! ನಿನ್ನಳಿಯ ಈಗ ಸೇರಿರೋ ಹೊಸ ಕಂಪನೀಲಿ, ಮಗು ಹುಟ್ಟಿದರೆ ಅದರ ಅಟೆಂಡೆಂಟ್‌ಗೆ ತಿಂಗಳಿಗೆ ಐನೂರು ರೂಪಾಯಿ ಆಲೋಯೆನ್ಸ್ ಕೊಡ್ತಾರೆ. ಅದಕ್ಕೆ...!' ಪುಣ್ಯಕಾರ್ಯ! ಅಳಿಯಂದಿರ Bank balance ಭರ್ತಿ ಮಾಡಿಬಂದೆ.

ನಮ್ಮ ಕಿರಿಮಗ ಅಪ್ಪಟ ಕನ್ನಡಮ್ಮನ ಕುವರ, ಕನ್ನಡದ ಮುನ್ನಡೆಗಾಗಿ ಕೈಕಟ್ಟಿ ಟೊಂಕಕಟ್ಟಿ ನಿಂತವ. 'ಕನ್ನಡ' ಪುಸ್ತಕ ಕೊಂಡು ಓದಿ... ಕನ್ನಡ ಚಿತ್ರಗಳನ್ನೇ ನೋಡಿ... 'ಕನ್ನಡ ಆಡಳಿತ ಭಾಷೆ ಆಗಲಿ...' ಎಲ್ಲ ಚಳವಳಿಗೂ ಮುಂದಾಳು, ರಾಜ್ಯೋತ್ಸವದಲ್ಲಂತೂ ಭಾಷಣಗಳನ್ನು ಬಿಗಿದು ಗಂಟಲು ಮುಚ್ಚಿ, ಬಿಸಿನೀರು – ಉಪ್ಪುಶಾಖ–ಮೆಣಸು ತುಪ್ಪದವರೆಗೆ ಮುಟ್ಟುತ್ತಿದ್ದ. ಓದಿನಲ್ಲೂ (ಮುನ್ನಡೆದವನೇ) ಎಂ.ಎಸ್ಸಿ. ಮುಗಿಸಿ ಸ್ಕಾಲರ್ಷಿಪ್‌ನಲ್ಲಿ ಕೆನಡಾಕ್ಕೆ ಹೋಗಿ ಎರಡು ವರ್ಷವಾಯಿತು; ಹೋದ ಆರು ತಿಂಗಳಲ್ಲೇ ಗೃಹಸ್ಥನಾದ ಸುದ್ದಿಯನ್ನು Air-mail ಹೊತ್ತು ತಂದಿತು. ಈ ಕನ್ನಡಮ್ಮನ ಕೂಸು ಕೈ ಹಿಡಿದದ್ದು ಕನ್ನಡ ಕನ್ಯೆಯನ್ನಲ್ಲ–ಕೆನಡಾ ಕನ್ಯೆಯನ್ನು!

ನಿನ್ನೆ ದಂಪತಿ ನಮ್ಮೂರಿಗೆ ಬಂದರು. ನಮ್ಮವರು, 'ಎಷ್ಟಾದರೂ ನಮ್ಮ ಸೊಸೆ ಅಲ್ವೇ?" ಎನ್ನುತ್ತ ಜೋಡಿಹಾರ ಹಿಡಿದು ನನ್ನನ್ನ ಏರ್‌ಪೋರ್ಟ್‌ಗೆ ಕರೆದುಕೊಂಡು ಹೋದರು. ಅವರೇನೋ ಸರಾಗವಾಗಿ ಮಗನ ಕೊರಳು ಮುಟ್ಟಿದರು, ನಾನು ಮಾತ್ರ ಆ ಭವ್ಯದೇಹಿಗೆ ಮಾಲೆ ಹಾಕುವಲ್ಲಿ, ಮೆಟ್ಟಿಂಗಾಲಿರಿಸಿ ಬುಗುರಿಯಂತೆ ಒಂದು ಸುತ್ತು ತಿರುಗಿ ಸಮತೋಲ ಪಡೆಯಬೇಕಾಯ್ತು!

'ಹಲೋ ! ನೀನೇ ಅಲ... ಅಥೇ?'– ಅಂದವಳು ನನ್ನ ಭುಜ ಬಳಸಿದಾಗ ಮೂಳೆ ಟಿಕ್' ಎಂದು ಕೊರಗಿತು. ಒಂದಿಷ್ಟು ಕನ್ನಡ ಕಲಿಸಿದೀನಮ್ಮ ಇವಳಿಗೆ!' ಮಗ ಹೆಮ್ಮೆಯಿಂದ ಹೇಳಿದ.

"Yes ನೀನು... ನನ್‌ಗೆ... ಕಾನಢ ಆಥು" – ಅಂದಳು ಸೊಸೆಮುದ್ದು, ಈವರೆಗೆ, ಮತ್ತೇನಿಲ್ಲದಿದ್ದರೂ ಅದೂ ಏಕವಚನಕ್ಕೆ ಇಳಿದಾಗ, 'ನಾನು ಕಂಡ ಅತ್ತೆಗಿರಿ'ಯ ಕನಸೇನು, ಬಹುವಚನ ಸಂಬೋಧನೆ ಉಳಿದಿತ್ತು. ಆಗಿರುವುದೇನು? ಎಂದು ಮನಸ್ಸಿನಲ್ಲೇ ಸಣ್ಣಗೆ... ಅತ್ತೆ!

* * *

ಅಖಿಲ ಭಾರತ ಅತ್ತೆಯರ ಪರಿಷತ್ತು

ಉಂಡ ಬಾಯಿಗೆ ಹಾಕಿಕೊಂಡ ಅಡಿಕೆ ತುಂಡನ್ನು ನೆನೆಸಿ ನುಂಗುವ ಘನ ಸಾಹಸದಲ್ಲಿದ್ದಳು, ಗಂಗಮ್ಮ, ಬೀಗಿತಿ ಭಾಗೀರಥಮ್ಮ ಮಗಳನ್ನೊಯ್ಯಲು ಬಂದಾಗ, ಬೇಕೆಂದೇ ಉಪಚರಿಸಿ ಕೊಟ್ಟಿದ್ದಳು–"ಬಾಯಿಗೆ ಅಡಿಕೆ ಚೂರು ಹಾಕೊಳ್ಳಿ ಬೀಗಿತ್ತಮ್ಮ. ಜೀರ್ಣಕ್ಕೆ ಒಳ್ಳೇದು; ವಯಸ್ಸಲ್ಲಿ, ಉಂಡದ್ದು ಅರಗೋದು ಕಷ್ಟ ಪಾಪ!" ವ್ಯಂಗ್ಯದ ಮೊನಚಿನಲ್ಲಿ ಚುಚ್ಚುತ್ತ, ತಾನು ಕಿರಿಯಳೆಂದು ತೋರಿಸಿಕೊಳ್ಳುವ ಜಾಣ್ಮೆ ಗಂಗಮ್ಮನದು; ಕೃತಕ ದಂತವೆನ್ನುವುದನ್ನು ಎತ್ತಿಹಾಕುವ ಚಾತುರ್ಯ.

ಅವಳೆದುರು ಸೋಲನ್ನೊಪ್ಪಿಕೊಳ್ಳಲಾರದೆ ಆ ಮಲೆನಾಡು ಗಂಟಡಿಕೆ ತುಂಡನ್ನು ಬಾಯಿಗೆ ತಳ್ಳಿಯಾಗಿತ್ತು; ಅಗಿದರೆ ಮುನ್ನೂರರ ಹಲ್ಲು ಮುರಿದೀತೆನ್ನುವ ಅಂಜಿಕೆ; ಉಗಿದರೆ ಬೀಗಿತ್ತಿಯೆದುರು ನಗೆಪಾಟಲಾಗುವ ನಾಚಿಕೆ–ಅಂತೂ ಕಡುಬಿನೊಳಗಿನ ಹೂರಣದಂತೆ ಒಳಗೇ ಕೂತಿತ್ತು, ಅದು.

"ಊಟ ಆಯ್ಕೆ ಗಂಗಮ್ಮ? ಲೀಲಾ ಎಲ್ಲಿ ಕಾಣಲ್ಲ?" ಗಂಗಮ್ಮನ ಸೊಸೆ ಅವರಮ್ಮನೊಟ್ಟಿಗೆ ಚಪ್ಪಲಿಗಂಟು, ಬಟ್ಟೆಮೂಟೆ, ಒಡವೆ, ಸೀರೆಪೆಟ್ಟಿಗೆ, ಹೆಗಲಿಗೆ ಮಿಷನ್ನು, ತಂತಿಯಿಲ್ಲದ ತಂಬೂರಿ ಸಹಿತ ಕಾರು ಹತ್ತಿ ಹಾರಿಹೋದುದನ್ನು ತನ್ನ ಕೊಠಡಿಯ ಕಿಟಕಿಯಲ್ಲೇ ಕಾದು ಕೂತಿದ್ದು ಕಂಡಿದ್ದ ನೆರೆಮನೆ ನಾಗಮ್ಮ, ಲೀಟರ್ ಹಾಲು ಕುಡಿದು ಮೀಸೆ ಒರೆಸಿಕೊಂಡ ಮಳ್ಳಿ ಬೆಕ್ಕಿನಂತೆ ಒಳಹೊಕ್ಕು ಕೇಳಿದಳು.

ಗರಬಡಿದಂತೆ ಕೂತಿದ್ದ ಗಂಗಮ್ಮನಿಗೆ ಆಗ ನೆನಪಾಯ್ತು–ಬೀಗಿತ್ತಿ ಎದುರಿಗಿಲ್ಲವೆಂದು; ಬಿಡುಗಡೆಯಾಯ್ತೆಂದು ಬಾಯಿ ತೊಳೆದು ಬಂದು ಎಂದಳು "ಲೀಲ ತೌರುಮನೆಗೆ ಹೊರಟುಹೋದಳು ನಾಗಮ್ಮ ಗಂಡ, ಬೇರೆ ಮನೆ ಮಾಡಿ ಸಂಸಾರ ಹೂಡೋವರೆಗೂ ಬರಲ್ವಂತೆ! ಅದೇನೋ ನನ್ನನ್ನ 'ಓಲ್ಡ್ ಹ್ಯಾಗ್' ಅಂದುಕೊಂಡಳಮ್ಮ!"

"ತ್ಸುತ್ಸುತ್ಸುತ್ಸು!" – 'ಎರಡು ಹೊತ್ತಿನ ಊಟಕ್ಕೆ ಮಾತ್ರ ನಿಮಗೆ ಹಕ್ಕು ಎಂದು ಬಾಯಿಬಿಟ್ಟು ಹೇಳದಿದ್ದರೂ ತನ್ನನ್ನೊಂದು DUMMY ಮಾಡಿಕೊಡಿಸಿರುವ ಸೊಸೆಯ ಕೈಗೊಂಬೆಯಾಗಿದ್ದ ನಾಗಮ್ಮನಿಗೆ, ತನಗೊಂದು ಜತೆಯಾಯ್ತೆಂದು ಮನಸ್ಸು ನಲಿದರೂ, ಚುನಾವಣೆಯಲ್ಲಿ ಸೋತ ಅಭ್ಯರ್ಥಿಗೆ ಗೆದ್ದಾತ ಸಹಾನುಭೂತಿ ತೋರಿಸುವಂತೆ ತ್ಸುತ್ಸುಗುಟ್ಟಿದಳು,

"ನಮ್ಮದೊಂದು ಬಾಳೇ ಗಂಗಮ್ಮ? ನಿಜಕ್ಕೂ, ವಾರಪತ್ರಿಕೇಲಿ ಬಂದಿರೋ ಲೇಖನ ಓದಿ, ಹೊಟ್ಟೇಲಿ ಬಲು ಸಂಕಟ ಆಯ್ತು ಗಂಗಮ್ನೋರೆ!" ಗಂಗಮ್ಮನಿಗಿಂತ ವಿದ್ಯಾವಂತೆಯಾಗಿದ್ದು, ಅಷ್ಟಿಷ್ಟು, ಇಂಗ್ಲಿಷ್ ಪದಗಳ ಅರ್ಥ ತಿಳಿದಿದ್ದ ನಾಗಮ್ಮ ನಿಡುಸುಯ್ದಳು.

"ಅದೇನು ವಿಷಯ ಬರೆದಿದ್ದಾರೆ ನಾಗಮ್ಮ ಅದರಲ್ಲಿ?"

ಹಿಂದಿನ ಕಾಲದ ಅತ್ತೇರ ಅಧಿಕಾರ, ಅವರು ಸೊಸೇರ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆ ಎಂಥ ಚೆನ್ನಾಗಿ ವರ್ಣಿಸಿದಾರೇಂತೀರಿ? ನಾವೂ ಇದೀವಿ–ಅದೆಂಥದೋ 'ಓ ಕಾಂಗ್ರೆಸ್' ಅಂತಾರಲ್ಲ ಹಾಗೆ–

ಅಧಿಕಾರ ಅಂತಸ್ತು ಕಳೆದುಕೊಂಡು ರೆಕ್ಕೆ ಮುರಿದ ಪಕ್ಕಿಗಳು ಅಷ್ಟೆ! "ಅಲ್ವೇ ಮತ್ತೆ? ಈಗ ನನ್ನ ಪಾಡು ನೋಡಿ, ಬಿಸಿತುಪ್ಪ ಬಾಯಲ್ಲಿಟ್ಕೊಂಡರು ಅಂತಾರಲ್ಲ? ಅಂದಹಾಗೇ ಅದನ್ನ ಓದಾದರೂ ಓದಿ, ಕೇಳಿ ಸಂತೋಷಪಡೋಣ"

"ಹುಂ, ಅತ್ತೆ, ಬಂದ ಬಂಧುಗಳೆದುರಿಗೆ ಸೊಸೆಗೆ ಓಂದಿನ ದಿನದ ಹಳಸಿದ ಓಟ್ಟಿಗೆ ನಾಲ್ಕು ದಿನದ ಹುಳಿ ಮಜ್ಜಿಗೆ ಬೆರೆಸಿ ಬಡಿಸಿ 'ಬಿಸಿಗಂಜಿ ತುಪ್ಪ ಹಾಕಿದೀನಿ ಉಣ್ಣು ಹೆಣ್ಣೆ' ಅಂದಳಂತೆ: ಸೊಸೆ ತಿನ್ನಲಾರದೆ, 'ನನಗೆ ಬೇಡ, ಕರುವಿಗೆ ಹಾಕಿ' ಅಂದಳಂತೆ, ಅತ್ತೆ ಮಗನಿಗೆ ವಾರಂಟ್ ಕೊಟ್ಟಳಂತೆ. 'ಬಂದೋರೆದುರಿಗೆ ಅವಮಾನ ಮಾಡಿದಳು. ನಿನ್ನ ಹೆಂಡತಿ, ಅವಳನ್ನು ತೌರಿಗೆ ನೂಕಿ ಬಾ' ಅಂತ!

"ಆಹಾ! ಹಾಗಿರಬೇಕು ಅತ್ತೆಪಟ್ಟ!"

ಒಬ್ಬ ಸೊಸೆ ತೌರಿಗೆ ಹೋದಾಗ ತಾಯಿ ಕೇಳಿದಳಂತೆ: 'ಮಗಳೇ, ಅತ್ತೆಯ ಮನೆಯಲ್ಲಿ ಹೇಗಿರುವೆ?' ಮಗಳೆಂದಳಂತೆ "ಬಾಗಿಲ ಸಂದಿಗೆ ಕೈ ಬೆರಳು ಕೊಟ್ಟ ಹಾಗೆ!" ಇನ್ನೊಬ್ಬ ಸೊಸೆ ವ್ಯಾಖ್ಯಾನ: 'ಹಟ್ಟಿಯ ಹಣೆ ಮುಂಗಾಲಿಗೆ ಹೊಡೆದ ಹಾಗೆ!'

"ಕೇಳಿದಿರಾ? ಉಸ್! ನಾವು ಈ ಕಾಲದಲ್ಲಿ ಹುಟ್ಟಿ ಕೂತಿದೀವಲ್ಲ ನಾಗಮ್ಮ? ತ್ರಿಶಂಕು ಸ್ವರ್ಗ ನಮ್ಮ ಬಾಳು!'

"ಗಂಗಮ್ಮನೋರೇ, ನನಗೊಂದು ಯೋಚನೆ ಹೊಳೆದಿದೆ, ಅದೆಂತೆಂಥದೋ ಸಮ್ಮೇಳನಗಳು, ಸಭೆಗಳು, ಪರಿಷತ್ತುಗಳು, ನಡೆಯುತ್ತೆ. ದೇಶದಲ್ಲಿರೋ ಅತ್ತೇರನ್ನೆಲ್ಲ ಕಲೆಹಾಕಿ ಒಂದು ಸಭೆ ಯಾಕೆ ನಡೆಸಬಾರದು?"

"ಘನವಾದ ಯೋಚನೆ, ಹಾಗೆ ಕರೆಸಿ ಅತ್ತೇರ ಕಷ್ಟ ನಷ್ಟಗಳ ಅಹವಾಲು ಕೇಳಿ, ಪರಿಹಾರ ಮಾರ್ಗ ಹುಡುಕಿ."

"ಸೊಸೇರಿಗಿಷ್ಟು ಬುದ್ಧಿಮಾತು ಹೇಳಿ–ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಕಣ್ರೇ: ನೀವು ಈಗ ಅತ್ತೇರ ಕೈಲಿ ಮೂತಿ ತಿವಿಸಿಕೊಂಡರೆ, ಮುಂದೆ ನೀವು ಅತ್ತೇರಾದಾಗ ಅದೇ ಮಹಾ ಕಾರ್ಯಾನ ಮುಂದುವರಿಸಬಹುದು ಅಂತ ತಿಳಿವಳಿಕೆ, ಮುನ್ನೆಚ್ಚರ ಕೊಡಬೇಕು!"

* * *

ಊರಲ್ಲೆಲ್ಲಿ ನೋಡಿದರೂ ಭಿತ್ತಿಪತ್ರಗಳು! ಸರ್ಕಲ್ ಕಂಬದ ಮೇಲೆ, ಕಾಂಪೌಂಡು ಗೋಡೆಗಳನ್ನಂಟಿ, ಎಲೆಕ್ಟ್ರಿಕ್ ಕಂಬಗಳ ಸುತ್ತ, ಕಸದ ತೊಟ್ಟಿಯ ಹತ್ತಿರ, ಅಂಗಡಿಗಳ ಬೋರ್ಡಿನೆತ್ತರ, ಪತ್ರಿಕೆಗಳಲ್ಲಿ ಪ್ರಕಟಣೆ, ಕಾರಿನಲ್ಲಿ ಮೌತ್ ಪೋನಿನ ಮಹಾಬಾಯಿ ಮೂಲಕ, ಆಕಾಶವಾಣಿಯಲ್ಲಿ ಮೂರು ಮೂರು ಬಾರಿ ನಿವೇದನೆ!

"ನಗರದ ಪುರಭವನಲ್ಲಿ 22–10–71 ರಂದು ಸಂಜೆ 5.30 ಅಖಿಲ ಭಾರತ ಅತ್ತೆಯರ ಪರಿಷತ್ತು: ಅಹಮ್ಮದಾಬಾದಿನ ಪೂರ್ಣಿಮಾಬೆನ್ ಪಾನೀವಾಲಾರವರು ಅಧ್ಯಕ್ಷತೆ ವಹಿಸಲು ಒಪ್ಪಿರುವರು. ಸರ್ವರಿಗೂ ಆದರದ ಆಹ್ವಾನವುಂಟು."

ರೈಲ್ವೇ ಸ್ಟೇಷನ್ನಿನಲ್ಲಿ, ವಿಮಾನ ನಿಲ್ದಾಣದಲ್ಲಿ... ಬಸ್ ಸ್ಟ್ಯಾಂಡಿನಲ್ಲಿ, ಟ್ಯಾಕ್ಸಿ ನಿಲುಪಿನಲ್ಲಿ, ಆಟೋರಿಕ್ಷಾದ ಬೆನ್ನಿನ ಮೇಲೆ, ಬಟ್ಟೆಯ ಬೃಹತ್ ತೋರಣಗಳು, 'ಸುಸ್ವಾಗತ, ಅಖಿಲ ಭಾರತ ಅತ್ತೆಯರ ಪರಿಷತ್ತಿಗೆ'.

ಕೆನ್ನೆ ತುಂಬ ಅರಿಶಿನ, ಹಣೆ ಮೇಲೆ ಕಾಲು ರೂಪಾಯಿಯಗಲ ಕುಂಕುಮ, ಮೈತುಂಬ ಹದಿನೆಂಟು ಮೊಳದ ಸೀರೆ ಉಟ್ಟು ಟ್ರಂಕು, ಕೈಲಿ ಹಿತ್ತಾಳೆ ಕೂಜಾ ಹಿಡಿದು ಗಂಗಮ್ಮ, ನಾಗಮ್ಮ ರೈಲಿನಿಂದಿಳಿದಾಗ, ತುಂಬು ನಗೆಯೊಂದಿಗೆ ಸ್ವಾಗತಿಸಿದವರು. ಇಬ್ಬರು ಮಹಿಳೆಯರು; ಬೆಪ್ಪು ಮುಖದಿಂದ ತಮ್ಮನ್ನು ದೃಷ್ಟಿಸಿದಾಗ ವಿವರಿಸಿದರು–"ನಾವು ಸ್ವಯಂಸೇವಕಿಯರು! ತೋಳಿನ ಮೇಲಿರೋ ಈ ಬಿಲ್ಲೆ ನೋಡಿ। ಪ್ರೊಬೇಷನರೀ ಅತ್ತೇರನ್ನು ಈ ಡ್ಯೂಟಿಗೆ ಹಾಕಿದ್ದಾರೆ."

"ಪ್ರೊಬೇ...? ಹಾಗೆಂದರೆ?..."

"ನಮ್ಮ ಗಂಡು ಮಕ್ಕಳಿಗೆ ಮದುವೆ ನಿಷ್ಕರ್ಷೆ ಆಗಿದೆ. ಸೊಸೇರು ಮನೆಗೆ ಬಂದಿಲ್ಲವಾದುದರಿಂದ, ಈ ಪಟ್ಟ"

"ಅಂದ ಹಾಗೆ ನಿಮ್ಮದು ಯಾವ ಕ್ಯಾಂಪು 'ಎ'ನೇ, 'ಡಿ'ನೇ 'ಹೆಚ್' ಅಥವಾ 'ಜಿ'ನೋ?" ಎರಡನೆಯಾಕೆ ಹಾಕಿದ ಪ್ರಶ್ನೆ ಗಂಗಮ್ಮ ನಾಗಮ್ಮರಿಗೆ ಅರ್ಥವಾಗದೆ, "ಅದೆಂಥಾ ಕ್ಯಾಂಪ್ರಮ್ಮ? ನಮ್ಮ ಚಿಕ್ಕಂದಿನಲ್ಲಿ ಊರಿಗೆ ಮಾರಿ ಹೊಕ್ಕಾಗ ಪ್ಲೇಗ್ ಕ್ಯಾಂಪ್ ಹಾಕಿದ್ದರು; ಅಷ್ಟೇ ನನಗೆ ಗೊತ್ತು" ಎಂದಳು

ಸ್ವಯಂಸೇವಕಿ ನಗುತ್ತ ಹೇಳಿದಳು, "ಎ ಅಂದರೆ Arthritis, ಡಿ ಎಂದರೆ Diabetes, ಹೆಚ್ ಅಂದರೆ Heart Trouble, ಜಿ ಅಂದರೆ General Ailments, ಅಂತ ಈ ಪರಿಷತ್ತಿಗೆ ಬರೋರೆಲ್ಲ ಹೆಚ್ಚು ಕಡಿಮೆ ವಯಸ್ಸಾದೋರು, ಇದರಲ್ಲಿ ಯಾವುದಾದರೋ ಒಂದು ರೋಗ ಅವರಿಗಿದ್ದೇ ಇರುತ್ತೆ. ಅದಕ್ಕೇ ಬೇರೆ ಬೇರೆ ಬಿಡದಿ ಏರ್ಪಡಿಸಿದಾರೆ, ಒಂದೊಂದಕ್ಕೂ ಸ್ಪೆಷಲಿಸ್ಟ್ ವೈದ್ಯರನ್ನೂ ನೇಮಿಸಿದ್ದಾರೆ.

"ದೇವರ ದಯದಿಂದ ನಮಗೆ ಯಾವ ರೋಗಾನೂ ಇಲ್ರಮ್ಮ ನಮ್ಮನ್ನ 'ನೋ' ಕ್ಯಾಂಪಿಗೆ ಕಳಿಸಿಬಿಡಿ !–ನಾಗಮ್ಮ ಎಂದಾಗ, ನಿಲ್ದಾಣದಲ್ಲಿ ಅದೇ ತಾನೇ ಬಂದಿಳಿದಿದ್ದ ಇತರ ಪ್ರತಿನಿಧಿಗಳು ಮತ್ತು ಸ್ವಯಂಸೇವಕಿಯರು ಮುಸಿ ಮುಸಿ ನಕ್ಕರು!

ನಿರೋಗಿಗಳಿಗೆ ಪ್ರತ್ಯೇಕ ಬಿಡದಿ ಏರ್ಪಾಟಾಗಿರಲಿಲ್ಲವಾದ್ದರಿಂದ, ಇವರಿಬ್ಬರನ್ನೂ 'ಜಿ' ಗುಂಪಿಗೆ ದಾಖಲು ಮಾಡಿದರು!

ಸಿಂಗರಿಸಿದ ಪುರಭವನ, ಕಿಕ್ಕಿರಿದ ಜನಸಂದಣಿ, ಅತ್ತೆಯರಿಗೆಂದೇ ಕಾದಿರಸಲಾಗಿದ್ದ ಕುರ್ಚಿ ಸಾಲುಗಳಲ್ಲಿ ಸಿನಿಮಾ ನಟಿಯರನ್ನು ಮೀರಿಸಿದಂತೆ ಅಲಂಕರಿಸಿಕೊಂಡ ಮಹಿಳಾಮಣಿಗಳು!

"ಏನ್ರೀ ನಾಗಮ್ಮ, ಈ ಅತಿರೇಕ? ನಮ್ಮ-ನಿಮ್ಮ ರೀತಿಲಿರೋ ಅತ್ತೆ ಒಬ್ಬಳೂ ಕಾಣೆನ್ರೀ ಇಲ್ಲಿ? ಒಬ್ಬಳ ತಲೆ ನೆರೆತಿಲ್ಲ. ಒಬ್ಬಳ ಮುಖದಲ್ಲಿ ಸುಕ್ಕಿಲ್ಲ, ಒಬ್ಬಳೂ ನಲವತ್ತನ್ನು ದಾಟೇ ಇಲ್ಲ?"

"ಅಯ್ಯೋ ಬಿಡಿ, ಅದೆಲ್ಲ ಅವರು ಮಾಡ್ಕೊಂಡಿರೋ ಅಲಂಕಾರದ ಜಾಣತನ: ಎಲ್ಲಾ ಬಣ್ಣ-ಸುಣ್ಣ, ಕಾರಣೆ-ಸಾರಣೆ! ದೃಷ್ಟಿಸಿ ನೋಡಿದರೆ, ಹೊರಕ್ಕೆ ಬರುತ್ತೆ ಹುಳುಕೆಲ್ಲ!"

ದೇಶದ ನಾನಾ ಪ್ರಾಂತ್ಯದಿಂದ ಬಂದಿರುವ ಪ್ರತಿನಿಧಿಗಳ ಅನುಕೂಲಕ್ಕಾಗಿ ಒಬ್ಬೊಬ್ಬರ ಮುಂದೆಯೂ ಮಲ್ಟಿ ಮೈಕ್ರೋಫೋನು ಏರ್ಪಾಟಿತ್ತು. ಅವರವರಿಗೆ ಬೇಕಾದ ಭಾಷೆಯ ಗುಂಡಿ ಒತ್ತಿದರೆ, ನಡೆಯುತ್ತಿರುವ ಮಾತುಕತೆ, ಅದೇ ಭಾಷೆಯಲ್ಲಿ ಕೇಳಬಹುದಿತ್ತು.

ಗಂಗಮ್ಮನ ಮಗ್ಗುಲಾಕೆ ಮಹಾರಾಷ್ಟ್ರದವಳು, ಉದ್ದಕ್ಕೂ ಕಣ್ಣುಮುಚ್ಚಿ ತೂಕಡಿಸುತ್ತಿದ್ದಳು. "ಊರಿಂದೂರಿಗೆ ಬಂದು ಹೀಗೆ" ಎಂದು ನಕ್ಕರು ಗೆಳತಿಯರಿಬ್ಬರೂ.. ಅಷ್ಟರಲ್ಲಿ ಮರಾಠಿ ಮಹಿಳೆಯ ಕೂದಲಿನ ಮೇಲೆ ಜರಿಯಂತಹ ಸಣ್ಣ ಹುಳ ಕಂಡ ನಾಗಮ್ಮ ಓಡಿಸಹೋದಾಗ ಆ ತಂತಿ EAR-DRUM ಸಹಿತ ಆಚೆಗೆ ಬಂದಾಗ, ಕೆರಳಿದ ಸಿಂಹಿಣಿಯಂತೆ ಮೇಲೇರಿ ಬಂದ ಆಕೆಯಿಂದ ಇವರನ್ನು ತಪ್ಪಿಸಲು ನಾಲ್ಕಾರು ಸ್ವಯಂಸೇವಕಿಯರು ನೆರವಿಗೆ ಬರಬೇಕಾಯಿತು!

ಸ್ವಾಗತ ಸಮಿತಿಯ ಪರವಾಗಿ ಸಮಿತಿಯ ಅಧ್ಯಕ್ಷಿಣಿ ಮಾತನಾಡಿದ ನಂತರ ಪರಿಷತ್ತಿನ ಅಧ್ಯಕ್ಷಿಣಿಯ ಭಾಷಣ, ಆಕೆ ವೇದಿಕೆಗೆ ಬಂದಾಗ, ಎಲೆ ಅಡಿಕೆ ಪೆಟ್ಟಿಗೆಯಂತಹ ಪೆಟ್ಟಿಗೆ ಹಿಡಿದ ಹೆಣ್ಣೊಬ್ಬಳು ಅವರ ಬೆನ್ನ ಹಿಂದೆ ಸರಿಯಾಗಿ ಕೂತಿದ್ದಳು. ಆರೂವರೆ ಪುಟದ ಆ ಭಾಷಣವನ್ನು ಆಕೆ ಓದಿ ಮುಗಿಸುವುದರಲ್ಲಿ ಆ ಪೆಟ್ಟಿಗೆಯಿಂದ ಆರು ಬಾರಿ ಮಾತ್ರ ಗುಳಿಗೆ ತೆಗೆದು ಅಧ್ಯಕ್ಷಿಣಿಯ ಬಾಯಿಗೆ ರವಾನಿಸಿದ್ದಳು: (ಪೂರ್ಣಿಮಾ ಬೆನ್ ಪಾನೀವಾಲರ ಪಿ.ಎ. ಅಂತೆ ಆಕೆ) ಸಭೆ ಮುಗಿಯುವವರೆಗೂ ಆಕಳಿಸಿದರೆ ಪಿಲ್ಲು, ತೇಗಿದರೆ ಟ್ಯಾಬ್ಲೆಟ್ಟು, ಕೆಮ್ಮಿದರೆ ಕ್ಯಾಪ್ಸುಲ್ಲು-ನೈವೇದ್ಯ ಮಾಡುತ್ತಲೇ ಇದ್ದಳು ಆ ಪಿ.ಎ!

"ಅಧ್ಯಕ್ಷಿಣೀಯ ಭಾಷಣದ ನಂತರ, ಪ್ರತಿನಿಧಿಗಳು ತಮ್ಮ ಅಭಿಪ್ರಾಯಗಳನ್ನು ವೇದಿಕೆಯ ಮೇಲೆ ಬಂದು ವ್ಯಕ್ತಪಡಿಸಬಹುದೆಂದು ಕಾರ್ಯದರ್ಶಿನಿಯಿಂದ ಸೂಚನೆ ಬಂದಾಗ, ಮೊದಲ ಸರದಿ ತೆಗೆದುಕೊಂಡಾಕೆ, ನಾಗಮ್ಮ, (ನನಗೆ ಮಾತು ಗೀತು ಆಡೋಕ್ಕೆ ಧೈರ್ಯ ಇಲ್ಲ, ನೀವೇ ನನ್ನ ಪರ, ಹೇಳಿ"-ಎಂದಿದ್ದರು ಗಂಗಮ್ಮ).

"ಅತ್ತೆಯರಿಗೆ ಹಿಂದಿನಂತೆ ಸೊಸೆಯನ್ನು ಆಳಿಸುವ ಅಧಿಕಾರ ಕೊಡಬೇಕು: ಅತ್ತೆಯ ಮಡಿಹುಡಿಗೆ ಸೊಸೆ ಆತಂಕವಾಗಬಾರದು: ಅತ್ತೆ ಪುರಾಣ ಹರಿಕಥೆಗಳಿಗೆ ಹೋಗಬೇಕಾದಾಗ ಸೊಸೆ

ಸಿನಿಮಾ ಪ್ರೋಗ್ರಾಂ ಕ್ಯಾನ್ಸಲ್ ಮಾಡಿ ಮನೆಯಲ್ಲಿರಬೇಕು; ಅತ್ತೆಯ ಫಲಾರ, ಊಟ ತಿಂಡಿಗಳನ್ನು ಪರೀಕ್ಷಿಸಲು ಸೊಸೆ ತನ್ನ ತಮ್ಮನನ್ನು ಪತ್ತೇದಾರಿ ಕೆಲಸಕ್ಕೆ ನಿಯಮಿಸಿ ಆಕೆಯ ಬೆನ್ನ ಹಿಂದೆ ಕಳಿಸಬಾರದು..."

ನಾಗಮ್ಮ ಅರಿಕೆ ಪಟ್ಟಿ ಇನ್ನೂ ಮುಂದುವರಿಯುತ್ತಿತ್ತೇನೋ, ಆದರೆ ಅಷ್ಟರಲ್ಲಿ, ಸಭಾಂಗಣದಲ್ಲಿ ಕಿಸಿಕಿಸಿ ಪಿಸಿಪಿಸಿ ಎಂದು ಪ್ರಾರಂಭವಾಗಿದ್ದ ನಗು, ಅಲೆಅಲೆಯಾಗಿ ಹೊರಹೊಮ್ಮಿತು, ಬಿದ್ದುಬಿದ್ದು ನಕ್ಕರು, ಪಕ್ಕೆ ಹಿಡಿದು ನಕ್ಕರು, 'ಹತ್ತೊಂಬತ್ತನೇ ಶತಮಾನದ ಅವಶೇಷ' ಎಂದು ಹೊಟ್ಟೆ ತುಂಬ ನಕ್ಕರು "ಆರ್ಡರ್! ಆರ್ಡರ್!" ನಾಲ್ಕು ಸಾರಿ, ಬೆಲ್ ಒತ್ತಿದ್ದ ಆಯಾಸವನ್ನು ಅಧ್ಯಕ್ಷಿಣಿ ಎರಡು ಗುಳಿಗೆಯ ಸಹಾಯದಿಂದ ಸುಧಾರಿಸಿಕೊಳ್ಳಬೇಕಾಯ್ತು!

ನಂತರ ನೃತ್ಯದ ನಡಿಗೆಯಲ್ಲೇ ವೇದಿಕೆಯ ಏರಿದ ಮದರಾಸಿನ ಮರಕತಮ್ಮಾಳ್, ಇಂದಿನ ಅತ್ತೆಯರ ವತಿಯಿಂದ ಈ ಅಭಿಪ್ರಾಯ ಮಾಲೆಯ ಸೂಚನೆ ಕೊಟ್ಟಳು.

"ಗಂಡುಮಕ್ಕಳು ಆದಷ್ಟು ತಡೆದು ಮದುವೆಯಾಗಬೇಕು, ಮದುವೆಯಾದ ಐದು ವರ್ಷವಾದರೂ ಮಕ್ಕಳನ್ನು ಪಡೆಯಬಾರದು. ಈ ಮೂಲಕ ನಮಗೆ "ಅಜ್ಜಿ ಪಟ್ಟ" ಆದಷ್ಟು ನಿಧಾನವಾಗಿ ಸಿಗಲು ಅನುಕೂಲವಾಗುವುದು. (ವಿ.ಸೂ.: ಮೊಮ್ಮಕ್ಕಳು ನಮ್ಮನ್ನು ಸಂಬೋಧಿಸಕೂಡದು.)

ಮದುವೆಯಾದ ಮಗ-ಸೊಸೆ ತಮ್ಮ ಪಾಡಿಗೆ ತಾವು ಬೇರೆ ಇದ್ದರೂ ಸರಿಯೇ, ಒಂದು ವೇಳೆ ಜತೆಯಲ್ಲಿದ್ದರೆ ನಮ್ಮ ಹಕ್ಕು ಬಾಧ್ಯತೆಗಳಿಗೆ ಅಡ್ಡಿ ಬರಬಾರದು. ಅತ್ತೆಯ ಕೊಠಡಿಗೆ ಸೊಸೆ ಪ್ರವೇಶಿಸುವುದಾಗಲೀ, ಅವರು ಯೌವನವನ್ನು ಕಾಪಾಡಿಕೊಂಡು ಬರುವ ಸಲುವಾಗಿ ಮಾಡಿಕೊಳ್ಳುವ ಪ್ರಯೋಗ, ಬಳಸುವ ಸಲಕರಣೆಗಳ ಪರಿಶೀಲನೆ ಮಾಡುವುದಾಗಲೀ ಕೂಡದು.

ಹೊಸ ಚಿತ್ರಗಳನ್ನು ಅತ್ತೆ ನೋಡಿದ ನಂತರ ಸೊಸೆ ನೋಡಬೇಕು; ಏಕೆಂದರೆ ಪ್ರೇಮ-ಪ್ರಣಯ ಅವರಿಗೆ ನಿತ್ಯ ಜೀವನದ ಅನುಭವ; ಆದರೆ ಅತ್ತೆಗದು ಗತವೈಭವ!

ಯಾರ ಗಂಡು ಮಗನಾದರೂ ವಿದೇಶಕ್ಕೆ ಹೋಗಿಬಂದರೆ ಅಲ್ಲಿಂದ ತಂದ ನೈಲಾನ್ ಕ್ರೇಪ್, ನೆಟ್‌ಜಾರ್ಜೆಟ್, ಷೀಫಾನ್-ಇಂತಹ ಸೀರೆಗಳ, ಸುಗಂಧಗಳ ಮೊದಲ ಆಯ್ಕೆ ಅತ್ತೆಯದು. ನಂತರ ಸೊಸೆಯದು. ಎಷ್ಟೇ ಆಗಲಿ, ಅತ್ತೆಗೆ ಕಾಲಾವಧಿ ಕಡಿಮೆ ತಾನೇ?

ಇನ್ನೊಂದು ಮುಖ್ಯವಾದ ಅಂಶವೆಂದರೆ ತಾವು ಮನರಂಜನೆಗೆಂದು ಹೊರಗೆ ಹೋದಾಗ 'ಅಜ್ಜಿ ಹತ್ತಿರ ಇರು ಮರಿ; ನಿನ್ನ ನೋಡಿಕೊಳ್ಳುತ್ತಾರೆ' ಎಂದು ಮಕ್ಕಳನ್ನು ಪುಸಲಾಯಿಸಿ ಎಂದೂ ಬಿಟ್ಟುಹೋಗಕೂಡದು!'

ಸೂಚನೆಗಳಿಗೆ ಬೊಂಬಾಯಿನ ಬಕುಳಾಯಿ ನಿಯಮದ ಪ್ರಕಾರ ಅನುಮೋದನೆ ನೀಡಿದ ನಂತರ ಸಭಿಕರಿಂದ ಕಿವಿಗಡಚುವ ಚಪ್ಪಾಳೆಯ ಸುರಿಮಳೆಯಾಯ್ತು!

ಅಷ್ಟರಲ್ಲಿ ಒಂದು ಮೂಲೆಯಲ್ಲಿ ಮೌನವಾಗಿ ಕೂತಿದ್ದ ಕೆಲವು ಹೆಂಗಸರು, ಸ್ಟ್ರೈಕ್ ಮಾಡುವ ಶಾಲಾ ವಿದ್ಯಾರ್ಥಿಗಳಂತೆ, ಸಾಮೂಹಿಕವಾಗಿ ಎದ್ದು ನಿಂತರು. ಅವರ ಮುಖ್ಯಸ್ಥೆ ದೊಡ್ಡ ದನಿಯಲ್ಲಿ ಕೂಗಿದಳು.

"ನೀವು ಕೇವಲ ಗಂಡಿನ ತಾಯಿಯ ದೃಷ್ಟಿಯಿಂದ ಈ ಠರಾವುಗಳನ್ನು ಮಂಡಿಸಿ ಪಾಸುಮಾಡಿದ್ದೀರಿ; ನಾವೂ ಅತ್ತೆಯರೇ–ಅಳಿಯಂದಿರ ಅತ್ತೆಯರು. ನಮ್ಮ ಹೆಣ್ಣುಮಕ್ಕಳಿಗೆ ಈ ರೀತಿಯ ಕಟ್ಟುಪಾಡುಗಳನ್ನು ವಿಧಿಸಿದರೆ ನಾವು ಸರ್ವಥಾ ಒಪ್ಪುವುದಿಲ್ಲ!"

'ಡೌನ್ ವಿತ್ ಅತ್ತೇಸ್! ಡೌನ್ ವಿತ್ ಗಂಡಿನ ತಾಯೀಸ್!" – ಆಕೆಯ ಹಿಂಬಾಲಿಕೆಯರು ಗಂಟಲು ಹರಿಯುವಂತೆ ಕಿರುಚಿದರು. ಸಭೆಯ ಮಧ್ಯೆ ಕೆಲವರು ನುಗ್ಗಿದರು. ವೇದಿಕೆಯ ಮೇಲೆ ಕೆಲವರು ಏರಿದರು!

ಹಲವು ಅತ್ತೆಯರಿಗೆ ಅಲ್ಲೇ ಎದೆನೋವು ಬಂತು. ವಾಯುನೋವಿನ ಕೈ ಕಾಲು ಕೀಲಿನ ಹೆಂಗಸರು ಬೇಗ ನಡೆದುಕೊಂಡು ಹೊರಬರಲಾರದೇ ಪ್ರಾಣ ಭಯದಿಂದ ಒದ್ದಾಡಿದರು. ಪೂರ್ಣಿಮಾಬೆನ್ ಪಾನೀವಾಲರು ತಣ್ಣಗೆ ಕುಳಿತಲ್ಲೇ ಮೂರ್ಛೆಹೋದರು!

ಎಲ್ಲೆಡೆ ಗದ್ದಲ, ಗಾಭರಿ, ನೂಕುನುಗ್ಗಲು, ಇಂಗ್ಲಿಷಿನಲ್ಲಿ ಹೇಳುವಂತೆ 'Pandemonium' ಮಹಾಪ್ರಳಯದಲ್ಲಿ, ಆನೆಗಾತ್ರದ ಗರತಿಯೊಬ್ಬಳು ಕದಿರುಕಡ್ಡಿ ಗಂಗಮ್ಮನ ಮೇಲೆ ಬಿದ್ದಾಗ ಉಸಿರುಕಟ್ಟಿದ ಆಕೆ ಅಪಸ್ವರದಲ್ಲಿ ಕಿರುಚಿಕೊಂಡಳು।

* * *

'ಏಳಿ, ಗಂಗಮ್ಮ! ಎಚ್ಚರ ಮಾಡ್ಕೊಳ್ಳಿ. ಯಾಕೆ? ಕೆಟ್ಟ ಕನಸುಬಿತ್ತೇ?" ನಾಗಮ್ಮ ಮೈ ಅಲುಗಿಸಿ ಎಬ್ಬಿಸಿದಾಗ ನೆನಪಾಯ್ತು ಗಂಗಮ್ಮನಿಗೆ, ಮಾತಾಡುತ್ತಿದ್ದ ನಾವಿಬ್ಬರು, ಆಗತಾನೆ ಉಂಡಿದ್ದು, ಹೊಟ್ಟೆ ಭಾರದಿಂದ ಚಾಪೆಯ ಮೇಲೆ ಅಡ್ಡಾಗಿದ್ದವೆಂದು!

* * *

ಪುಟ್ಟತ್ತೆ ಪಟ್ಟಣಕ್ಕೆ ಬಂದಾಗ

ಅಂತೂ ಬಂದೇ ಬಿಟ್ಟಳು ಅತ್ತೆ! ಹಳ್ಳಿ ಬಿಟ್ಟು.

ಅಪ್ಪನ ಒಬ್ಬಳೇ, ಅಕ್ಕ, ನಮ್ಮ ಪುಟ್ಟತ್ತೆ. ಸ್ಕೂಲು ಕಾಲೇಜಿಗೆ ರಜೆ ಬಂದಾಗ, ಅವರ ಹಳ್ಳಿಗೆ ಹೋಗಿ–ಅಪ್ಪಟ ಹಾಲು, ಘಮ ಘಮ ತುಪ್ಪ, ರುಚಿಕಟ್ಟಾದ ತರಕಾರಿ, ಚಪ್ಪರಿಸುವಂಥ ತಿಂಡಿ ತಿಂದು, ನಾಲ್ಕು ಸುತ್ತು ಊದಿ ಬರುತ್ತಿದ್ದೆವು. ನಾವು–ಹುಡುಗರು! ಅತ್ತೆ ಮಾತ್ರ ನನಗೆ ನೆನಪು ಬಂದಾಗಿನಿಂದ ನಮ್ಮೂರಿಗೆ ಬಂದಿರಲಿಲ್ಲ.

"ಅಕ್ಕನಿಗೆ ತೌರಿನ ಹಂಬಲವೇ ಇಲ್ಲಾಂತ ತೋರುತ್ತೆ: ಒಂದು ಸಾರಿ ಸಹ ನಮ್ಮನೇಗೆ ಬರೋಲ್ಲ" –ಎಂದು ಆಕ್ಷೇಪಿಸಿ, ಮಾವನಿಗೆ ಅಪ್ಪ ಮೇಲೆ ಮೇಲೆ ಪತ್ರ ಬರೆದಾಗ ಪುಟ್ಟತ್ತೆ ಕಡೆಗೆ ಹಳ್ಳಿಯಿಂದ ದಿಳ್ಳಿಗೆ ಬಂದಿಳಿದಿದ್ದಳು!

"ಒಳ್ಳೇ ಲಗ್ನಕಾಲ ; ನಿತ್ಯಕ್ಕೊಂದು, ಎರಡು ಮದುವೆ ಆಹ್ವಾನ ಇದ್ದೇ ಇರುತ್ತೆ; ಅತ್ತೆಗೆ ಅಚ್ಚುಕಟ್ಟಾದ ಮನರಂಜನೆ! – ನಾವು ಅಕ್ಕತಂಗಿಯರು ಮಾತನಾಡಿಕೊಂಡೆವು.

ಆ ದಿನ ಅಪ್ಪನ ಆಪ್ತ ಅಪ್ಪುರಾಯರ ಮಗಳ ಮದುವೆ, ತೌಡನ್ನು ನುಣ್ಣಗೆ ಅರೆದು ಬೆರೆಸಿ, ಅಪ್ಪಟ ಮಾಲೆಂದು ಮಾರುವ ಮೂರು ಹಿಟ್ಟಿನ ಮಿಲ್ಲುಗಳ ಒಡೆಯ–"ಮಿಲಿಯನೈರ್" ಅಪ್ಪೂರಾಯರು..... ಅಂದಮೇಲೆ ಸಾಲು ಸಾಲು ಮೇಜುಗಳು, ಮೇಲೆ ಹಾಲ ಬಿಳುಪಿನ ವಸ್ತ್ರಗಳು; ಹೂದಾನಿಗಳು, ಸುತ್ತ ಬಳಸಿದ ಕುರ್ಚಿಗಳಲ್ಲಿ ತಿಂಡಿ ತಿನ್ನುತ್ತ ಕೂತಿರುವ ಮಹಿಳೆಯರು, ಮಹನೀಯರು, ಮಕ್ಕಳು, ಪಿಂಗಾಣಿ ತಟ್ಟೆ ಬಟ್ಟಲುಗಳನ್ನು ಹಿಡಿದು ಓಡಾಡುತ್ತಿದ್ದ ಸಮವಸ್ತ್ರಧಾರಿ 'ಸರ್ವರು'ಗಳ ತಂಡ!

ಅತ್ತೆ ಗಕ್ಕನೆ ನಿಂತಳು.

"ಇದ್ಯಾವುದೋ ಓಟ್ಲು ಕಣೇ ಕಮಲಾ!"

–ದೊಡ್ಡ ದನಿಯಲ್ಲಿ ಗುಡುಗಿದಾಗ, ಇಡೀ 'ಶಾಮಿಯಾನವೇ ನಕ್ಕಿತು ನಾಚಿಕೆಯಿಂದ ಕರಗಿಹೋದವು ನನ್ನ, ಲಲ್ಲಿಯ ನಾಲ್ಕು ವರಸೆ ಬಣ್ಣಗಳು!

ನಾವುಗಳು ತಿಂಡಿ ತಟ್ಟೆ ಬರಿದು ಮಾಡಿ, ಕಾಫಿ ಕುಡಿದು, ಬೀಡ ಜಗಿಯುವವರೆಗೆ, ಅತ್ತೆ–ಮಹಾ ಮೈಲಿಗೆ ಆದಂತೆ–ಕುರ್ಚಿಯಲ್ಲಿ ಮುದುಡಿ ಕೂತಿದ್ದಳು. (ತಿಂಡಿ ತಿನ್ನೆಂದು ಹೇಳುವ ಸಾಹಸವನ್ನು ನಾವು ಯಾರೂ ಮಾಡಲಿಲ್ಲ!)

ಒಳಗಣ "ಹಾಲ್ ನಲ್ಲಿ ರಿಸೆಪ್ಷನ್ ಸುಂದರ ಬಾಲಕಿಯರು ಬಾಗಿಲಲ್ಲಿ ಕುಂಕುಮ, ಗಂಧ, ಹೂವು ಹಿಡಿದು ಅರಿಶಿನಕ್ಕೆಂದು ಬಣ್ಣದ ಕಾಗದದಲ್ಲಿ ಕಲಾತ್ಮಕವಾಗಿ ತಯಾರಿಸಿದ್ದ ಹೂವನ್ನು ಸಾಲುಗಟ್ಟಿ ನಿಂತಿದ್ದರು, ಅರಿಶಿನ, ಕೊಟ್ಟಾಗ, ಅತ್ತೆ ಅದನ್ನು ತಲೆಗೇರಿಸಿದಾಗ, ಆ ಹುಡುಗಿಯರು ಕಿಸಿ ಕಿಸಿ ನಕ್ಕರು,

"ಆದು ಹೂವಲ್ಲ, ಅರಿಶಿನದ ಪೊಟ್ಣಾ ಅತ್ತೇ" ಲಲ್ಲಿ ಪಿಸುಗುಟ್ಟಿದಳು.

"ಆ? ..... ಇದ್ಯಾವ ಸೀಮೆ ಅರಿಶಿನ ಪೊಟ್ಣಾನೆ?"–ಹೂವಿನ ರೇಕುಗಳನ್ನು ಕಿತ್ತು ಕುಸುಮ ಬಿಡಿಸಿ ನೋಡಿದ ಅತ್ತೆ ಅಂದಳು.

–ನಶ್ಯದ ಚಿಟಿಕಿ ಅರಿಶಿನ ಇರಿಸಿದಾರೆ!"

ಕುಂಕುಮದ ಕರಡಿಗೆ ಮೊದಲ ಬೆರಳು ತಗುಲಿಸಿ, ಎರಡನೇ ಬೆರಳನ್ನು ಹಣೆಗೆ ಮುಟ್ಟಿಸುವುದು ಆಧುನಿಕ ಮಹಿಳೆಯ ಜಾಣತನ. ಅತ್ತೆ ಎರಡು ಬೆರಳ ತುಂಬ ಕುಂಕುಮ ಎತ್ತಿ ಹಣೆಗಿರಿಸಿದಾಗ ಚಂದ್ರನನ್ನು ಮುಟ್ಟಿ ಬಂದ ಮಾನವನನ್ನು ನೋಡುವಂತೆ ದೊಡ್ಡ ಕಣ್ಣು ಬಿಟ್ಟರು, ಹುಡುಗಿಯರು. (ತನ್ನ ಬನಾರಸ್ ಸೀರೆಯಮೇಲೆ ಕುಂಕುಮ ಉದುರಿತೆಂದು ಕರಡಿಗೆ ಓಡಿದಿದ್ದ ಹೆಣ್ಣು ಸಿಡುಗುಟ್ಟಿತು!)

ಬಳಕುವ ಬಾಲೆಯೊಬ್ಬಳು "ಆಟ್ಟರ್" ಹೂ ನೀಡಿದಾಗ, ಮೂಸಿ ನೋಡಿ, "ಛೇ! ವಾಸನೆ ಇಲ್ಲ. ಘಮಲಿಲ್ಲ" ಎಂದು ಗೊಣಗಿದ ಅತ್ತೆ, ಮತ್ತೊಬ್ಬಳು ತೆಂಗಿನಕಾಯಿ ಚೀಲ ಕೊಡಹೋದಾಗ ಪ್ರಶ್ನಾರ್ಥಕವಾಗಿ ಅಮ್ಮನೆಡೆ ನೋಡಿದಳು.

"ತಾಂಬೂಲ; ತೊಗೊಳ್ಳಿ ಅತ್ತೆಮ್ಮ"–ಅಮ್ಮ ಸುಳುವು ಸೂಚಿಸಿದಳು. "ಇದೇನು ಅವಲಕ್ಷಣವೇ ಕಮ್ಲೂ? ಗಂಡು ಹೆಣ್ಣು ನೋಡೋಕ್ಕುಂಚೇನೆ ಎಲೆ ಅಡಿಕೆ ಕೊಡೋದು–ಓೀಗೇ ಹಿಂದಕ್ಹೋಗಿ ಅಂತಲಾ?"

– ಅತ್ತೆ ನುಡಿದಾಗ, ನಮ್ಮ ಪರಿಸ್ಥಿತಿ ನಿಜಕ್ಕೂ ಶೋಚನೀಯ..... ಹಾಕಿದ್ದ ಕುರ್ಚಿಗಳಲ್ಲಿ ಕೂತಾಗ, ಕನ್ನಡ ಗೀತೆಗಳ ಕೂಗು ಕಿವಿಗೆ ಬಿದ್ದಾಗ ಅತ್ತೆ ನೆರೆದಿದ್ದ ಹೆಣ್ಣು ಮಕ್ಕಳೆಲ್ಲರ ಬಾಯನ್ನೂ ನೋಡತೊಡಗಿದಳು.

"ಯಾವ್ಹೋಳೇ ಈ ಕೆಟ್ಟ ಹಾಡುಗಳ ಹೇಳ್ತಿರೋಳು....... ಲಕ್ಷಣವಾಗಿ ಹಸೆ ಕರೆದ ಹಾಡು, ಆರತಿ ಹಾಡು ಹೇಳದೆ?"

"ಯಾರೂ ಹೇಳ್ತಿಲ್ಲ. ಆತ್ತೆ ಅವು...... ರಿಕಾರ್ಡುಗಳು–ಲಲ್ಲಿ ಸಿಟ್ಟಿನಿಂದಲೇ ಪಿಸುಗುಟ್ಟಿದಾಗ, ಅರ್ಥವಾಯಿತೋ ಇಲ್ಲವೊ ಅಂತೂ ಅತ್ತೆ ತೆಪ್ಪಗಾದಳು.

ತೆಪ್ಪಗಿದ್ದದ್ದು ಕೆಲವೇ ನಿಮಿಷ ಇದ್ದಕ್ಕಿದ್ದಂತೆಯೇ, 'ತ್ತು ತು ತುತ್ತು..." ಉದ್ಗಾರ ತೆಗೆದಳು.

"ಯಾಕೆ ಅತ್ತೆಮ್ಮ?"

"ಅಲ್ವೇ ಕಮ್ಲೂ ಇವರೆಲ್ಲ ಈ ಪಾಟೀ ಭಾರ ಯಾಕೆ ಹೊರ್ತಿದಾರೆ?"

ಆಹ್ವಾನಿತರಲ್ಲನೇಕರ ಕೈಲಿದ್ದ ದೊಡ್ಡ, ಪುಟ್ಟ ರಟ್ಟಿನ ಪ್ಯಾಕೆಟ್ಟುಗಳ ಕಡೆ ಬೊಟ್ಟು ಮಾಡಿದರು, ಪುಟ್ಟತ್ತೆ.

"ಅವು, ಪ್ರೆಸೆಂಟ್ಸ್–ಉಡುಗೊರೆ; ಗಂಡು ಹೆಣ್ಣಿಗೆ, ಒಳಗೆ ತರಹೇವಾರಿ ಸಾಮಾನಿರಲ್ವೇ."

"ಕರ್ಮ। ರೀತಿಯಾಗಿ, ಪುರೋಹಿತರ ಕೈಗೆ ಕೊಟ್ಟು ಶ್ರೀಮಾನ್......ರವರು

ವಿವಾಹಮಹೋತ್ಸವದಲ್ಲಿ ಆಶೀರ್ವಾದ ಪೂರ್ವಕವಾಗಿ ಕೊಟ್ಟ ಹತ್ತು ಲಕ್ಷ ವರಹ–ಅಂತ ಓದಿದರೆ ಎಷ್ಟು ಚೆನ್ನ? ಅದು ಬಿಟ್ಟು...'

"ಉಶ್ಶ್...ಶ್ ಶ್ ..' ಎಚ್ಚರಿಕೆ ಕೊಟ್ಟಳು ಲಲ್ಲಿ. ವಿಧವಿಧವಾದ ಹೇರ್ ಡ್ರೆಸ್ ಮಾಡಿದ ಮೂವರು ಮಹಿಳೆಯರು ಅತ್ತೆಯ ಬಳಿ ಬಂದು ನಿಂತರು; ದೃಷ್ಟಿಸಿ ನೋಡಿದರು; ತಮ್ಮತಮ್ಮಲ್ಲೇ ಏನೋ ಮಾತಾಡಿಕೊಂಡರು.

ನಮಗಾಗಲೆ ಭಯ–ಇದಿನ್ನಾವ ಪಿಡುಗೋ ಎಂದು!

ನೀವು ಏನು ಕಾಸ್ಮೆಟಿಕ್ಸ್ ಯೂಸ್ ಮಾಡ್ತೀರಿ ಗ್ರಾನಿ?'

– ಮಾಡರ್ನ್ ಮಿಸ್ಸಳ ಮುಗುಳುನಗೆ ಬೆರೆತ ಪ್ರಶ್ನೆಗೆ ಅತ್ತೆ ಕಕ್ಕಾ ಬಿಕ್ಕಿ ಆದಳು, "ಅದೇನಂತಾಳೆಯೇ ಆಕೆ–ಏನೋ ಉಗ್ರಾಣ ಅಂತ ಕರೆದ್ಲಲ್ಲ. ನನ್ನ?"

'ನಾನು 'ಸೌಂದರ್ಯ ಕಾಸ್ಮೆಟಿಕ್ಸ್'ನ ರೆಪ್ರೆಸೆಂಟೆಟಿವ್; ಈ ಓಲ್ಡ್ ಲೇಡೀ ಸ್ಕಿನ್ನು ಬಹಳ ಸ್ಮೂತಾಗಿದೆ; 'ಫಾರ್ ಎ ಬೆಟರ್ ಕಾಂಪ್ಲೆಕ್ಷನ್'–ಕಾಲಮ್ಮಿಗೆ ಬರೀತೀನಿ ಅದಕ್ಕೆ ...."

ಆಕೆ ಇಂಗ್ಲಿಷಿನಲ್ಲಿ ಅಂದದ್ದನ್ನು ಅತ್ತೆಗೆ ತರ್ಜುಮೆ ಮಾಡಿ ಹೇಳಿದಾಗ ದೊಡ್ಡದಾಗಿ ನಕ್ಕುಬಿಟ್ಟಳು ಅತ್ತೆ, ಆದರೆ ಇನ್ನಿಬ್ಬರು ಬೆಡಗಿಯರು, ಅತ್ತೆಯ ಸೀರೆ ಹಿಡಿದು ಹಿಂದೆ ಮುಂದೆ ತಿರುಗಿಸಿ,

' ಹೌ ಬ್ಯೂಟಿಫುಲ್ ? ಎಂಥಾ ವಂಡರ್ಫುಲ್ ಡಿಸೈನು?....' ಎನ್ನುತ್ತ ದೊಡ್ಡ ಹ್ಯಾಂಡ್ ಬ್ಯಾಗಿನೊಳಗಿಂದ ಪುಟ್ಟ ಪಾಕೆಟ್ ಬುಕ್ ತೆಗೆದು ಸ್ಕೆಚ್' ಮಾಡತೊಡಗಿದಾಗ (ಅವರು "ವುಮನಾ' ಪತ್ರಿಕೆಯ ಪ್ರತಿನಿಧಿಗಳಂತೆ) ಅತ್ತೆ ರೇಗಿಬಿಟ್ಟರು.

–"ಮಾನ ಮರ್ಯಾದೆ ಇಲ್ವೇನಮ್ಮ ನಿಮಗೆ, ಸೀರೆ ಹಿಡಿದು ಎಳೆದಾಡಕ್ಕೆ"

ಸೆರಗನ್ನು ಮತ್ತೂ ಮೈತುಂಬ ಎಳೆದುಕೊಳ್ಳುತ್ತ, "ನಡೀರೇ ಮನೆಗೆ ಹೋಗೋಣ" ಎಂದು ಎದ್ದು ನಿಂತುಬಿಟ್ಟರು!

ಹೆಚ್ಚು ಕಾಲ ನಿಂತಷ್ಟೂ ಅಪಾಯವೆಂದರಿತ ನಾವೂ ಎದ್ದು ಹೊರಟೆವು ಅತ್ತೆ ಅಂದರು,

"ಆದ್ರರಿ, ಹುಡುಗ ಹುಡುಗೀನ ನೋಡಲೇ ಇಲ್ವಲ್ಲೇ?"

ನವದಂಪತಿ ಸೋಫಾಸೀನರಾಗದೆ ಅತ್ಯಾಧುನಿಕ ರೀತಿಯಲ್ಲಿ ಬಾಗಿಲ ಬಳಿ ನಿಂತು ಬಂದುಹೋಗುವವರ ಶುಭಾಶಯಗಳನ್ನು ಸ್ವೀಕರಿಸಿ, ಪ್ರತಿ ನಮಸ್ಕರಿಸುತ್ತಿದ್ದರು.

ಅತ್ತೆಯನ್ನವರೆದುರು ನಿಲ್ಲಿಸಿದಾಗ,

"ನಿಮ್ಮ ಮಗಳು ಅಳಿಯ ಎಲ್ಲಿದಾರೋ ಕಾಣಿಸಿಲ್ಲ; ಅವರಿಗೆ ನನ್ನ ಆಶೀರ್ವಾದಗಳು ಕಣಪ್ಪ'

–ಎಂದಾಗ, ನಾನೂ ಲಲ್ಲಿ ಅತ್ತೆಯ ಎರಡು ರಟ್ಟೆಗಳನ್ನೂ ಹಿಡಿದು ಆಚೆ ಸಾಗಿಸಿಕೊಂಡು ಬರದೇ ಇದ್ದಿದ್ದರೆ....??

* * *

ನೆರೆ "ಹೊರೆ" !

ಸಂಸಾರ ಹೂಡುವಾಗ, ಮನೆ ಹುಡುಕುವಾಗ, ಮನೆ ಬದಲಾಯಿಸಿದ್ದ ಕೇಳುವ ಮೊದಲ ಪ್ರಶ್ನೆ,

"ಎಲ್ಲಿ ಮಾಡಿದೀರಿ ಮನೇನ? ನೆರೆಹೊರೆ ಚೆನ್ನಾಗಿದೆಯೇ?" ನೆರೆ ನೆರವಾಗುತ್ತದೆ. ಆಗಬಹುದು; ಆದರೆ 'ಹೊರೆ'ಯಾಗುವ ಸಂಭವವೇ ಹೆಚ್ಚು ಎಂದು ಕೇಳುಗರಿಗೆ ತಿಳಿಯದು !

ಈ ಹೊರೆಯಲ್ಲೂ ವೈವಿಧ್ಯತೆ ಇದೆ: ಅಂತಸ್ತು–ಅಧಿಕಾರ–ದರ್ಜೆ ವಠಾರ ವೈಯರಿ–ಪಾಟಿನ ಪಾಟು–ಆಂಟು ಮನೆಯ ಗಂಟು–ಒಂಟಿ ಗೃಹಗಳ ಗೋಜಲು–ಬಂಗಲೆಗಳ ಶ್ರೀಮಂತಿಕೆಯ ಕಿರಿಕಿರಿ ಪಿರಿಪಿರಿ,

ವಠಾರ ವೈಭವದ ಮೊದಲ ಬಲಿ, ದಿನಪತ್ರಿಕೆ, ಪೇಪರ್ ಹುಡುಗನಿಗಾಗಿ ಬಾಗಿಲಲ್ಲಿ ಪತ್ತೇದಾರಿ ನಡೆಸುತ್ತ ನಿಂತಿರುವ ನೆರೆಯಾತ; ತೆರೆದ ಬಾಗಿಲೊಳಗೆ ಮುಲಾಜಿಲ್ಲದೆ ಮುಖ ತೂರಿಸಿ 'ಎದ್ದಿರಾ ರಾಯ್ರೇ?' ಎಂದು ಎದ್ದು ಕೂತು ಕಾಫಿ ಕುಡಿಯುತ್ತಿರುವ ಮನೆಯೊಡೆಯನಿಗೆ ಮಂಗಳಾರತಿ ಎತ್ತಿ, ಮೇಜಿನ ಮೇಲಿಂದ ಪೇಪರೆತ್ತಿ ಪಠಣ ಪ್ರಾರಂಭಿಸುವ ಮೊಂಡ ಮಹಾನುಭಾವ, ದಾಕ್ಷಿಣ್ಯಕ್ಕೆ ಗೋಣಮಣ ಮಾಡಿಕೊಂಡೇ ಮನೆಯಾಕೆ ತಂದಿಟ್ಟ ಕಾಫಿಯನ್ನು ಗುಟುಕು ಗುಟುಕಾಗಿ ಗಂಟಲಿಗಿಳಿಸುವ ಭಂಡ. ನಶ್ಯೋಪಾಸಕನಾದರೆ, ಓ ಓ.... ಒಂದು ಚಿಟಿಕೆ..... ಓ ಓ... ಎಂದರೆ ಆಶ್ಚರ್ಯವಿಲ್ಲ; ಧೂಮಭಕ್ತನಾದರೆ ರಾಯರ ಪ್ಯಾಕೆಟ್ಟಿಂದಲೇ ನಿಸ್ಸಂಕೋಚವಾಗಿ ಎತ್ತಿ ಅವರ ಬೆಂಕಿ ಪೊಟ್ಟಣವನ್ನೇ ಪ್ರಯೋಗಿಸಿ 'ದಂ' ಎಳೆಯುವ ಧೂರ್ತ ತನದಲ್ಲಿ ಹಿಂಜರಿಕೆಯೂ ಇಲ್ಲ !

ಇವರ ಬಾಲಗೋಪಾಲರು, ವಂಶೋದ್ಧಾರಕರು, ಮನೆ ಬೆಳಗುವ ಬಾಲೆಯರು, ಸರ್ವಸ್ವಾಮ್ಯವಾದಿಗಳು. ವಠಾರಕ್ಕೆ ಒಂದು ಸೈಕಲ್ಲು ಒಂದು ಕ್ರಿಕೆಟ್ ಬ್ಯಾಟು ಸಾಕು: ಊರ್ಮಿಳೆಯ ಕೂದಲ ಕ್ಲಿಪ್ಪು ಶಾಮಲೆಯ ತಲೆಯಲ್ಲಿ, ಕಲ್ಪನಳ ಚಪ್ಪಲಿ ಶಾಲಿನಿಯ ಕಾಲಲ್ಲಿ, ವತ್ಸಲೆಯ ವಾಚು ದಿನಕ್ಕೊಂದು ಕೈಯಲ್ಲಿ !

ಮಹಿಳಾ ಮಣಿಗಳದು ನೆರೆಹೊರ್ಕೆಯ ಮಹಾಪೂರ, ಹಾಲು ಜೇನಿನ ಸಂಬಂಧಕ್ಕಿಂತ ಸಂಬಂಧಕ್ಕಿಂತ ಸೋಪು–ಕೊಳೆಬಟ್ಟೆ ಬಾಬತ್ತಾಗಿರುವ ಸಂಭವವೇ ಹೆಚ್ಚು. ಹಾಲು, ಹಿಟ್ಟು, ಕಾಫಿಪುಡಿ, ಸೀಗೇಪುಡಿ, ಸಾರಿನಪುಡಿ ಸೀಮೆಎಣ್ಣೆ, ಒಂದೇ ಎರಡೇ ಎರವಲು ಅಧ್ಯಾಯಕ್ಕೆ ಸಾಮಗ್ರಿ? ಕೇಳುವುದಕ್ಕೆ ಪಡೆಯುವುದಕ್ಕೆ ಕಾಲ ನಿಯಮವೇನಿಲ್ಲ, ಮಟಮಧ್ಯಾಹ್ನವಾಗಬಹುದು, ಮುಚ್ಚಂಜೆಯಾಗಬಹುದು, ಮಧ್ಯರಾತ್ರಿಯೂ ಆದೀತು. ಕೊಟ್ಟಾಗ ನೆನಪು, ಹಿಂದಿರುಗಿಸುವಾಗ ಮರೆವು, ದಾಕ್ಷಿಣ್ಯದ ಉರುಳಲ್ಲಿ 'ಒನ್–ವೇ–ಟ್ರಾಫಿಕ್'ಗೆ ಸಿಕ್ಕಿಹಾಕಿಕೊಳ್ಳುವ ಕಾಮಿನಿಯರ ಪಾಡು ಕತ್ತರಿ ಮಧ್ಯೆ ಅಡಿಕೆ ಹೋಳು !

ಮುಂದಿನ ಅಧ್ಯಾಯ. ಇಸ್ತ್ರಿಪೆಟ್ಟಿಗೆ–ಇಲೆಕ್ಟ್ರಿಕ್ ಒಲೆ–ವಂದರಿ–ಚಕ್ಕುಲಿ ವರಳು ಹಿಂಡಾಲಿಯಂ ಬಕೆಟ್ಟು–ಸುತ್ತಿಗೆ–ಸ್ಕೂಡ್ರೈವರ್....!

ಮೊನ್ನೆ ಸೋದರ ಸೊಸೆ ಸುಮತಿಯ ಮನೆಗೆ ಹೋದೆ. ಅವಳ ವಾಸ ಅವಳೀಮನೆಯಲ್ಲಿ, ಬೀರು, ಬೆಂಚು, ಪೆಟ್ಟಿಗೆ, ಬಟ್ಟೆ ಸ್ಟಾಂಡುಗಳನ್ನು ಜವಳಿ ಮನೆಗೆ ಸಾಗಿಸುತ್ತಿದ್ದರು. ವಿವರಣೆ: - "ನಮ್ಮನೇ ಸಾಮಾನು ಮುಕ್ಕಾಲು ಪಾಲು ಈ ಮನೇಲಿದೆ. ಅವರಿಗೆ ವರ್ಗ ಆಯ್ತು; ಇದೇ ಸುಲಭ ಅಂತ ಈ ಮನೇಗೆ ಬದಲಾಯಿಸ್ತಿದೇವೆ."

ಹೊರೆಯಾಗಿದ್ದ ನೆರೆಯ ಮೇಲೆ ಸೇಡು ತೀರಿಸಿಕೊಳ್ಳುವ ವೈಖರಿ ಕೇಳಿ. ಕಿಟಕಿ ಬಾಗಿಲು ಮುಚ್ಚಿ ಸೊಳ್ಳೆ ಔಷಧಿ ಸಿಂಪಡಿಸಿ, ಓರೆಮಾಡಿದ ಮಧ್ಯದ ಬಾಗಿಲಿನಿಂದ ತನ್ನ ಮನೆ ಸೊಳ್ಳೆ ಸೈನ್ಯವನ್ನು ಮಗ್ಗುಲ ಮನೆಗೆ ವರ್ಗಾಯಿಸಿದ ಮಹಾಶಯನೊಬ್ಬನಾದರೆ, ಸಾವಿರ ಜಿರಲೆ ಬೇಕೆಂದು ಪತ್ರಿಕಾ ಪ್ರಕಟಣೆ ಕೊಟ್ಟ ಸರದಾರ ಮತ್ತೊಬ್ಬ, ಕಾರಣ, "ಮನೆ ಹೇಗಿತ್ತೋ ಹಾಗೇ ಬಿಟ್ಟು ಹೋಗಬೇಕು ಅಂತ 'ಓನರ್' ಹೇಳಿದಾರೆ, ನಮ್ ಜೊತೆ ಒಂದಿಷ್ಟು ಜಿರಲೆಗಳು ಬಂದು ಬಿಡತ್ವಲ್ಲ ಅದಕ್ಕೆ....!"

'ಫ್ಲಾಟು' ವಾಸಿಗಳ ನೆರೆ ಹೊರೆ ನೀತಿ ಬೇರೆ ರೀತಿ; ಎದುರು-ಬದುರು ಮೇಲೆ-ಮೇಲೆ-ಕೆಳಗೆ-ಕೆಳಗೆ, ತಾರಸಿ ಅದುರಿದರೆ ಹೆದರಬೇಡಿ, ಇಡ್ಲಿ ಮೇಲೆ ಸಿಮೆಂಟ್ ಚಟ್ಟೆಪಡಿ ಉದುರಿದರೆ ಸಿಡುಕಬೇಡಿ, ಮೇಲಂತಸ್ತಿನ ಎಪ್ಪತ್ತೈದು ಕಿಲೋ ಕುಂತಳೆ ಕುಣಿಯುತ್ತಿದ್ದಾಳೆ; ಅರ್ಥಾತ್ ನೃತ್ಯಾಭ್ಯಾಸ ಮಾಡುತ್ತಿದ್ದಾಳೆ.... ಭೂಕಂಪ ಎಂದು ಬೆದರಿದಿರಾ? ಸಂಸಾರ ಸಹಿತ ಆಚೆ ಓಡುವುದರಲ್ಲಿದ್ದೀರಾ? ಛೇ! ಛೇ! ಪಕ್ಕದ ಫ್ಲಾಟಿನಲ್ಲಿ ಭೂತಾಕಾರದ ಬೀರುವನ್ನು ಜರುಗಿಸುತ್ತಿದ್ದಾರೆ, ಅಷ್ಟೆ.

ಅಂದ ಹಾಗೆ, ಮಾಧವರಾಯರು, 'ಯಾಕೆ ಆಗಾಗ್ಗೆ ಮೆಂಟಲಾಸ್ಪತ್ರೆಗೆ ಭೇಟಿ ಕೊಡುತ್ತಿದ್ದಾರೆ' ಎಂದು ನಿಮಗೆ ಅನುಮಾನವಾಗಿರಬಹುದು. ಆದಿದ್ದಿಷ್ಟೇ ಕೆಳಮಜಲಿನ ಹಿಂದೂಸ್ತಾನಿ ಸಂಗೀತ ಉಸ್ತಾದನಿಗೆ ಹಾರ್ಮೋನಿಯಂ 'ಸಾಥಿ' ಇರಲೇಬೇಕು. ದಿನದಲ್ಲಿ ಹದಿನಾಲ್ಕು ತಾಸು ತಿದಿ ಒತ್ತಿದ್ದೇ, ಒತ್ತಿದ್ದು ಬ್ಲಡ್ ಪ್ರೆಷರ್ ಪೇಷೆಂಟ್ ಪೇಮೆಂಟ್, ರಾಯರಿಗೆ ತಲೆಯಲ್ಲಿ ಫ್ಯಾನಿನ ತಿರುಗು, ಕಿವಿಯಲ್ಲಿ ರೈಲು, ಕೂಗು. ಮಾಸ್ತರರನ್ನು ಕೇಳಿಕೊಂಡರು, "ಹಾರ್ಮೋನಿಯಂ ಬಾರಿಸೋದನ್ನ ಕಡಿಮೆ ಮಾಡ್ತೀರಾ? ಇಲ್ಲದೇ ಇದ್ದರೆ ನನಗೆ ಹುಚ್ಚೇ ಹಿಡಿದುಬಿಡುತ್ತೆ...

ಮೂರು ದಿನದ ನಂತರ ಮತ್ತೆ ಕೈ ಮುಗಿದರು! ಕಾಲು ಹಿಡಿದರು, ಆರ್ತನಾದ ಮಾಡಿದರು, "ದಯವಿಟ್ಟು ನಿಲ್ಲಿಸಿ ಮಾಸ್ತರೇ!" ಉಸ್ತಾದರಂದದ್ದು, "ಆರೆ ರಾವ್ ಸಾಹಿಬ್! ಮೂರು ದಿನದಿಂದ ನಾನು ಹಾರೋನಿಯಂ ಮುಟ್ಟೇ ಇಲ್ಲ!"

ನಗರದ ಸೂಪರ್-ಡೂಪರ್ ಬಡಾವಣೆಗಳಲ್ಲಿ ನೆರೆಹೊರೆ ಪರಿಚಯ, ಅವಶ್ಯಕತೆ ಬಿದ್ದಾಗಲೇ, ಯಾವುದೋ ಮೇಕ್-ಅಪ್ ಮಾಲಿನ ಮಾಡಲಿನಂತಹ ಸಿಂಗಾರಿ ಬಂಗಾರಿ ಕರೆಗಂಟೆ ಒತ್ತುತ್ತಾಳೆ; ಮಾಯಾ ಅಲಫಾಳ ಪ್ರಾಮಿಸ್'ದಂತ ಧಾವನ ಜಾಹೀರಾತಿನ ಹಲ್ಲು ಸಾಲು ತೋರಿಸುತ್ತಾಳೆ.

"ನನ್ನ ಫ್ರಿಜ್ ಕೆಟ್ಟು ಹೋಗಿದೆ.... ಒಂದು ದಿನ ಎರಡು ಮೂರು ಪದಾರ್ಥನ ನಿಮ್ ಫ್ರಿಜ್ನಲ್ಲಿಡಬಹುದೇ?"

ಎರಡು ಮೂರು ಪದಾರ್ಥದಿಂದ ಪ್ರಾರಂಭವಾಗಿ ಜಾಮು–ಜ್ಯೂಸು ಚೀಸು–ಕೋಸು–ಕ್ಯಾರೆಟ್ಟು–ಕಸ್ಟರ್ಡು! ಒಂದು ದಿನ ಮೂರು ದಿನವಾಗಿ ಒಂಟೆ ಟೆಂಟಿನ ಕತೆಯಾಗಿ ಮನೆಯಾಕೆಯ ಸಾಮಾನುಗಳು ಆಚೆ ಕೂರುತ್ತವೆ!

ಈ ಬಾಬತ್ತಿನವರಿಗೆ ಒಂದು ತೊಂದರೆ: ಶಿಷ್ಟಾಚಾರದ ಕಷ್ಟಾಚಾರ 'Please', 'Sorry', 'If you don't mind' ಎನ್ನುವ ಚಿನ್ನದ ಸೂಜಿಯ (ಅಥವಾ ಇಪತ್ತಿನ ಬೆಲೆಗೆ ಬೆಳ್ಳಿ ಸೂಜಿಯ) ಕಣ್ಣು ಚುಚ್ಚು, 'With pleasure' ಎಂದುತ್ತರಿಸಬೇಕು, ಮನಸ್ಸಿನಲ್ಲಿ 'With pain' ಇದ್ದರೂ!

ಒಂದು 'ಕಾಲ್'ನ ನೆಪಹೂಡಿ ನಾಲ್ಕು, S.T.D. ಹೊಡೆಯುವ ಕೈಗಾರಿಕೋದ್ಯಮಿ ತನ್ನ V.C.R. ಮಲಗಿದೆಯೆಂದು ಎತ್ತಿಕೊಂಡು ಹೋಗಿ ನಾಲ್ಕು ದಿನದಲ್ಲಿ ಇವರದನ್ನೂ ಮಲಗಿಸಿ ಹಿಂದಿರುಗಿಸುವ ಶ್ರೀಮಂತ ಪುತ್ರ. ಅಜ್ಜಿಗೆ ಔಷಧಿ ತರುವ ಅಪೀಲು ಮಾಡಿ ಕಾರೋ ಸ್ಕೂಟರೋ ಹತ್ತಿ ಹೋಗಿ ಪ್ರೇಯಸಿಯೊಂದಿಗೆ ಪಾರ್ಕು ಹೋಟೆಲು ಥಿಯೇಟರಿನಲ್ಲಿ ಅಡ್ಡಾಡಿ ಪೆಟ್ರೋಲ್ ಟ್ಯಾಂಕ್ ಖಾಲಿ ಮಾಡಿದ ಪಡ್ಡೆ ರಾಜಕುಮಾರ.... ಇದೂ ಒಂದು ಪರಿಚ್ಛೇದ ಪಕ್ಕದ ಬಂಗಲೆಯಿಂದ ಬಂತು ಫೋನು ಕರೆ, ಮಧುರಕಂಠ ಉಲಿಯಿತು.

"ಒಂದು ವಾರ ದಿಲ್ಲಿಗೆ ಹೋಗ್ತಿದೀವಿ. ನಮ್ ಪಮ್ಮಿನ ನಿಮ್ಮ ಮನೇಲಿ ಬಿಟ್ಟಿರೋಣವೇ..... ನಿಮಗೆ ತೊಂದ್ರೆ ಆಗದೇ ಹೋದರೆ ಯಥಾಪ್ರಕಾರ Courtesy ಕಟ್ಟುಪಾಡು, 'ಆಯಿತು, ಹುಡುಗಿ ಶಶಿ ಜತೆ ಆಡ್ಕೊಂಡಿರ್ತಾಳೆ" ಎಂದು ಸಮಾಧಾನ ಮಾಡಿಕೊಂಡರು.

ಪುಟ್ಟ ಪೂಡಲನ್ನು ಕಂಕುಳಲ್ಲಿರಿಸಿಕೊಂಡೇ ಕಾರಿನಿಂದಿಳಿದಳು ಸರದಾರಿಣಿ, ನಾಯಿ ಬಿಸ್ಕತ್ತು–ಪ್ರಾಣಿ ಸಾಬೂನು–ಶ್ವಾನ ಶಾಂಪೂ–ಹಾಲು, ಬ್ರೆಡ್ಡು, 'ಬಿಸಿ' ಆಹಾರ–ಅರೆಮೀಟರುದ್ದದ ಪಟ್ಟಿಕೊಟ್ಟು, ಮುಖಕ್ಕೆ ಮುತ್ತಿನ ಮಳೆಗರೆದು, ಕಣ್ಣೊರೆಸಿಕೊಳ್ಳುತ್ತ ಕಾರೇರಿ, ಹೊರಟೇ ಹೋದಳು! ಜಿಮ್ಮಿ ಪಮ್ಮಿಗಳ ಯುದ್ಧಕಾಂಡ ಓಹ್ ! ನೆನೆಸಿಕೊಳ್ಳದಿರುವುದೇ ಕ್ಷೇಮ, (ಅಂದ ಹಾಗೆ, ಜಿಮ್ಮಿ ಈ ಬಂಗಲೆಯ ಶುನಕ),

ನೆರೆಹೊರೆ ಪುರಾಣ ಬೇಜಾರಾಯಿತೇ?..... ಉಹುಂ... ಏನೇ ಹೇಳಲಿ, ಎಷ್ಟೇ ಪೋಣಿಸಲಿ, ಬೇಕು–ನೆರೆ. 'ವೈದ್ಯನ ವ್ಯಾಧಿ' ನಾಟಕದ ಕಡೆಯಲ್ಲಿ ಕೈಲಾಸಂರವರು ಸುಬ್ಬಣ್ಣನ ಬಾಯಲ್ಲಿ ಹೇಳಿಸಿರುವುದೇನು?

"ಏನೇ ಅನ್ನಿ ರಂಗಣ್ಣರೇ, ನೆರೆ ಹೊರೆ ನೆರೆ ಹೊರೆನೇವೇ!"

* * *

ತುರುಬೇತಿಹಾಸ

"ಕಾಲು ಹಿಡಿದ್ಕೋಳೆ..ಬಿಗಿಯಾಗಿ...ಬಿಗಿಯಾಗಿ ಹಿಡಿದ್ಕೋ...!"

ಯಾರ ಕಾಲನ್ನೂ ಅಲ್ಲ, ಕೂದಲಿನ ಕಾಲನ್ನು ಮೊಮ್ಮಗಳಿಗೆ ಜಡೆ ಹೆಣೆಯುವಾಗ ಅಜ್ಜಿ ಹೇಳುತ್ತಿದ್ದ ಮಾತಿದು, ತಲೆಗೂದಲಿಗೆ ಧಾರಾಳವಾಗಿ ಎಣ್ಣೆ ತೊಡೆದು, ನುಣ್ಣಗೆ ಬಾಚಿ, ಮೂರು ಭಾಗ ಮಾಡಿ, ಹುಡುಗಿಯ ಎರಡು ಕೈಗಳಿಗೂ ಎರಡು ಭಾಗಗಳನ್ನು ಕೊಟ್ಟು, ಮೂರನೇ ಭಾಗವನ್ನು ಲಗಾಮಿನಂತೆ ತಾನು ಎಳೆದು ಹಿಡಿದುಕೊಳ್ಳುತ್ತಿದ್ದಳು. ಈ ಭಾಗಗಳೇ ಕಾಲುಗಳು, ಅನೇಕ ವೇಳೆ ಈ ಕಾಲುಗಳನ್ನು 'ಸಬ್-ಕಾಲು'ಗಳಾಗಿ ಸೀಳಿ, ತುದಿಯವರೆಗೂ ಬಿಗಿಯಾಗಿ ಹೆಣೆದು ನಾರು ಕಟ್ಟಿದಾಗ, ಚಾಟಿಯ ನೆನಪು ತರುತ್ತಿದ್ದುದುಂಟು. ಕಾಲ ಕಳೆದಂತೆ ಬಿಗಿ ಸಡಿಲಿತು; ಕೂದಲು ಕಿಪಿ ಮುಚ್ಚಿತು: ನಿಡುಜಡೆ ಮೂಡಿತು, ಟೇಪು ನಾರಿನ ಸ್ಥಾನವನ್ನಾಕ್ರಮಿಸಿತು. ಕ್ರಮೇಣ, ಅದು ಅವಳಿ ಅವತಾರ ತಳೆದು, ನಾಲ್ಕು ಹೆಣ್ಣು ಮಕ್ಕಳ ತಾಯಿ ನಾಲ್ಕು ಇಂಟು ಎರಡು-ಎಂಟು ಜಡೆ ಸುತ್ತುವಲ್ಲಿ ಸುಸ್ತಾದಳು; ಅಷ್ಟೇ ಅಲ್ಲ, ತಾಯಂದಿರ ತಲೆಯಲ್ಲೂ ದ್ವಂದ್ವ ಕೇಶಾಲಂಕಾರ ಇರ್ಕೆಲದಲ್ಲೂ ರಾರಾಜಿಸಿತು.

"ಕೋಲು ಹೋಯ್ತು ಬಾಲ ಬಂತು ಡುಂಡುಂ....!" ಕುದುರೆ ಬಾಲ ಅಲ್ಲಾಡಿತು; ಒಟ್ಟಿಗೆ ಬಾಚಿ ಮೇಲೆತ್ತಿ ಟೇಪಿನಿಂದ ಬಿಗಿದರೆ ಆಯಿತು. ನಿಜಕ್ಕೂ ಹೆಣ್ಣು ಹೆತ್ತವರು ನೆಮ್ಮದಿಯಿಂದ ನಿಟ್ಟುಸಿರಿಟ್ಟರು. ಮನೆಗೆಲಸಕ್ಕೆ ಮತ್ತೆರಡು ತಾಸು ಅವಕಾಶ ಸಿಕ್ಕಿತೆಂದು ಹಿಗ್ಗಿದರು. ಆದರೆ...ಹೆಣ್ಣು, ಕುದುರೆಯಷ್ಟೇ ಚಂಚಲವೇನೂ? 'ಬಾಲ' ಬಹುದಿನ ಜನಪ್ರಿಯತೆ ಉಳಿಸಿಕೊಳ್ಳಲಿಲ್ಲ.

ಇದೀಗ ಕೆದರುತಲೆಗಿಳಿದು ತುಂಡುಗೂದಲ ಯುಗ ಪ್ರಾರಂಭವಾಗಿದೆ.

* * *

ಇದು ಇಳಿಗೂದಲಿನ ದಶಾವತಾರವಾದರೆ, ತುರುಬಿನದು ಶತಾವತಾರದ ಸುದೀರ್ಘ ಇತಿಹಾಸ, ಅದರ ಚರಿತ್ರೆ ವೇದ – ಪುರಾಣ– ಉಪನಿಷತ್ತುಗಳಷ್ಟೇ ಪ್ರಾಚೀನ.

ಅಶೋಕವನದಲ್ಲಿದ್ದ ಸೀತೆಯನ್ನು ಹನುಮಂತ ಭೆಟ್ಟಿಯಾಗಿದ್ದರೆನ್ನುವುದಕ್ಕೆ ಏನು ಸಾಕ್ಷಿ ಇದ್ದರೂ ಹೊರಕ್ಕೆ ಹತ್ತು ಕಿಲೋಮೀಟರು ದೂರ ಹೋಗದೆ. ಎಲ್.ಟಿ.ಸಿ ಕ್ಲೇಮ್ ಮಾಡಿದ ಅಪರಾಧಿಗಳಂತೆ ಅವನೂ ಮಾಡಿದ್ದರೆ? ಅದಕ್ಕೇ ಸೀತೆ, ರಾಮನಿಗೆ ತನ್ನ ತುರುಬಿಗೆ ಸಿಕ್ಕಿಸುವ, ಚೂಡಾಮಣಿಯನ್ನು 'ಪ್ರೂಫ್' ಆಗಿ ಕಳಿಸಿಕೊಟ್ಟದ್ದು.

ಈಗಿನ ಮಂದಿಯದು, ಇಸ್ಪೀಟು ದೌರ್ಬಲ್ಯವಾದರೆ ಧರ್ಮರಾಯನದು ಪಗಡೆ; ಸೋತ, ಎಲ್ಲವನ್ನೂ ಸೋತ-ಹೆಂಡತಿಯನ್ನು ಕೂಡ, ಕುರುಸಭೆಗೆ ಕರೆದೊಯ್ಯಲು ಹೋದ ಧೀರ ದುಶ್ಶಾಸನ ಕೈ ಹಾಕಿದ್ದು ದ್ರೌಪದಿಯ ತುರುಬಿಗೆ ಆ ಅಗ್ನಿಹೋತ್ರಿ ಅಂದು ಬಿಚ್ಚಿದ ತುರುಬನ್ನು ಮತ್ತೆ ಕಟ್ಟಿದ್ದು ಹದಿನಾಲ್ಕು ವರ್ಷಗಳ ನಂತರ, ಭೀಮಸೇನ ದುರ್ಯೋಧನನ ರಕ್ತದ ಸ್ಪೆಷಲ್ ಬ್ರ್ಯಾಂಡ್ ಹೇರ್ ಆಯಿಲ್ ಹಚ್ಚಿದಾಗ,

ಜಗಳ–ಕೋಪ–ದುಃಖ ತೋರಿಸುವುದಕ್ಕೆ ತುರುಬು ಒಂದು ಬಲವಾದ ಅಸ್ತ್ರ : ಮಂತ್ರಿಯ ಅಸಮ್ಮತಿಗೆ ಗುರಿಯಾಗುವ ರಾಜೀನಾಮೆ ಪತ್ರದಂತೆ ಹೆಣ್ಣಿನ ಕೋಪತಾಪದ ಬಲಿ, ತುರುಬು, ಒಂದಿಷ್ಟು ತಮಾಷೆ ನೋಡುವ ಪುಢಾರಿಯಂತೆ ನಾರದ ಮುನಿ, ಪಾರಿಜಾತದ ಹೂವನ್ನು ಶ್ರೀಕೃಷ್ಣನಿಗೆ ತಂದುಕೊಟ್ಟ; ಡಬ್ಬಲ್ ಹೆಂಡಿರ ಗಂಡನಿಗೆ ಸಿಂಗಲ್ ಪುಷ್ಪ ತಂದುಕೊಡುವುದೇ ಕುಟಿಲ ಸನ್ಯಾಸಿ? 'ಔಟ್ ಆಫ್ ಸೈಟ್ ಔಟ್ ಆಫ್ ಮೈಂಡ್' – ಎದುರಿಗೆ ಇಲ್ಲದವಳ ನೆನಪು ಹೇಗೆ ಬರಬೇಕು, ಮಿಸ್ಟರ್ ಕೃಷ್ಣಪ್ಪನಿಗೆ? ಹೂವನ್ನು ಮಗ್ಗುಲಲ್ಲಿ ನಿಂತಿದ್ದ ರುಕ್ಮಿಣಿಯ ತುರುಬಿನ ಬಲತುದಿಗೆ ಸ್ಟೈಲಾಗಿ ಸಿಕ್ಕಿಸಿದ.

ಸುದ್ದಿ ತಿಳಿದ ಸತ್ಯಭಾಮೆ ಕೋಪಾವೇಶದಲ್ಲಿ ಮೊದಲು ಕೈ ಹಾಕಿದ್ದು ತುರುಬಿಗೆ, ಆಪ್ತ ಸಖಿ. ಅರ್ಧ ತಾಸು ಸಾಹಸಪಟ್ಟು ತಯಾರಿಸಿದ್ದ 'ಹೇರ್–ಡು' ಅರೆ ನಿಮಿಷದಲ್ಲಿ ಬಿಚ್ಚಿ ಬಿತ್ತು; ಅನಂತರ ಆಭರಣಗಳ ಕಳಚಾಟ–ಹಳೇ ಸೀರೆ ಅಳುಗಣ್ಣು–ಬರಿನೆಲ ಇತ್ಯಾದಿ ಕೋಪ ಪ್ರಸಂಗದ ಮುಂದಿನ ಪರಿಚ್ಛೇದಗಳು?

ತ್ರೇತಾಯುಗದಲ್ಲೇ ಕೈಕೇಯಿ 'ಡಿಟ್ಟೋ' ಮಾರ್ಗ ಹಿಡಿದಿದ್ದಳು. ರಾಮಪಟ್ಟಾಭಿಷೇಕದ ಸಿಹಿ ಸುದ್ದಿಯನ್ನು ಕಹಿಗುಳಿಗೆ ಮಾಡಿ ಮಂಥರೆ ಕೈಕೇಯಿಯ ಗಂಟಲೊಳಕ್ಕೆ ತುರುಕಿದಾಗ, ಜಗಳದ ವರ್ಣನೆ ಮಾಡಲು ಆಣೆ ಮುತ್ತಿನಂಥ ಪದಗಳಿವೆ–ಮಾರಾಮಾರಿ, ಹಣಾಹಣಿ, ಕೇಶಾಕೇಶಿ– ಇವುಗಳೊಂದಿಗೆ 'ತುರುಬಾತುರುಬಿ'ಯನ್ನು ಸೇರಿಸದಿರುವುದು ಕನ್ನಡ ಸಾಹಿತ್ಯದ ನ್ಯೂನತೆ, ಏಕೆಂದರೆ, ಬೀಗತ್ತಿಯರ ಕಾದಾಟ, ಓರಗಿತ್ತಿಯರ ಜಗಳ, ಅತ್ತಿಗೆ, ನಾದಿನಿಯರ ಕಲಹ, ಅತ್ತೆ ಸೊಸೆಯರ ಸಮರ–ಇವನ್ನು ಬಣ್ಣಿಸುತ್ತ ಕವಿ ಅಥವಾ ಕಾದಂಬರಿಕಾರ, ಒಬ್ಬರ ತುರುಬನ್ನು ಇನ್ನೊಬ್ಬರು ಹಿಡಿದು ತಂದರು" ಎಂದಿದ್ದಾನೆ. ಜನಪದ ಗಂಗೆ–ಗೌರಿಯರ ಜಗಳವನ್ನು, "ಮುಡಿಗಂಟ ಹಿಡಿದು ಆಡಿದರು. ಜಗಳಾವ ತರದಾಡಿದರೆ ಮುಂದಲೀ ಹಿಡಕೊಂಡು" ಎಂದು ಹಾಡಿಲ್ಲವೇ?

ಟೆರ್ರಾಕೋಟಾ, ಫ್ರೆಸ್ಕೋ ಶಿಲ್ಪ, ವರ್ಣಚಿತ್ರ, ದೇವತೆಗಳೆಂದು ಅಚ್ಚುಮಾಡಿದ ಫೋಟೋಗಳು – ಎಲ್ಲದರಲ್ಲೂ ಹೆಣ್ಣು ಬಹುತೇಕ ತುರುಬು ತಲೆಯವಳೇ. ನೆತ್ತಿ ಮೇಲೆ ತುರುಬು, ಹಿಂತುರುಬು, ಮುಂತುರುಬು, ಮಗ್ಗುಲ ತುರುಬು ತಾಲಿ ಆಳತೆಯಿಂದ ತಂಬಿಗೆ ಅಳತೆಯವರೆಗೆ ತುರುಬು ವೈವಿಧ್ಯ : ಅವುಗಳ ತುಂಬ ಆಭರಣಗಳು ಬೇರೆ, ಪಾಪ ಕೆಲವು ವಿಗ್ರಹಗಳನ್ನು ನೋಡಿದಾಗಲಂತೂ "ಬಡನಡು ಬಳಕುವ ಬಾಲೆ" ಈ ಪಾಟಿ ಭಾರವನ್ನು ಹೇಗೆ ಹೊತ್ತಳೋ ಎನಿಸುತ್ತದೆ. ಸಾಂಚಿಯ ಯಕ್ಷಿಣಿ ನೆತ್ತಿ ನಡುವೆ ಹಾವಿನ ಹೆಡೆಯಂತೆ ತುರುಬು ಕಟ್ಟಿದರೆ, ಅಕೋಲದ ಚೌರಂಧರಿಣಿ ಬೀಸುವ ಕಲ್ಲಿನ ಸೈಜಿನ ಹಿಂತುರುಬು ಹರವಿಕೊಂಡಿದ್ದಾಳೆ. ಮಧುರೆಯ ಶಿಲಾಸುಂದರಿಯದು ನಾಲ್ಕು ಸುತ್ತಿನ ಪೇಟವಾದರೆ ಐಹೊಳೆಯ ಪಾರ್ವತಿಯದು ಮಗ್ಗುಲ ಗೊಂಡೆ.

ತುರುಬು ಕಟ್ಟುವುದೂ ಒಂದು ಕಲೆ; ಸ್ವಂತ ಕೂದಲಿನಲ್ಲಿ ಕಟ್ಟುವ ಕಾಮಗಾರಿ ಸಾಹಸ. ದೋಸೆಗೆ ಚಟ್ನಿಯಂತೆ, ಪೂರಿಗೆ ಸಾಗುಪಿನಂತೆ, ತುರುಬಿಗೆ ಚೌರಿಯ ನೆರವು ಬೇಕು. ಚೌರಿಯ ಉಗಮ, ಚಮರೀಮೃಗದ ಬಾಲದ ತುದಿಗೊಂಡ, "ಪಾರ್ವತಿಯ ನೀಳಗೂದಲನ್ನು ಕಂಡ ಚಮರೀಮೃಗ ನಾಚಿತು'" ಎಂದಿದ್ದಾನೆ ಕಾಳಿದಾಸ.

ಟೇಬಲ್ ಟೆನ್ನಿಸ್ ಚಂಡಿನ ಗಾತ್ರದ ಸ್ವಂತ ಗಂಟಿಗೆ ಮಿನಿ ಫುಟ್ಬಾಲಿನ ಪ್ರಮಾಣಕ್ಕೆ ಪ್ರಮೋಷನ್ ಆಗಬೇಕಾದರೆ, ಕೃತಕ ಆಸರೆ ಬೇಡವೇ? ನಮ್ಮ ಪೂರ್ವಜರು ಪ್ರಾಣಿಯ ನೆರವು ಪಡೆದರೆ, ಇವತ್ತಿನ ಪೀಳಿಗೆ ಮಾನವನ ನೆರವೇ ಪಡೆಯುತ್ತದೆ. ಯಾರದೋ ತಲೆಗೂದಲು ಅಥವಾ ತಿರುಪತಿ ತಿಮ್ಮಪ್ಪನಿಗೆಂದು ನೂರಾರು ರೂಪಾಯಿ ಖರ್ಚುಮಾಡಿ ಸಲ್ಲಿಸಿದ ಹರಕೆಯ ಕೇಶಕ್ಕೆ ಮತ್ತೆ ಹಣ ತೆತ್ತು ಪಡೆಯುವುದು. ಇಲ್ಲವೇ ನಿಮ್ಮ ತಲೆಯಲ್ಲಿ ಉದುರಿದ ಕೂದಲನ್ನೇ ನಿರ್ಮಾಲ್ಯ ಪ್ರಸಾದದಂತೆ ಶೇಖರಿಸಿಟ್ಟುಕೊಳ್ಳುವುದು; ಅಂತೂ ಮನುಷ್ಯರ ಕೂದಲಿನ ಚೌರಿ, ಈಗ ಜನಪ್ರಿಯ.

ನಾವು ದಕ್ಷಿಣ ಭಾರತ ಪ್ರವಾಸ ಹೋದಾಗ, ಗೆಳತಿ ರಾಜಮ್ಮ ಪ್ರತಿ ರಾತ್ರಿ ತನ್ನ ದೊಡ್ಡ ತುರುಬನ್ನು–ಅರ್ಥಾತ್ ಜೋಡಿ ಚೌರಿಯನ್ನು–ತೆಗೆದು ಕಂಪಾರ್ಟ್ ಮೆಂಟ್‌ನಲ್ಲೊಂದು ಕೊಕ್ಕೆಗೆ ತಗುಲಿಹಾಕಿ ಮಲಗುತ್ತಿದ್ದಾಗ ಪಂಚತಂತ್ರದ ಕತೆ, ಕೋತಿ, "ನನ್ನ ಹೃದಯವನ್ನು ತೆಗೆದು ಮರಕ್ಕೆ ನೇತುಹಾಕಿದ್ದೇನೆ" ಎಂದು ನೆನಪಿಗೆ ಬರುತ್ತಿತ್ತು.

ಉಡುಗೆ ತೊಡುಗೆಯ ಫ್ಯಾಷನ್ ಬದಲಾವಣೆ ಆಗುವಂತೆ ತುರುಬಿನ ಫ್ಯಾಷನ್ನೂ ಬದಲಾಗುತ್ತಿರುತ್ತದೆ. ಒಂದು ದಶಕದ ಹಿಂದೆ, ಗಡಿಗೆಯ ಕೆಳಗಿರಿಸುವ ಸಿಂಬಿಯಂಥ ದೊಡ್ಡ ವಡೆ ಗಂಟು ಪ್ರವೇಶಿಸಿತು. ಸೈಜುವಾರೆ ರಿಂಗುಗಳು, ಅಂಗಡಿ ತುಂಬಿದವು, ಅದಕ್ಕೆ ಕೂದಲು ಸುತ್ತಿ ತಲೆಗಂಟಿಸಿಕೊಂಡರು ಲಲನಾಮಣಿಯರು. ಮುತ್ತೋ ಮಣಿಯೋ ಪೋಣಿಸಿ ಅಲಂಕರಿಸಿಕೊಂಡಾಗ ಬಂಡೀಗಾಲಿಯದೋ ಬಾವಿಯ ರಾಟೆಯದೋ ಪ್ರತಿರೂಪವಾಗುತ್ತಿತ್ತು. ಆದರೆ ಸುತ್ತಿದ್ದ ಕೂದಲು ಸಿಕ್ಕಾಪಟ್ಟೆ ಸಿಕ್ಕಾದಾಗ ಇದ್ದ ಹಿಡಿಗೂದಲಿಗೂ ಹಾನಿ ತಟ್ಟಿದಾಗ ಚಕ್ರಕ್ಕೆ ಚರಮಗೀತೆ ಹಾಡಬೇಕಾಯಿತು.

ನಂತರದ ಅವತರಣಿಕೆ 'ಬನ್'ನ ಯುಗ, ಕಂದಾರದ ಉಂಡೆಗಳು ತಯಾರಾದವು ಒಳಗದನ್ನು ಹಾಸಿ ಕೇಶದ ಹೊದಿಕೆ ಹೊದಿಸಿ ಮಲಗಿಸಿಬಿಟ್ಟರಾಯಿತು. ತುರುಬು ಸಿದ್ಧ. ಇದು, ಮೇಲೆ ಮೇಲೆ ಏರುತ್ತ, ನೆತ್ತಿಯ ಮೇಲೆ ನಾರದನ ಗಂಟಾಗಿ ಪ್ರತಿಷ್ಠಾಪನೆ ಆಯ್ತು. ಕೆಲವರು ಕಟ್ಟಿದ್ದು, ನೆತ್ತಿ ಮೇಲೆ ಗೋಡೆ ಬೋರಲು ಹಾಕಿದಂತಿತ್ತು.

ಈ ನಾರದ ತುರುಬು ಒಂದಿಷ್ಟು ಕಿರುಕುಳವನ್ನು ಕೊಟ್ಟಿದ್ದೂ ಉಂಟು. ಒಮ್ಮೆ ಬಸ್ನಲ್ಲಿ ಸೀಟು ಸಿಕ್ಕದೆ ಆಟೋ ಏರಿ, ಬಾಲ್ಕನಿಗೆ ಹಣ ತೆತ್ತು ಕಂಟೋನ್ಮೆಂಟಿನ ಥಿಯೇಟರಿನಲ್ಲಿ ಆರು ಅವಾರ್ಡ್ ಪಡೆದಿದ್ದ ಚಿತ್ರಕ್ಕೆ ಹೋಗಿದ್ದೆವು. ನಮ್ಮ ಮುಂದಿನ ಸೀಟುಗಳಲ್ಲಿ ಮೂವರು ಗೂಡೆ ಶಿರದ

ಮಹಿಳೆಯರು ಮಂಡಿಸಿರಬೇಕೇ? ನೆಲಕ್ಕೆ ಚುಚ್ಚುವ ಮೆಟ್ಟು, ಆಕಾಶ ಮುಟ್ಟುವ ಜುಟ್ಟು, ಬೇರೆಲ್ಲಾದರೂ ಕೂಡೋಣವೆಂದರೆ ಸೀಟು ನಂಬರಿನ ಬಂಧನ..... ನೇರವಾಗಿ ತೆರೆ ಕಾಣದೆ. ಅವರ ಕುತ್ತಿಗೆ ಸಂದಿನಲ್ಲಿ ಅವರ ತಲೆಯಾಟಕ್ಕೆ ತಕ್ಕಂತೆ ಅತ್ತ ಇತ್ತ ಬಗ್ಗಿ, ನಾವು ಗಳಿಸಿಕೊಂಡ ಉಳುಕು ನೋವಿಗೆ ಆರೈಕೆ ಮಾಡಿಕೊಳ್ಳುವುದರಲ್ಲಿ ಮತ್ತೆ ಹತ್ತಿರ ಮೂರು ನೋಟುಗಳು ಕೈ ಬಿಟ್ಟವು.

ಅದೊಂದು ಸಮಾರಂಭ: ಭಾಷಣಕಾರರ ಭರಾಟೆ ಮುಗಿದು ಮನರಂಜನಾ ಕಾರ್ಯಕ್ರಮದಲ್ಲಿ ರಸಮಯವಾದ ನಾಟಕ ನಡೆಯುತ್ತಿತ್ತು. ಪಿನ್ ಡ್ರಾಪ್ ಸೈಲೆನ್ಸ್.... ಇದ್ದಕ್ಕಿದ್ದಂತೆ ಸಭಿಕರಲ್ಲಿ ಹಾಹಾಕಾರ ಎದ್ದಿತು: ಜೇನುಗೂಡಿಗೆ ಕೈ ಹಾಕಿದಂತೆ ಚೆದುರಾಡಿದರು ಜನ. "ಅಲ್ಲಿ !..... "ಎಲ್ಲಿ?'.... "ಚೇಳೇ?".. "ಹೆಗ್ಗಣ ಇದ್ದೀತು....." "ಮಂಡರಗಪ್ಪೇನಾ?.... "ಹಾವು ಇರಬೇಕು... ಹೆದರಿಕೆಯ ಭರತನಾಟ್ಯ ಆಡಿದರು. ನಡೆದಿದ್ದಿಷ್ಟೇ– ಪ್ರೇಕ್ಷಕಿಯೊಬ್ಬಳ ಬೃಹತ್ ತುರುಬಿನ ಪಿನ್ನು ಸರಿದು 'ಬನ್ನು' ಉರುಳಿತ್ತು.

ನಮ್ಮ ಮನೆಗೆ ಅತಿಥಿ ದಂಪತಿ ಬಂದಿದ್ದರು. ಮಗನ ವರ್ಗದಲ್ಲಿ ಆತನ ಕೈವಾಡವಿದ್ದದ್ದರಿಂದ ಸಾಕಷ್ಟು ಸಮೃದ್ಧ ಉಪಹಾರವನ್ನೇ ತಯಾರಿಸಿದ್ದೆವು. ಇನ್ನಾರು ತಿಂಗಳಿಗೆ ತಾಯಿಯಾಗಲಿರುವ ಗಾಳಿ ಸುದ್ದಿಗೇ ಆಕೆಗೆ ಅಪ್ಪಟ ರೇಷ್ಮೆ ರವಿಕೆ ಖಣದ ಬಳುವಳಿಯನ್ನು ನೀಡಿದ್ದೆವು. ಸಂತೃಪ್ತರಾದ ಅವರು ಹೊರಡುವ ವೇಳೆಗೆ ವಿವಿಧ ಭಾರತಿ ಕೇಳುತ್ತಿದ್ದ ಮೊಮ್ಮಗ, "ಆಂಟೀ, ಈಗ ಹೇಳ್ತಿದಾರಲ್ಲ ಆ ಅಡ್ವರ್‌ಟೈಸ್‌ಮೆಂಟನ ಮಾತ್ರೆ ನಿಮಗೆ ಬೇಕೇಬೇಕು. ಎಷ್ಟು ತಲೆ ನೋಯ್ತಿದೆಯೋ ಪಾಪ ನಿಮಗೆ?" ಎಂದಾಗ ಆಕೆ, "ಹೋಗಿ ಬರ್ತೀನಿ ಅಂತ ಸಹ ಹೇಳದೆ, – ಹೆಜ್ಜೆಡೆಯನ್ನು ಮುಟ್ಟಿಮುಟ್ಟಿ ನೋಡಿಕೊಳ್ಳುತ್ತ ಹೊರಕ್ಕೆ ಹೋಗಿಬಿಟ್ಟರು...! ತಪ್ಪು ಮಾಡಿದ, ಮಗನ ಅಪ್ಪ, ಕೊಪ್ಪದಲ್ಲೇ ಇದ್ದಾನೆ.

ಸ್ಥಾನಪಲ್ಲಟದ ಈ ದಿನಗಳಲ್ಲಿ ಬನ್ನಿನ ಸುಭದ್ರತೆಯೂ ಅಲುಗಾಡಿತು: 'ಮಾಜಿ' ಬಿರುದನ್ನಂಟಿಸಿಕೊಂಡಾಯ್ತು. ಈಗ, ಕೂದಲಿನಲ್ಲೇ ಕೈಚಳಕ: ವೈವಿಧ್ಯಮಯ 'ಹೇರ್‌ಸ್ಟೈಲ್' ಕಲಿಯುವುದು, ಕಲಿಸುವುದು, ಅದಕ್ಕೂ ಒಂದು ಕೋರ್ಸ್!

ನಗರದ ಮದುಮಗಳಿಗೆ ಮಾಂಗಲ್ಯದಷ್ಟೇ ಮುಖ್ಯ ಕೇಶಾಲಂಕಾರ: ಮುಹೂರ್ತದ ಕಲಾಪಗಳು ಮುಗಿದ ಕೂಡಲೇ ಓಡುತ್ತಾಳೆ. 'ಬ್ಯೂಟಿ ಪಾರ್ಲರ್'ಗೆ, ಅಲ್ಲಿ ತಲೆ ತೊಳೆದು ತರಪತರಪ ಬಾಚಿ ದ್ರಾವಕ ತುಂತುರಿಸಿ ತಿರುಚಿ, ಮಗುಚಿ ಚುಚ್ಚಿ ತುರುಬು ತಯಾರಿಸುತ್ತಾಳೆ ತಜ್ಞೆ.

ನನ್ನ ಮಗಳ ಸ್ನೇಹಿತೆಯ ಮದುವೆಗೆ ಇವಳು ಹೋಗಲಾಗಲಿಲ್ಲ: ಮೂರು ದಿನದ ನಂತರ ನವದಂಪತಿ ನಮ್ಮ ಮನೆಗೆ ಬಂದರು. "ಅರೆ ಅದೆಷ್ಟು ಗರ್ವ ಹುಡುಗಿಗೆ? ನಮ್ಮ ಕಡೆ ತಿರುಗಿಯೂ ನೋಡಳು." ಸಿಟ್ಟಿನಿಂದಲೇ ಮಗಳು ಕೇಳಿದಳು: "ಏನೇ ಲತಾ? ಮದ್ವೆ ಆಯ್ತು ಅಂತ ಇಷ್ಟು ಜಂಭ ಬಂದಿಟ್ಟಿದ್ಯೆ?"

"ಜಂಭ ಅಲ್ಲ ಕಣೇ! ರಿಸೆಪ್ಷನ್'ಹೇರ್ ಡು' ಮಾಡಿಸ್ಕೊಂಡು 'ಸ್ಲಿಪ್ – ನೆಕ್' ಆಗಿಬಿಟ್ಟಿದೆ!"

ಮೃಗಾಲಯಕ್ಕೆ ಹೋಗಿದ್ದಾಗ ಪಾಪುಪಿಗೆ ಅವರಪ್ಪ ಪಕ್ಷಿಗಳ ಶಾಖೆ ತೋರಿಸಿ ಜಿಂಕೆಯ ಒಳಿ ಕರೆತಂದಿದ್ದ; ಪಾಪು ಇದ್ದಕ್ಕಿದ್ದಂತೆ ಪಕ್ಕದಲ್ಲಿ ನಿಂತಿದ್ದ ಮಹಿಳೆಯನ್ನು ದೃಷ್ಟಿಸಿದ. "ಅಪ್ಪ; ಈ ಅತ್ತೆ ತಲೇಲೂ ಪಕ್ಷಿಗಳಿವೆಯಾ?" ಗೀಜಗನ ಗೂಡಿನಂಥ ಆಕೆಯ ತುರುಬು, ಅವನ ಈ ವ್ಯಾಖ್ಯಾನಕ್ಕೆ ವಸ್ತುವಾಗಿತ್ತು.

ತಲೆಗೂದಲು ತುಂಡಾಗಿದ್ದರೆ ಹೆಣ್ಣಿಗೆ ಅದೊಂದು ಮೈನಸ್ ಎಂದು ಪರಿಗಣಿಸಲಾಗುತ್ತಿತ್ತು. ತಾಯಿಯರಂತೂ ಮದುವೆ ಆಗಬೇಕಾಗಿರುವ ಮಗಳ ಕೊರತೆ ನಿವಾರಿಸುವದರಲ್ಲಿ ಕಂಗಾಲಾಗುತ್ತಿದ್ದರು. ಆದರೆ ಅದಕ್ಕಾಗಿ ಕೊರಗಬೇಕಾಗಿಲ್ಲ. ಕೇಶವರ್ಧನಕ್ಕೆಂದು ಎಲಚಿ ಎಲೆ, ನೆಲ್ಲಿ ಚಟ್ಟು, ಗರಗದ ಸೊಪ್ಪು ಎಳ್ಳೆಣ್ಣೆ ಆರೆಯಬೇಕಾಗಿಲ್ಲ... ಕೇಶವರ್ಧಿನಿ, ನೀಲವೇಣಿ, ಕಾಮಿನಿ ತೈಲಗಳನ್ನು ತೊಡೆಯಬೇಕಾದ್ದೂ ಇಲ್ಲ. ಅಪೇಕ್ಷಿಸಿದ ಆಕಾರದ ರೆಡಿಮೇಡ್, ತುರುಬೇ ಸಿಕ್ಕುವಾಗ ಈ ಎಲ್ಲ ಪಾಡೇಕೆ? ದೀಪದ ಹೋಲ್ಡರ್‌ಗೆ ವಿಧವಿಧವಾರ ಷೇಡುಗಳನ್ನು ಸಿಕ್ಕಿಸುವ ಹಾಗೆ, ಬೇಕೆನಿಸಿದ ರೀತಿಯ ತುರುಬನ್ನು ತಲೆಗೆ ಸಿಕ್ಕಿಸಿಕೊಂಡರಾಯ್ತು, ಚಿತ್ರ ತಾರೆಯರ ಕೇಶ ಶೃಂಗಾರವಂತೂ ಇದಕ್ಕೆ ಒಳ್ಳೆಯ ಪ್ರಯೋಗಶಾಲೆ, ದೃಶ್ಯದಿಂದ ದೃಶ್ಯಕ್ಕೆ ತುರುಬು ಬದಲಾಯಿಸುತ್ತಿರುತ್ತದೆ. ಊಸರವಳ್ಳಿ ಗಳಿಗೆಗೊಮ್ಮೆ ಬಣ್ಣ ಬದಲಾಯಿಸುತ್ತದಂತೆ; ಚಿತ್ರ ನಟಿಯ ಹೇರ್ ಸ್ಟೈಲ್ ಅದಕ್ಕೂ ಮೀರಿದ್ದು, ಒಂದು ಹಾಡು ಮುಗಿಯುವುದರಲ್ಲಿ ಮೊಂಡುಗೂದಲು– ಗೊಂಡೆಗಂಟು– ಚಿತ್ರ ಸಿಂಬೆ, ಚಾಮರ ತುರುಬು–ಚಾಪೆ ಹೆಣಿಗೆ – ಹಕ್ಕಿ ಪುಕ್ಕ...ಏನೇನೋ.

ಸಾಲೋಮನ್ ದೊರೆ ಎರಡು ಬಗೆಯ ಹೂಗೊಂಚಲುಗಳನ್ನು ಶೀಬಾ ರಾಣಿಗೆ ಪರೀಕ್ಷೆಗೊಡ್ಡಿದಾಗ ಕಿಟಕಿ ತೆಗೆಸಿ, ಒಳಬಂದ ದುಂಬಿ ಕೂತ ಗೊಂಚಲು ಅಸಲಿ ಎಂದು ಆಕೆ ಕಂಡುಹಿಡಿದಳಂತೆ. ಇಂದಿನ ತುರುಬಿನಲ್ಲಿ ಅಸಲಿ ಕೂದಲೆಷ್ಟು ನಕಲೀ ಕೇಶ ಎಷ್ಟು ಎಂದು ಮಾತ್ರ ಕಂಡುಹಿಡಿಯಲಾಗುವುದಿಲ್ಲ. ಇದೀಗ ಕೂದಲಿಗೆ ಕತ್ತರಿ ಪ್ರಯೋಗವಾಗಿದೆ: 'ಲಿಬ್'ನ ಒಂದವತಾರವೇನೋ. ಪುರುಷ ದೀರ್ಘಕೇಶಿ, ಸ್ತ್ರೀ ಹ್ರಸ್ವಕೇಶಿ ಆಗುತ್ತಿದ್ದಾಳೆ.

ಆದರೂ ಮೂಗಿರುವವರೆಗೆ ನೆಗಡಿ ತಪ್ಪದಂತೆ, ಭಾರತೀಯ ನಾರಿಯ ತಲೆ ಇರುವವರೆಗೂ ತುರುಬು ಇರುತ್ತದೆ, ಇರಬೇಕು.

* * *

ನನ್ನ ರಸಘಳಿಗೆಗಳು

ರಸಘಳಿಗೆಗಳು !

ಈ ಪದ ಕಿವಿಗೆ ಬಿದ್ದ ಕೂಡಲೇ ಮೈ ಪುಳಕಿತವಾಗುತ್ತದೆ. ರೋಮಾಂಚನದ ಅನುಭವವಾಗುತ್ತದೆ.

ರಸ ತುಂಬಿದ ರಸಪುರಿ ಮಾವಿನಹಣ್ಣು, ಚಂದ್ರತೊಳೆ ಹಲಸಿನ ಹಣ್ಣು ರಸಗುಲ್ಲಿ–ರಸಮಲೈ–ರಸಾಯನ–ಅತಿರಸ ಅನಾರಸ, ಅವರವರ ಅಭಿರುಚಿಗೆ ತಕ್ಕ ಹಾಗೆ ಅವರವರಿಗೆ ಬಹುಪ್ರಿಯವಾದ ಹಣ್ಣಿನದೋ ತಿಂಡಿಯದೋ ನೆನಪಾಗುತ್ತದೆ.

ಅವೆಲ್ಲ ಸುಲಭವಾಗಿ ಸಿಕ್ಕುವ ಸರಕಲ್ಲ ಬಿಡಿ: ಪರ್ಸಿಗೆ ಭಾರಿ ತೂತು ಕೊರೆದು ಬಾಯಲ್ಲಿ ರಸ ತುಂಬಿಸಿಕೊಳ್ಳಬೇಕು. ಯಾವ ಖರ್ಚೂ ಇಲ್ಲದೆ ಬಾಳಲ್ಲಿ ರಸ ತುಂಬಿಕೊಳ್ಳಬಹುದು. ರಸಘಳಿಗೆಗಳನ್ನು ಅನುಭವಿಸುವ ಮೂಲಕ, ಅದು ಮತ್ತೊಬ್ಬರ ಸಹವಾಸದಲ್ಲಿ – ಆ ವ್ಯಕ್ತಿ ಗಣ್ಯನೋ, ಮಾನ್ಯಳೋ, ಪ್ರಸಿದ್ಧಳೋ ಪ್ರಚಂಡನೋ ಆಗಿದ್ದು, ಅವರಿಂದ ನಮಗೆ ಅಪರೂಪದ ಅನುಭವ ಆಗಿದ್ದರೆ ಅವು 'ಸೂಪರ್, ರಸಘಳಿಗೆಗಳು ಎನ್ನಿಸಿಕೊಳ್ಳುತ್ತವೆ.

ನನ್ನ ಚಿಕ್ಕಂದಿನ ಒಂದು ಘಟನೆ. ನಮ್ಮ ತಾಯಿಯವರು ಮಹಿಳಾ ಸಮಾಜದ ಅಧ್ಯಕ್ಷಿಣಿ, ಮಹಿಳಾ ಸಮ್ಮೇಳನದ ಸಮಿತಿ ಸದಸ್ಯೆ– ಹೀಗೆ ಯಾವುದೋ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ರಜೆ ದಿನಗಳಲ್ಲಿ ಅವರ ಹೋದ ಕಡೆ ನಾನು "ಬಸವನ ಹಿಂದಿನ ಬಾಲ' ಆಗುತ್ತಿದ್ದೆ!

ಅದೊಂದು ದಿನ ಸರ್ ಸಿ.ವಿ. ರಾಮನ್‌ರವರ ಧರ್ಮಪತ್ನಿ ಲೇಡಿ ಲೋಕಸುಂದರಿ ರಾಮನ್‌ವರೊಂದಿಗೆ ಕೆಲವು ಮಹಿಳೆಯರ ಭೇಟಿ ಏರ್ಪಾಟಾಗಿತ್ತು. ಟಾಟಾ ಇನ್‌ಸ್ಟಿಟ್ಯೂಟ್‌ನಲ್ಲಿ ಅವರ ಬಂಗಲೆ, 'ಲಾನ್' ಮೇಲೆ ಹಾಕಿದ್ದ ಹತ್ತೆಂಟು ಬೆತ್ತದ ಕುರ್ಚಿಗಳು, ಲೇಡಿ ರಾಮನ್ ಅಲ್ಲಿಗೆ ಬಂದರು.

ಒಂದಷ್ಟು ಮಾತುಕತೆಯ ನಂತರ, ಉಪಾಹಾರದ ತಟ್ಟೆಗಳು ಮೇಜಿನ ಮೇಲೆ ಬಂದು ಕೂತವು.

ತಮಿಳು ಶೈಲಿಯ ಕೈಸುತ್ತಿನ ಚಕ್ಕುಲಿ, ಕಾರದವಲಕ್ಕಿ, ಇನ್ನೊಂದು ತಟ್ಟೆಯಲ್ಲಿ ಬೆಲ್ಲ ಹಾಕಿ ತಯಾರಿಸಿದ ಒಂದು ತರಹ ಅಳ್ಳಳ್ಳಕನಾದ ಸಿಹಿ, ಎಲ್ಲರೂ ಸಣ್ಣ ತಟ್ಟೆಗಳಿಗೆ ಸ್ವಲ್ಪ ಸ್ವಲ್ಪ ಹಾಕಿಕೊಂಡರು. ಆಸೆ ಇದ್ದರೂ, ಸಂಕೋಚದಿಂದ ನಾನು ಅವರಂತೆಯೇ ನಾಜೂಕಾಗಿ ತೆಗೆದಿಟ್ಟುಕೊಂಡೆ.

ಸಿಹಿತಿಂಡಿ ಕೈಗೆ ಬಾಯಿಗೆ ಅಂಟಿಕೊಳ್ಳುತ್ತಿತ್ತು. ಹಲ್ಲಿಗೆ ಒಂದು ತರಹ "ನಾನೇ ಎಲ್ಲ ತಿಂಡಿ ಮಾಡಿದ್ದು'–ಲೇಡಿ ರಾಮನ್ ಅಂದಾಗ, ಎಲ್ಲರ ಮುಖದಲ್ಲಿ ಆಶ್ಚರ್ಯ, ಮೆಚ್ಚುಗೆ. "ಹೌದೇ?"–ಒಕ್ಕೊರಲಿನ ಘೋಷಣೆ.

"ಆದರೆ ಸ್ವೀಟ್ ಯಾಕೋ ಸರಿಯಾಗಿಲ್ಲ. ನೀವು ಗುಳು... ಗುಳುಪಾವಟೆ ಅಂತೀರಲ್ಲ, ಅದನ್ನು ಮಾಡಕ್ಕೆ ಹೋದೆ. ಪಾಕ ಹದ ಆಗ್ಲಿಲ್ಲ ಅಂತ ಕಾಣುತ್ತೆ..." "ನಮ್ಮಮ್ಮ ಗುಳುಪಾವಟೆ ಚೆನ್ನಾಗಿ ಮಾಡ್ತಾರೆ!" ಥಟ್ಟನೆ ಅಂದುಬಿಟ್ಟೆ.

ಹನ್ನೆರಡು ಜೋಡಿ ಕಣ್ಣುಗಳು ನನ್ನನ್ನು ಕೆಕ್ಕರಿಸಿ ನೋಡಿದುವು....

ಲೇಡೀ ಲೋಕಸುಂದರಿ ಆಳಿನ ಮೂಲಕ ಪೇಪರು, ಪೆನ್ನು ತರಿಸಿಕೊಂಡು ನಮ್ಮ ತಾಯಿಯವರಿಂದ 'ರೆಸಿಪಿ' ಬರೆಸಿಕೊಂಡಾಗ, ನನ್ನ ತಲೆಗೆರಡು ಕೋಡು ಮೂಡಿದ್ದುವೇನೋ?

ನೆನಪಿನಂಗಳದಲ್ಲಿ ಬಂದು ನಿಂತಿರುವವರು ಇನ್ನೊಬ್ಬ ಗಣ್ಯ ಮಹಿಳೆ; ರಾಷ್ಟ್ರಾಧ್ಯಕ್ಷರಾಗಿದ್ದ ಶ್ರೀ ವಿ.ವಿ. ಗಿರಿಯವರ ಅರ್ಧಾಂಗಿ ಸರಸ್ವತೀ ಗಿರಿ.

ಶ್ರೀಮತಿ ಗಿರಿ ತುಂಬ ಮಾತುಗಾರ್ತಿ, ಅಪ್ಪಟ ತೆಲುಗಿನ ತುಸು ಗಡಸು ಗಂಟಲ ಮಾತು, ಅರ್ಥವಾಗದಿದ್ದವರಿಗೆ ಗಾಬರಿಯನ್ನೇ ಹುಟ್ಟಿಸುತ್ತಿತ್ತು. ಆಕೆ ಬೆಂಗಳೂರಿನಲ್ಲಿದ್ದಾಗ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದುದರಿಂದ, ಹಾಗೂ ನನ್ನ ಗೆಳತಿ ಸಾವಿತ್ರೀದೇವಿಯವರಿಗೆ ಆತ್ಮೀಯರಾಗಿದ್ದುದರಿಂದ, ಶ್ರೀಮತಿ ಗಿರಿಯವರ ಗೌರವಾನ್ವಿತ ಪರಿಚಯ ಚೆನ್ನಾಗೇ ಆಗಿತ್ತು.

ಗಿರಿಯವರು ನಿವೃತ್ತರಾದರು. ಜಯನಗರದ ಮಾಧವನ್ ಪಾರ್ಕ್ ಬಳಿ ಇದ್ದ ಅವರ ಸ್ವಂತ ಮನೆಯಲ್ಲಿ ಮಗ, ಸೊಸೆ, ಮೊಮ್ಮಕ್ಕಳೊಂದಿಗೆ ವಾಸ. ಸಾವಿತ್ರೀದೇವಿಯವರೆಂದರು, "ಬರ್ತೀರಾ? ಮಿಸೆಸ್ ಗಿರಿಯವರನ್ನು ನೋಡಿ ಬರೋಣ."

ಸಾಧಾರಣವಾದ ಮೇಲ್ಮಧ್ಯಮ ವರ್ಗದವರು ವಾಸಿಸುವಂತಹ ಮನೆ, ರಾಷ್ಟ್ರಪತಿ ಭವನದಿಂದ ಇಲ್ಲಿಗೆ ಎಂತಹ 'ಇಳಿತ' ಎನ್ನಿಸಿತು.

ಶ್ರೀಮತಿ ಗಿರಿಯವರ ಸ್ವಾಗತ ತಣ್ಣಗಿತ್ತು, ಗಂಟು ಮುಖ ಹೊತ್ತು ರಾಂಡೀ ಎಂದರು. ನಾವೇ ಸೋಫಾದಲ್ಲಿ ಕೂತೆವು.

"ದೇಶದ ಫಸ್ಟ್ ಲೇಡಿ ಆಗಿದ್ದೋಳು ಲಾಸ್ಟ್ ಲೇಡಿ ಆಗಿರೋದನ್ನ ನೋಡಕ್ಕೆ ಬಂದಿರಾ?"

–ಗುಡುಗಿನಂತೆ ಆಕೆ ಅಂದಾಗ ನಮಗೆ ಒಂದು ರೀತಿ ನಡುಕ ಬಂದು "ಬೆಬ್ಬೆಬ್ಬೆ" ಮಾಡಿದೆವು. ಸಾವರಿಸಿಕೊಂಡ ಸಾವಿತ್ರಿದೇವಿ ಕೈಚೀಲದಿಂದ ದೊಡ್ಡ ಹೂವಿನ ಹಾರವನ್ನು ಹೊರತೆಗೆದು ಶ್ರೀಮತಿ ಗಿರಿಯವರ ಕೊರಳಿಗೆ ಹಾಕಿದರು. ನಾವು ಚಪ್ಪಾಳೆ ತಟ್ಟಿದಾಗ, ಆಕೆಯ ಹಣೆಗಂಡು ಬಿಚ್ಚಿ 'ಪ್ರಸನ್ನ ವದನಂ ಧ್ಯಾಯೇತ್ ಶಾರದೆ" ಅರ್ಥಾತ್ ನಗು ಮುಖದ ಸರಸ್ವತಿ ಗಿರಿ ಅಂದರು.

"ಹ ಹ ಹ ! ಹಾಗಾದರೆ ಎಕ್ಸ್ ಫಸ್ಟ್ ಲೇಡಿನ ಮರೆತಿಲ್ಲ? " ಎಂದು ನಗೆಯಾಡಿ ತಂಪು ಪಾನೀಯ ಕುಡಿಸಿದರು. ಮನೆ ಒಳಗೆ ತೋರಿಸಲೆಂದು ಕರೆದೊಯ್ದರು.

ಗಿರಿಯವರಿಗೆ ಕೊಟ್ಟ ಉಡುಗೊರೆಗಳು ದಂತದ ಕೆತ್ತನೆಯ ಸಂದೂಕ, ಬಿದರಿ ವರ್ಕಿನ ಸ್ಕ್ರೀನು ಗಂಧದ ಮರದ ಕ್ಯಾಸೆಟ್ಟುಗಳು, ಕಂಚಿನ ವಿಗ್ರಹಗಳು ಹಿತ್ತಾಳೆ ಕಲಾಕೃತಿಗಳು, ಪಿಂಗಾಣಿ

ವೇಸುಗಳು, ಕೈಕಾಲಿಗೆ ತೊಡರುತ್ತಿದ್ದವು. ಮೊಮ್ಮಕ್ಕಳು ಸಂದೂಕದ ಮೇಲೆ ಪತ್ರಿ ಕ್ಯಾಸೆಟ್ ಬಳ ನೆಗೆದು ಸ್ಕ್ರೀನು ಆದರಿಸಿ ಹಿತ್ತಾಳೆ ಸಾಮಾನು ಉರುಳಿಸಿ ವಿಗ್ರಹ ಮಲಗಿಸಿ ಆಟವಾಡುತ್ತಿದ್ದವು.

ಸಿಟ್ಟಿಂಗ್ ರೂಂಗೆ ಹಿಂದಿರುಗಿದೆವು. ಶ್ರೀಮತಿ ಗಿರಿಯಯವರು ನನ್ನನ್ನುದ್ದೇಶಿಸಿ,

"ಏಮಂಡೀ, ಸುನಂದಮ್ಮಾ ಹಾಸ್ಯಗಾರ್ರೂ? ನೀವು ಚೆನ್ನಾಗಿ ಹ್ಯೂಮರ್ ಕ್ರಿಯೇಟ್ ಮಾಡ್ತಿರಂತೆ, "ಮಾಜಿ ಫಸ್ಟ್ ಲೇಡಿ" ಅಂತ ಒಂದು ನಗೆಲೇಖನ ಬರೀರಿ. ಹಾಂ ! ನನ್ನ ಮೊಮ್ಮಕ್ಕಳ ತುಂಟತನ ಸೇರಿಸೋದನ್ನು ಮರೀಬೇಡಿ!" ಎಂದು ನನ್ನ ಬೆನ್ನು ತಟ್ಟಿ ತೆಲುಗೋ ಕನ್ನಡಾಂಗ್ಲ ಭಾಷೆಯಲ್ಲಿ ಹೇಳಿದಾಗ, ನಿಜಕ್ಕೂ ಅದೊಂದು ರಸಘಳಿಗೆ ಎನ್ನಿಸಿತು.

ನಮ್ಮ ತಂದೆಯವರು ಎಂ.ಸಿ.ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ತರಬೇತಿ ಪಡೆದ ಅವಧಿಯಲ್ಲಿ ಅವರ ಮೇಲಧಿಕಾರಿ ಯುವಕ ಮಾಸ್ತಿ ವೆಂಕಟೇಶ ಅಯ್ಯಂಗಾರ್. ನಮ್ಮ ತಾಯಿಯವರು ನಾನು ಮಗುವಾಗಿದ್ದಾಗ ಅವರ ಮನೆಗೆ ಹೋಗುತ್ತಿದ್ದುದುಂಟಂತೆ. ಆಗ ಬೇರಿಟ್ಟ ಆತ್ಮೀಯ ಸಂಬಂಧ, ಮುಂದೆ ಬೆಳೆಯಿತು.

ನಾನು 'ಸಾಹಿತಿ' ಪಟ್ಟಿಗೆ ಸೇರಿದ ಮೇಲೆ, ಪೂಜ್ಯ ಮಾಸ್ತಿಯವರ ಭೇಟಿ ಅನೇಕ ಕಾರ್ಯಕ್ರಮಗಳಲ್ಲಿ ಆಗುತ್ತಿತ್ತು. ಅವರು ನನ್ನನ್ನು, 'ನನ್ನ ತಮ್ಮನ ಮಗಳು' ಎಂದು ಪರಿಚಯಿಸುತ್ತಿದ್ದರು. 'ಸುನಂದಮ್ಮನಿಗೆ ಅಯ್ಯಂಗಾರ್ ದೊಡ್ಡಪ್ಪ ಹೇಗೆ? ಇದು, ಕೇಳಿದವರಿಗೆ ಸಮಸ್ಯೆ!

ಚೌಡಯ್ಯ ಕಲಾಕ್ಷೇತ್ರದಲ್ಲಿ ವೈಭವದ ಸಮಾರಂಭ, ಸಂದರ್ಭ, ಹಿರಿಯಣ್ಣ ಮಾಸ್ತಿಯವರಿಗೆ ಜ್ಞಾನಪೀಠ ಪುರಸ್ಕಾರ ಪ್ರದಾನ. ಸಭಾಭವನ ಕಿಕ್ಕಿರಿದು ತುಂಬಿತ್ತು. ಮೆರವಣಿಗೆಯಲ್ಲಿ ನಾದಸ್ವರ, ಪೂರ್ಣಕುಂಭ, ಪುರೋಹಿತರು, ಸುಮಂಗಲಿಯರ ಕಳಶ, ಕದಲಾರತಿ, ಮುಖ್ಯಮಂತ್ರಿಗಳು, ಗಣ್ಯವ್ಯಕ್ತಿಗಳು, ಜ್ಞಾನಪೀಠ ದಾತೃ ಜೈನ್ ಬಂಧುಗಳು, ಮಧ್ಯೆ ಶ್ರೀನಿವಾಸರು.

ಸಾಲಿನ ಕೊನೆಯಲ್ಲಿದ್ದ ನಾನೂ ಎಲ್ಲರಂತೆ ಎದ್ದು ಕೈಮುಗಿದೆ. ಮಾಸ್ತಿಯವರು ಮರುನಮಸ್ಕರಿಸಿ, 'ನಿಮ್ಮ ಅಭಿನಂದನಾ ಪತ್ರ ಬಂತು' ಎಂದರು. ಮತ್ತೆರಡು ಹೆಜ್ಜೆ ಇಟ್ಟು ಗಕ್ಕನೆ ನಿಂತು, 'ನಾನೂ ನಿಮಗೆ ಪತ್ರ ಬರೆದೆ, ಬಂತಾ? ಹಿಹಿಹಿ.... ನನ್ನ ಅಕ್ಷರ ಅರ್ಥ ಆಯ್ತಾ?' ಎನ್ನುತ್ತ ತುಂಟನಗೆಯೊಂದಿಗೆ ಪಿಸುಗುಟ್ಟಿ ಮುಂದೆ ನಡೆದರು.

ಅದು ಕೇವಲ ರಸಘಳಿಗೆಯಲ್ಲ. ಅಮೃತಘಳಿಗೆ!

ಇಪ್ಪತ್ತೈದು ವರ್ಷಗಳಿಗೂ ಹಿಂದಿನ ಮಾತು. ಹೆಸರಾಂತ ಹಾಸ್ಯಸಾಹಿತಿ ನಾ. ಕಸ್ತೂರಿ ಆಕಾಶವಾಣಿಯ ಒಂದು ಶಾಖೆಯ ಕಾರ್ಯಕ್ರಮದ ನಿರ್ದೇಶಕರಾಗಿ ನೇಮಕವಾದರು. ನಾಮ ಪರಿಚಯ ಮಾತ್ರ ಇದ್ದ ನಾನು, ಒಂದು ಹಸ್ತಪ್ರತಿ ಕೊಡಲು ಹೋಗಿ ಅವರ ಕೊಠಡಿ ಮುಂದೆ ನಿಂತೆ. "ಒಳಗೆ ಹೋಗೀ ಮೇಡಂ" ಅಂದ ಆರ್ಡರ್ಲೀ.

"ಯಾರೋ ಹೆಂಗಸರು ಮಾತಾಡ್ತಿದಾರೆ?" ಅನುಮಾನಿಸಿದೆ.

'ನಾನೇ ಆ ಹೆಂಗ್ಸು; ಫೋನ್‌ನಲ್ಲಿ ಮಾತಾಡ್ತಿದ್ದದ್ದು ತೆರೆ ಸರಿಸಿ ನಗುತ್ತ ನಿಂತ ವ್ಯಕ್ತಿ ಕಸ್ತೂರಿಯವರೆಂದು ತಿಳಿದಾಗ, ನಾಚಿದೆ. ಅವರ ಧ್ವನಿ ಕೊಂಚ...!

ಆದು, ಟೇಪಿನ ಏರ್ಪಾಟಿಲ್ಲದ ಕಾಲ. ಪ್ರೋಗ್ರಾಂಗಳ ನೇರ ಪ್ರಸಾರವಾಗುತ್ತಿತ್ತು. ಮಹಿಳಾ ಸಂಘವೊಂದರಲ್ಲಿ ದೀಪಾವಳೀ ವಿಶೇಷ ರಂಗ ಕಾರ್ಯಕ್ರಮ. ಶಚೀದೇವಿ ಪಾತ್ರಧಾರಿಯಾಗಿದ್ದ ನಾನು, ಇಂದ್ರನಿಂದ ದೂರ ನಿಂತು ಸಂಭಾಷಿಸುತ್ತಿದ್ದೆ. ಕಸ್ತೂರಿಯವರು ಕಿವಿಯಲ್ಲಿ ಪಿಸುಗುಟ್ಟಿದರು, "ಹತ್ರ ನಿಂತ್ಕೊಳ್ಳಿ ಆತನಿಗೆ ಮದ್ವೆ ಆಗಿದೆ. ಮೂರು ಮಕ್ಳೂ ಇದಾರೆ!"

"ಪಕ್ಕದಲ್ಲಿ ಕುದುರೆ ನಿಂತಿದೇಪ್ಪಾ, ಕಿಟಕಿ ಗಾಜು ಮೇಲಕ್ಕೆತ್ತಿ ಬಿಡಿ"

ಗಂಭೀರವಾಗಿ ನುಡಿದವರು ಶ್ರೀಮಾನ್ ಬಳ್ಳಾರಿ ಬೀಚಿ.

ಕಂಟೋನ್ಮೆಂಟ್ ಕನ್ನಡ ಸಂಘಕ್ಕೆ ಬೀಚಿಯವರನ್ನೂ ನನ್ನನ್ನೂ ಕಾರಿನಲ್ಲಿ ಕರೆದುಕೊಂಡು ಹೊರಟಿದ್ದ ಕಾರ್ಯಕರ್ತರು ಬೆಪ್ಪಾದರು. ನಾನು ತೆರೆದ ಬಾಯಿ ಮುಚ್ಚಲಾರದೆ ಕೂತೆ 'ಪಕ್ಕದಲ್ಲಿ ಏನಿದೆ ನೋಡಿದ್ರಾ? ಹ್ಹ ಹ ಹ ಹ ತೆನಾಲಿ ರಾಮಕೃಷ್ಣ ಕುದುರೆ ಸಾಕಿದ್ದು ಗೊತ್ತಿಲ್ವೇನ್ರಿ? ಈ ಸಾಬಿಗಳೂ ಕುದುರೇನ ಹಾಗೆ ಸಾಕಿರ್ತಾರೆ, ಹೊಟ್ಟೆಗೆ ಹಾಕದೆ, ಇದನ್ನು ನೋಡಿ ಬಾಯಿ ಹಾಕಿದರೆ...?" ಎನ್ನುತ್ತ ತಮ್ಮ ಕಡೆಗೆ ಕೈಮಾಡಿದರು.... ಪಕ್ಕದಲ್ಲಿದ್ದದ್ದು ಜಟಕಾ ಸ್ಟ್ಯಾಂಡು.

ಕಾರ್ಯಕ್ರಮ ವಿಶಾಲವಾದ ಸಭಾಂಗಣದಲ್ಲಿ: ಸುತ್ತ ತೆರೆದ ಸಭಿಕರು ಆಗಾಗ್ಗೆ ಕಿಟಕಿಯಾಚೆ ನೋಡುತ್ತಿದ್ದರು. ಬೀಚಿಯವರೆಂದರು,

"ಅದ್ಯಾಕ ಅಲ್ಲಿ ಪದೇ ಪದೇ ನೋಡ್ತೀರಾ? ಇಲ್ಲೇ ಇದೀನಿ, ನನ್ನ ಕಡೀ ನೋಡ್ರಲಾ? "

ಹಿಂದಿರುಗುವಾಗ ಬೀಚಿ ಹೇಳಿದರು, "ಆಚೆ ಏನಿತ್ತು ಗೊತ್ತೇ ಸುನಂದು ದೊಡ್ಡ ಸಿನಿಮಾ ಪೋಸ್ಟರು–ಯಮಲೋಕದಲ್ಲಿ ಭಯಾನಕ ಏಜೆಂಟ್ 107" ಹ್ಹ ಹ್ಹ ಹ್ಹ ಹ್ಹ!"

ಮೂವತ್ತು ವರ್ಷಗಳ ಕೆಳಗೆ ಸಾಹಿತ್ಯ ಸಮ್ಮೇಳನದ ಅತಿಥಿಗಳು ಕಲ್ಯಾಣ ಮಂಟಪದಲ್ಲಿ ಊಟ ಮಾಡಿ ಹಿಂದಿರುಗುತ್ತಿದ್ದಾಗ ಬೆನ್ನ ಕಡೆ ಧ್ವನಿ ಮೂಡಿತು. ನಿಮ್ಮ ಬಗ್ಗೆ 'ಹಿಂದೂ' ಪತ್ರಿಕೆಯಲ್ಲಿ ಲೇಖನ ಓದಿದೆ. ಕಂಡದ್ದು ನಗುಮುಖದ ಶ್ರೀ ಹಾ.ಮಾ. ನಾಯಕರನ್ನು. ಅಂದು ಮೂಡಿದ ಆತ್ಮೀಯತೆ ಅಮೂಲ್ಯವಾಗಿ ಉಳಿಯಿತು. 1993ರಲ್ಲಿ ನನ್ನ 'ಸಮಗ್ರ ಹಾಸ್ಯ ಸಾಹಿತ್ಯ' ಪ್ರಕಟವಾಗಿ 'ಕರ್ಮವೀರ' ಪತ್ರಿಕೆಯಲ್ಲಿ ಶ್ರೀ ನಾಯಕರ ಮೆಚ್ಚುಗೆಯ ವಿಮರ್ಶೆ ಓದಿದಾಗ ಪುಳಕಗೊಂಡೆ !

ಇಂತಹ 'ರಸಘಳಿಗೆ'ಗಳು ಸ್ವಾರಸ್ಯ ಹಾಗೂ ಸ್ವಾಗತ, ಅಲ್ಲವೇ?

* * *

ಧೀರೋದಾತ್ತೆಯರು

ಡ್ರೆಸ್ಸಿಂಗ್ ಟೇಬಲ್ ಮುಂದೆ ಕೂತು ಮೂವತ್ತು ನಿಮಿಷ ಹನ್ನೆರಡು ಸೆಕೆಂಡುಗಳಾಗಿದ್ದವು. ಪ್ರತಿದಿನ ರಬ್ಬರ್ ಉಂಗುರದ ಮಧ್ಯೆ ಸೆರೆಯಾಗುವ ಮೋಟು ಕೂದಲಿಗೆ ಇಂದು ಜೋಟಾ ಕೇಶದ ಜಂಟಿ ಹಾಕಿ, ಮಾಟದ ಮೋಟು ಕೂದಲಿಗೆ ಇಂದು ಗೊಂಬೆಗೆ ಚುಚ್ಚಿದ ಮೊಳೆಗಳಂತೆ ಅದರ 'ಶರೀರ'ದ ತುಂಬಾ ಕಬ್ಬಿಣದ ಪಿನ್ನು ಚುಚ್ಚಿ ಇಡೀ ಮುಡಿಗೊಂದು 'ಬಲೆ'ಯ ಅವಕುಂಠನ ಹಾಕಿಯಾಗಿತ್ತು. ನಂತರ ಮುಖದ 'ಫ್ಲೋರಿಂಗ್'–ಪಾಂಡ್ಸ್ ವ್ಯಾನಿಷಿಂಗ್ ಕ್ರೀಮಿನ ಸಿಮೆಂಟು ಹರಡಿ ಅದರ ಮೇಲೆ ನಾದಿನಿ ತಂದುಕೊಟ್ಟಿದ್ದ ಫಾರಿನ್ ಪೌಡರಿನ ರಂಗೋಲಿ ಹಾಕಿ ನಡುವೆ ಚಿತ್ತಾರಕ್ಕೆ ಕಂದು ಬಣ್ಣದ 'ಬಿಂದಿ' ಅಂಟಿಸಿಯಾಯ್ತು!

ಮುಂದಿನ ಸೀರೆ ಉಡುವ 'ಪ್ರೋಸೆಸ್'–ಈಗ ಡ್ರೆಸ್ಸಿಂಗ್ ಟೇಬಲ್ ಮುಂದೆ ನಿಂತು ನಡೆಸುವ ಪರಿಚ್ಛೇದ! ಕನ್ನಡಿಯಲ್ಲಿ ಪ್ರತಿಬಿಂಬಿಸಿದ ತನ್ನ 'ಮಾಡೆಲ್' ನೋಡಿಕೊಳ್ಳುತ್ತ ನೆರಿಗೆ ಸರಿಪಡಿಸಿ ಸೆರಗನ್ನು ಜೋಡಿಸುವ ಸಾಹಸ ಪಿಮ್ಮೋಣಕಾಲವರೆಗೆ ಇಳಿದಿರಬೇಕು. ಶಿಲ್ಪದಂತೆ ಪಟ್ಟಿಯಾಗಿರ ಬೇಕು. ತಪ್ಪಿಸಿಕೊಳ್ಳುವ ತುಂಟ ಪಾಪುಪಿನಂತೆ ಜಾರುತ್ತದಲ್ಲ ಆ ಬ್ರಾಡ್ ಬಾರ್ಡರ್?... ಮತ್ತೆ ಮತ್ತೆ ಹನ್ನೆರಡು ನಿಮಿಷ ನಲವತ್ತು ಸೆಕೆಂಡು ಕಾಲ ಕಳೆದಾಗ, ಕರೆಗಂಟೆ "ಟ್ರಿಣ್‌ಣ್!" ಎಂದಿತು.

"ಛೇ! ಈಗ್ತಾನೇ ನೆಟ್ಟಗೆ ನಿಲ್ತಿತ್ತು. ಅಷ್ಟರಲ್ಲಿ ಈ ಬೆಲ್ಲು!" ಎಂದುಕೊಳ್ಳುತ್ತ ವಿಶಾಲಾಕ್ಷಿ ಮನೆಯ ಮುಂಬಾಗಿಲು ತೆಗೆದಳು. ಜರಿ ಅಂಚಿನ ಪೂನಾ ಸೀರೆ ಉಟ್ಟು ಮುತ್ತಿನ ಒಡವೆ ಧರಿಸಿ ಸೊಂಟದ ಮೇಲೆ ಕೈಯಿಟ್ಟು ನಿಂತಿದ್ದವಳು ಶೀಲಾ ಕೇಸ್ಕರ್–ಥೇಟ್ ಬೇಲೂರು ಶಿಲಾಬಾಲಿಕೆಯಂತೆ ಕಾಣುತ್ತಿದ್ದಳು, ಹತ್ತು ಕಿಲೋ 'ರೆಡ್ಯೂಸ್' ಮಾಡಿಕೊಂಡಿದ್ದರೆ!

"ಏನು ವಿಶಾಲಾಕ್ಷೀ ರಾವ್? ಇನ್ನೂ ರೆಡಿ ಆಗಿಲ್ವಾ? ಮುಹೂರ್ತದ ವೇಳೆ ಮೀರಿ ಹೋದೀತು ನಾವು ಅಲ್ಲಿಗೆ ಮುಟ್ಟೋಹೊತ್ತಿಗೆ?"

"ಆಯ್ತುಬಿಡಿ: ಮುಹೂರ್ತಕ್ಕೆ ಇನ್ನೂ ಒಂದೂವರೆ ಗಂಟೆ ಇದೆ. ಆ ಅಲ್ಲದೆ ಮೈಥಿಲಿ ರಾಘವನ್ ಬರ್ತೀನಿ ಅಂದಿದ್ದಾರಲ್ಲ?"

"ಹೌದು ಮರೆತಿದ್ದೆ... ಅದೋ ಬರ್ತಾ ಇದಾರೆ ನೋಡಿ, ನೆಲ್ಲಿಕಾಯಿ ಸೀರೆ ಉಟ್ಕೊಂಡು.... ಭಾರೀ ಜರೀದು."

"ಹಹಹ! ನೆಲ್ಲಿಕಾಯಿ ಸೀರೇನೂ ಅಲ್ಲ, ಹುಣಸೇಕಾಯಿ ಸೀರೇನೂ ಅಲ್ಲ. ಶೀಲಾ! ಮದರಾಸಿನಲ್ಲಿ 'ನೆಲ್ಲಿ' 'ರಾಶಿ' ಇವು ಹೆಸರುವಾಸೀ ಸೀರೆ ಅಂಗಡಿಗಳು. ಅವರು ಯಾವ ಯಾವ 'ರಂಗಿಗೆ ಯಾವ ಯಾವುದೋ ರಂಗು ಬೆರೆಸಿ ಕ್ರಾಸ್ ಬೀಡ್ ತರಹ ಕಾಂಬಿನೇಷನ್‌ನ ಸೀರೆಗಳನ್ನು ನೇಯ್ತಾರೆ. ಜನ ಕೊಳ್ತಾರೆ ಈ ಮೈಥಿಲಿ ಕುಡಿಯೋದು ಬೆಂಗಳೂರು ನೀರು, ಉಡೋದು ನೆಲ್ಲಿ ಸೀರೆ

ಒಳಕ್ಕೆ ಬಂದ ಮೈಥಿಲೀ ರಾಘವನ್ ದೊಪ್ಪನೆ ಸೋಫಾದಲ್ಲಿ ಕೂತಳು ಮುಖದಲ್ಲಿ ಸಪ್ಪೆ ಕಳೆ, ಯಾವಾಗಲೂ ಒಪ್ಪವಾಗಿ ಭುಜದ ಮೇಲೆ ಕೂರುತ್ತಿದ್ದ ಸೀರೆ ಸೆರಗು ಇವತ್ತು ಮೈತುಂಬಾ ಮುಸುಕಾಗಿದೆ!

"ಹಹ! ಇದೇನು ಮೈಥಿಲೀ? ಎಂದಿನಿಂದ ಈ ಪುಟ್ಟಮ್ಮನ ಅವತಾರ?"

"ಅಲ್ಲ ವಿಶಾಲಾಕ್ಷಿ, ಶೀಲಾ। ಲಕ್ಷ್ಮೀ ಸರಸ್ವತಿ ಪಾರ್ವತೀರಿಗೆ ಈ ಗತಿ ಆಯ್ತು; ಇನ್ನು ನಮ್ಮ ಪಾಡೇನು ಹೇಳಿ?"

ಸಿನಿಮಾಕ್ಕೆ ಹೊರಟವರು ಪುರಾಣಕಟ್ಟೆಗೆ ಹೋಗಿ ಕೂತಂತಾಯ್ತು. ಮೈಥಿಲಿಯ ಮಾತಿನ ಜಾಡು, ತಾವು ಹೊರಟಿರುವುದು ಕ್ಲಬ್ಬಿನ ಉಪಾಧ್ಯಕ್ಷೆ ಕನಕಮ್ಮನ ಮಗಳ ಮದುವೆಗೆ, ಈಕೆ ಮಾಡುತ್ತಿರುವುದು ತ್ರಿಮೂರ್ತಿಗಳ ಶ್ರೀಮತಿಯರ ಧ್ಯಾನ!

"ಯ... ಯಾಕೆ? ಹುಷಾರಾಗಿದೀರಿ ತಾನೇ?"

"ಮೈ ಹುಷಾರಾಗಿದೆ. ಆದರೆ ಬುದ್ಧೀನ ಹುಷಾರಿನಲ್ಲಿಟ್ಟುಕೊಳ್ಳಬೇಕ್ರಿ ಪ್ರತಿನಿತ್ಯ ಪೇಪರಲ್ಲಿ ಓದುತ್ತಾ ಇಲ್ವೇ? ಅದಕ್ಕೆ ಹೀಗೆ ಸೀರೆ ಹೊದ್ದು ಕೊಂಡಿರೋದು ಮೈಸೂರು ರಸ್ತೇಲಿರೋ ಮಹಾಲಕ್ಷ್ಮೀ ಗುಡಿಗೆ ಹೋಗಿದ್ದ ಲಕ್ಷಮ್ಮ ಅನ್ನೋ ಆಕೆಯ ಮಾಂಗಲ್ಯ ಕಿತ್ಕೊಂಡರಂತೆ, ತುಮಕೂರು ರಸ್ತೆ ವೆಂಕಟರಮಣನ ದರ್ಶನ ಮಾಡ್ತಿದ್ದ ಸರಸ್ವತೀ ಸರಾನೇ ಹರದ್ಕೊಂಡರಲ್ಲ, ಕರೀಮಣಿ ಬಂಗಾರದಲ್ಲಿ ಸುತ್ತಿದ್ದದ್ದು? ಶಿವರಾತ್ರಿ ದಿನ, ಮೂರು ಮೂರು ತೊಲದ್ದು ಮಂಗಳಸೂತ್ರ ಪಾರ್ವತಮ್ಮ ಅನ್ನೋರ ಕೊರಳಲ್ಲಿ ಕತ್ತರಿ ಪ್ರಹಾರ. ಪುಣ್ಯ ಆಕೆ ಕೊರಳು ಉಳಿದ್ಕೊಂಡಿತು!"

ವಿಶಾಲಾಕ್ಷಿಗೆ ನಿಜಕ್ಕೂ ಸಮಸ್ಯೆಯಾಯಿತು. ಮೈಥಿಲಿಯ ಮಾತು ಸತ್ಯ. ಅದೇಕೋ ಏನೋ ಇತ್ತೀಚೆಗೆ ಕಳ್ಳರಿಗೆ ಮಂಗಳ ಸೂತ್ರದ ಆಕರ್ಷಣೆ ಹೆಚ್ಚಾಗಿದೆ. ಆದರೂ...ತಾವು ಹೋಗುತ್ತಿರುವುದು ಕನಕಮ್ಮನ ಕುವರೀ ಕಲ್ಯಾಣ ಮಂಟಪಕ್ಕೆ ಆಕೆ–ಹೆಸರಿಗೆ ತಕ್ಕಂತೆ ಒಡವೆಗಳ ಷೋಕೇಸು, ಸಾಲದ್ದಕ್ಕೆ ವರ್ಷಕ್ಕೆರಡು ಬಾರಿಯಾದರೂ ಬದಲಾವಣೆ–ಹಾರ ನೆಕ್‌ಲೇಸಾಗುತ್ತದೆ, ಬಳೆ ಕಡಗವಾಗುತ್ತದೆ. ಓಲೆ ಪದಕವಾಗುತ್ತದೆ ! ಅಂಥವರಲ್ಲಿಗೆ ಹೋಗುವಾಗ ಸೆರಗು ಮುಚ್ಚಿಕೊಳ್ಳುವುದೇ?

"ಅದ್ಸರಿ ಕಣ್ರೀ; ಮೊನ್ನೆ ತಾನೇ ಮೂರು ಸವರನ್ ಚಿನ್ನ ಸೇರಿಸಿ ಈ ರೋಪ್ ಜೈನ್ ಮಾಡಿಸ್ಕೊಂಡಿದೀನಿ...'

"ಅದೇ, ಕುತ್ತಿಗೆಗೆ ಹಗ್ಗ ಆಗೋದು!" ಮೈಥಿಲಿ ಮಾತು ಸೇರಿಸಿದಾಗ ವಿಶಾಲಾಕ್ಷಿ ಕೋಪದಿಂದ ಕೆಂಪು ಕೆಂಪಾದಳು.

"ಮಾಂಗಲ್ಯದ ಸರ ಮನೇಲಿ ಎತ್ತಿಟ್ಟು ಬಿಡೀ, ಆಗ ಧೈರ್ಯವಾಗಿ ಹೋಗಿ ಬರಬಹುದು." ಶೀಲಾ ಕೊಟ್ಟ ಸಲಹೆಗೆ ಮೈಥಿಲಿ ಉಂಟೇ ಉಂಟೇ! ಅವಲಕ್ಷಣ!" ಎನ್ನುತ್ತಾ ಕೆನ್ನೆ ಕೆನ್ನೆ ಬಡಿದುಕೊಂಡಳು.

ಕಡೆಗೆ ಮಟ ಮಧ್ಯಾಹ್ನ ಹನ್ನೊಂದು ಗಂಟೆಯಲ್ಲಿ ಯಾವ ಭಯವೂ ಇಲ್ಲವೆಂದೂ, ಏನಿದ್ದರೂ ಸಂಜೆಗತ್ತಲು ಡೇಂಜರ್ ಸಿಗ್ನಲ್ ಎಂದೂ, ಮೇಲಾಗಿ 'ಥ್ರೀ ಮಸ್ಕೆಟಿಯರ್'ನಂತೆ ತಾವು ಮೂವರು ಒಟ್ಟಿಗಿರುವಾಗ ಯಾವ ಮಾಂಗಲ್ಯ ತಸ್ಕರನಿಗೂ ಸಮೀಪಿಸುವ ಎದೆಗಾರಿಕೆ ಇರದೆಂದೂ ತೀರ್ಮಾನಿಸಿ ಬಸ್ ಸ್ಟ್ಯಾಂಡ್‌ಗೆ ನಡೆದರು. ಕೆಂಪು ಬಸ್ಸು ತೇಲಿ ಬಂತು; ನಿಂತವರೆಲ್ಲ ಮುನ್ನುಗ್ಗಿದಾಗ ವಿಶಾಲಾಕ್ಷಿಯ ಕುತ್ತಿಗೆಗೆ ಬಿತ್ತೊಂದು ಕೈ! ಮತ್ತೊಂದು ಕೈ ಶೀಲಾಳ ಕೊರಳಿಗೆ! ವಿಶಾಲಾಕ್ಷಿ 'ಹಾಂ' ಎಂದು ಚೀರಿದಳು. ಕುತ್ತಿಗೆಗೆ ಕೈ ಹಾಕಿದವ ಮತ್ತೂ ಜೋರಾಗಿ ಚೀರಿ ಕಿರುಚಿದ. 'ಲಬೋ ಲಬೋ' ಮಾಡಿದ. ಅವನ ಕೈಯಿಂದ ರಕ್ತ ಸುರಿಯುತ್ತಿತ್ತು. ಕ್ಷಣಾರ್ಧದಲ್ಲಿ ಕಳ್ಳರಿಬ್ಬರೂ ಜಾಕ ಪ್ರಯಾಣಿಕರ ಹಿಡಿತಕ್ಕೆ ಸಿಕ್ಕಿದರು!

ಅಂದಿನ ಆಕಾಶವಾಣಿ ಸುದ್ದಿಯಲ್ಲಿ ಗೃಹಿಣಿಯೊಬ್ಬಳ ಅಪ್ರತಿಮ ಸಾಹಸ'ದ ಅನೌನ್ಸ್‌ಮೆಂಟ್ ಕೊಟ್ಟರು. ಮಾರನೇ ದಿನ ಪತ್ರಿಕೆಗಳ ಮುಖಪುಟದಲ್ಲಿ ವಿಶಾಲಾಕ್ಷಿಯ ಭಾವಚಿತ್ರ! ತಲೆಬರಹ ಹೀಗಿತ್ತು.

'ಮಂಗಳಸೂತ್ರ ಕಿತ್ತುಕೊಳ್ಳಬಂದ ಕಳ್ಳನೊಂದಿಗೆ ಹೊಡೆದಾಡಿದ ಧೀರೋದಾತ್ತ ಮಹಿಳೆ!"

ಆ ನಂತರ ಪತ್ರಿಕಾ ಸಂದರ್ಶನಗಳು, ವಾರಪತ್ರಿಕೆ–ಪಾಕ್ಷಿಕ–ಮಾಸಪತ್ರಿಕೆಗಳಲ್ಲಿ ಈ ಗೃಹಿಣಿಯರ ಧೈರ್ಯಸ್ಥೈರ್ಯದ ಪ್ರಶಂಸೆ! ಶ್ರೀಮತಿ ಶೀಲಾ ಕೇಸ್ಕರ್‌ರವರ ನೀಲ ಕರಿಮಣಿಗೆ ಹಾರ–ಬಂಗಾರದಲ್ಲಿ ಸುತ್ತಿದ್ದು, ಮಾಂಗಲ್ಯಕ್ಕೆ ಮುತ್ತು ಕೆಂಪು ಅಂಟಿಸಿದ್ದು ಕಾಣೆಯಾಗಿ ಉಳಿದಿದೆ. ಬಹುಶಃ ಕಳ್ಳ ಅದನ್ನು ಕೈ ಬದಲಾಯಿಸಿ ಸಾಗಿಸಿಬಿಟ್ಟಿರಬೇಕು. ಆದರೂ ಆಕೆ ಹಸನ್ಮುಖಿಯಾಗೇ ಇದ್ದಾರೆ ಚಿಂತೆಯಿಲ್ಲ. ಕಳ್ಳರು ಸಿಕ್ಕಿದರಲ್ಲ? ಇನ್ನು ಮುಂದಾದರೂ ಇಂಥವರು ಪಾಠ ಕಲಿತು, ಚೈನ್ ಸ್ನಾಚಿಂಗ್ ಹಾಬಿಗೆ ಪೂರ್ಣ ವಿರಾಮ ಹಾಕಿದರೆ ನನಗೆ ತೃಪ್ತಿ!" ಎನ್ನುತ್ತಾರೆ.

ಮಂದಿಯ ಬಾಯಲ್ಲೆಲ್ಲ ವಿಶಾಲಾಕ್ಷಿ–ಶೀಲಾ–ಮೈಥಿಲಿಯರೇ ಅವರ ಸಾಹಸ, ಅವರ ಸಮಯ ಸ್ಫೂರ್ತಿ, ಅವರ ತ್ಯಾಗ, ಇವುಗಳ ಪ್ರಶಂಸೆಯೇ "ಸಾಹಸೀ ಮಕ್ಕಳಿಗೆ ಪ್ರಶಸ್ತಿ ಕೊಡುವಂತೆ ಇವರಿಗೂ ಗಣರಾಜ್ಯ ದಿನದಂದು ಪ್ರಶಸ್ತಿ ಕೊಡಬಾರದೇಕೆ?" ಎಂದು ಕೇಳಿದರು. ('ಅದೇನೋ ಸರಿ, ಆದರೆ ಮಕ್ಕಳನ್ನು ಕೂರಿಸಿ ಮೆರವಣಿಗೆ ಮಾಡುವಂತೆ ಮಹಿಳೆಯರನ್ನು ಆನೆಯ ಮೇಲೆ ಕೂರಿಸಿದರೆ ಆನೆಗೇ ಹಾನಿಯಾದರೆ?' ಎಂದರು ಕೆಲವರು ಕುಹಕಿಗಳು!)

"ಅಲ್ರೀ ವಿಶಾಲಾಕ್ಷೀ? ಅದ್ಹೇಗೆ ಹೆದರಿಕೆ ಇಲ್ಲದೇ ಕಳ್ಳನ ಕೈನ ಪರಚಿದಿರಿ?

"ಹಹಹ! ನಾನೆಲ್ಲಿ ಪರಚಿದೆ? ನೀವುಗಳು ಬಂದುಬಿಟ್ಟಿರಿ. ನನ್ನ ಸೀರೆ ಬ್ರಾಡ್ ಬಾರ್ಡರೂ ಬ್ಯಾಡ್ ಬಾರ್ಡರ್ ಆಗಿ ಜಾರುತ್ತಿತ್ತು. ಆತುರದಲ್ಲಿ, ನಮ್ಮ ಯಜಮಾನ್ರ ಆಫೀಸ್ ಟೇಬಲ್ ಮೇಲಿದ್ದ ಎರಡು ಗುಂಡು ಸೂಜಿ ತೆಗೆದ್ಕೊಂಡು ಜೋಡಿಸಿದ ಸೆರಗಿಗೆ ಸಿಕ್ಕಿಸ್ಕೊಂಡೆ. ಅವನು ಜೋರಾಗಿ ಚೈನು ಎಳೆದಾಗ ಚೆನ್ನಾಗಿ ಚುಚ್ಚಿಕೊಂಡ್ತು!';

"ಹಹಹ !! ಹ ಹ ಹ ಹ!!

"ಅದ್ಸರಿ, ಶೀಲಾ, ಮಾಂಗಲ್ಯದ ಹಾರ ಕಳೆದ್ಕೊಂಡರೂ ನೀವು ಮನಸ್ಸಿಗೆ ಹಚ್ಕೊಂಡ ಹಾಗೆ ಕಾಣೆ?"

"ಹನ್ನೆರಡು ರೂಪಾಯಿನ ಹಾರಕ್ಕೆ ಏನು ಹಚ್ಕೊಳ್ಳಲಿ? ಅದು... ಪೂನಾದಲ್ಲಿ ಮಂಗಳವಾರ ಪೇಟೆ, ಫ್ಯಾನ್ಸೀ ಸ್ಟೋರ್‌ನಲ್ಲಿ ಕೊಂಡುಕೊಂಡ ಮಂಗಳಸೂತ್ರ !

"ಹಹಹ! ಹ ಹ ಹ ಹ !!"

* * *

ಸುನಂದಮ್ಮನವರು ಹಾಸ್ಯಮುಖದಲ್ಲಿ ಪರಿಚಯಿಸಿ ಕೊಡುತ್ತಲೇ ಸಮಾಜದ ವಿಮರ್ಶೆ ಮಾಡುವ ಮನೋವೃತ್ತಿಯವರು. ಒಂದು ಕಡೆ ಅವರು ಹೀಗೆ ಬರೆಯುತ್ತಾರೆ.

ಒಬ್ಬ ರೋಗಿಯ ಮನೆಗೆ ಪುರೋಹಿತರು ಬರುತ್ತಾರೆ. ಅದೇ ಸಮಯಕ್ಕೆ ವೈದ್ಯರೂ ಬಂದರಂತೆ. ಆದರೂ ಪುರೋಹಿತರು ಹಿಂದೆ ನಿಂತು ವೈದ್ಯರನ್ನು ಕುರಿತು "ಹಿ ಹ್ಹಿ, ! ನೀವು ಮೊದಲು ಹೋಗೋಣವಾಗಲಿ ನಿಮ್ಮ ಕೆಲಸ ಆದ ಮೇಲೆ ತಾನೇ ನಮ್ಮ ಕೆಲಸ ಎಂದರಂತೆ. !!

* * *

ನಾನು ಕುಡಿಯೋದು ಕಾಫಿನೇ ಆದ್ರೂ ಎಲ್ಲರೂ ಟಿ ಸುನಂದಮ್ಮ ಅಂತಾರೆ ಅಂತ ತಮ್ಮ ಇನಿಷಿಯಲ್ ಬಗ್ಗೆನೇ ತಮಾಷೆ ಮಾಡಿಕೊಳ್ಳುತ್ತಿದ್ದರು.

ಟಿ. ಸುನಂದಮ್ಮ ನವರ ಕೆಲವು ಆತ್ಮೀಯ ಚಿತ್ರಗಳು



ಡಾ॥ ಜೀವರಾಜ ಆಳ್ವರವರಿಂದ ಸನ್ಮಾನ



ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರಿಂದ ಸನ್ಮಾನ



ಸಮಗ್ರ ಹಾಸ್ಯ ಸಾಹಿತ್ಯ ಕೃತಿಯ ಬಿಡುಗಡೆ



ರಾಜ್ಯಪಾಲರಾಗಿದ್ದ ವಿ.ಎಸ್. ರಮಾದೇವಿಯವರೊಂದಿಗೆ



ಆಕಾಶವಾಣಿಯ ಕಾರ್ಯಕ್ರಮದಲ್ಲಿ



ಸಾಹಿತಿ ಗೆಳತಿಯರೊಂದಿಗೆ



ಸುನಂದಮ್ಮ ಸಾಹಿತ್ಯ ಪ್ರತಿಷ್ಠಾನದಿಂದ ಖ್ಯಾತ ಲೇಖಕಿ ಡಾ. ವೈದೇಹಿ ಅವರಿಗೆ
ಸುನಂದಮ್ಮ ಸಾಹಿತ್ಯ ಪ್ರಶಸ್ತಿ ಪ್ರದಾನ



ಸುನಂದಮ್ಮ ಸಾಹಿತ್ಯ ಸಂಪುಟ – 2 ಕೃತಿ ಲೋಕಾರ್ಪಣೆ ದಿನಾಂಕ : 11.01.2020

ಸಾಧಕರು



ಶ್ರೀಮತಿ ಟಿ. ಸುನಂದಮ್ಮನವರು ಕನ್ನಡದ ಮಹಿಳಾ ಸಾಹಿತಿಗಳಲ್ಲಿ ಅಗ್ರಗಣ್ಯರು. ಕಥೆ ಕಾದಂಬರಿಗಳಲ್ಲಿ ಆಸಕ್ತರಾಗಿದ್ದ ಕನ್ನಡದ ಓದುಗರಿಗೆ ತಮ್ಮ ತಿಳಿ ಹಾಸ್ಯದ ಲೇಖನಗಳ ಮೂಲಕ ಹಾಸ್ಯ ಸಾಹಿತ್ಯದ ಕಡೆಗೆ ಆಕರ್ಷಿತರಾಗುವಂತೆ ಮಾಡಿದ ಶ್ರೇಯಸ್ಸು ಟಿ. ಸುನಂದಮ್ಮನವರದು. ಹಾಸ್ಯಕ್ಕಾಗಿಯೇ ಮೀಸಲಾದ ಕೊರವಂಜಿ ಪತ್ರಿಕೆ ಪ್ರಾರಂಭವಾದಾಗ ಅದರಲ್ಲಿ ಅವರು ಬರೆದ ಹಾಸ್ಯಲೇಖನವೊಂದು ಪ್ರಕಟವಾಗಿ ಓದುಗರ ಮೆಚ್ಚುಗೆ ಗಳಿಸಿ ಅವರ ಹಾಸ್ಯ ಸಾಹಿತ್ಯ ರಚನೆಯನ್ನು ಮುಂದುವರೆಸಲು ನಾಂದಿಯಾಯಿತು. ಅಂದಿನಿಂದ ಅವರು ಹಾಸ್ಯ ಸಾಹಿತ್ಯ ರಚನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು ಹಾಗೂ ಪ್ರಸಿದ್ಧರಾದರು. ಕೇವಲ ಸಾಹಿತ್ಯ ರಚನೆಯಲ್ಲಿಯೇ ಅಲ್ಲದೆ ಸಾರ್ವಜನಿಕ ಜೀವನದಲ್ಲಿಯೂ ಅತೀವ ಆಸಕ್ತಿ ವಹಿಸುತ್ತಿದ್ದ ಅವರು ಕರ್ನಾಟಕ ಲೇಖಕಿಯರ ಸಂಘದ ಸ್ಥಾಪಕ ಆಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಲೇಖಕರು



ಪ್ರಸಿದ್ಧ ಕೈಗಾರಿಕೋದ್ಯಮಿಗಳೂ, ಸುಸಂಸ್ಕೃತರೂ ಹಾಗೂ ಸಾಹಿತ್ಯಾಭಿಮಾನಿಯೂ ಆಗಿರುವ ಶ್ರೀ ಎಂ.ನರಸಿಂಹಮೂರ್ತಿಯವರು ಟಿ. ಸುನಂದಮ್ಮ ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪಿಸಿ ತನ್ಮೂಲಕ ಸುನಂದಮ್ಮನವರ ಸಮಗ್ರ ಸಾಹಿತ್ಯವನ್ನು ಇಂದಿನ ಜನಾಂಗಕ್ಕೆ ತಲುಪಿಸಲು ಉದ್ದೇಶಿಸಿದ್ದಾರೆ. ಈ ಯೋಜನೆಯಂತೆ ಈಗಾಗಲೇ ಎರಡು ಸಂಪುಟಗಳು ಪ್ರಕಟವಾಗಿದ್ದು ಈಗ ಮೂರನೆಯ ಸಂಪುಟ ಪ್ರಕಟವಾಗುತ್ತಿದೆ. ಸುನಂದಮ್ಮನವರ ಹೆಸರಿನಲ್ಲಿ ಪ್ರತಿವರ್ಷ ಕನ್ನಡದ ಒಬ್ಬ ಲೇಖಕಿಗೆ ಪ್ರಶಸ್ತಿಯನ್ನು ನೀಡುವ ಯೋಜನೆಯನ್ನೂ ಪ್ರತಿಷ್ಠಾನವು ಹಾಕಿಕೊಂಡಿದೆ. ಅದರಂತೆ 2019ರ ಸಾಲಿನ ಪ್ರಶಸ್ತಿಯನ್ನು ಕನ್ನಡದ ಖ್ಯಾತ ಲೇಖಕಿ ವೈದೇಹಿಯವರಿಗೆ ನೀಡಲಾಗಿದೆ. 2022ರ ಸಾಲಿನ ಪ್ರಶಸ್ತಿಯನ್ನು ಟಿ. ಸುನಂದಮ್ಮನವರ ಹಾಸ್ಯ ಸಾಹಿತ್ಯ ಪರಂಪರೆಯನ್ನು ಮುನ್ನಡೆಸಿಕೊಂಡು ಬರುತ್ತಿರುವ ಹಾಸ್ಯ ಲೇಖಕಿ ಶ್ರೀಮತಿ ಭುವನೇಶ್ವರಿ ಹೆಗಡೆಯವರಿಗೆ ನೀಡಲಾಗುತ್ತಿದೆ.